# ಯುಗರಶ್ಮಿ

★ ಹಿಂದೂ-ಮುಸ್ಲಿಂ ಐಕ್ಯ
★ ಮೈತ್ರಿ ಸಂದೇಶ
★ ದೇವನೂ ಸೃಷ್ಟಿಯೂ
★ ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆ
★ ಬಾಬರಿ ಮಸ್ಜಿದ್: ಪರೀಕ್ಷೆಗಳಲ್ಲಿ ದೈವಿಕ ಹಸ್ತ
★ ಅಹ್ಮದಿಯಾ ಜಮಾಅತ್ ಮತ್ತು ಅದರ ವಿರೋಧಿಗಳು
★ ಮಸೀದಿ ಒಡೆಯುವ ಮುಸಲ್ಮಾನರು!

ತ್ರೈಮಾಸಿಕ

ಡಿಸೆಂಬರ್ 1992

ಬೆಲೆ: ರೂ. 3-00

ಒಂದು ಸಮುದಾಯದವರ ಮೇಲಿನ ದ್ವೇಷ ಅವರೊಡನೆ ಅನ್ಯಾಯವಾಗಿ ವರ್ತಿಸಲಿಕ್ಕೆ ನಿಮ್ಮನ್ನು ಪ್ರೇರೇಪಿಸದಿರಲಿ. ನೀವು ಸದಾ ನ್ಯಾಯ ಪಾಲಿಸಿರಿ. ಅದು ದೇವಭಕ್ತಿಗೆ ಅತಿ ಸಮೀಪವಾದುದು.

– ಪವಿತ್ರ ಖುರ್‌ಅನ್ (5:9)

# ಯುಗರಶ್ಮಿ ತ್ರೈಮಾಸಿಕ

10–23–1008/1 ಅನ್ಸಾರಿ ರಸ್ತೆ, ಬಂದರ್, ಮಂಗಳೂರು–575 001

ಬಿಡಿ ಪ್ರತಿ: ರೂ. 3-00

ವಾರ್ಷಿಕ ಚಂದಾ: ರೂ. 12–00

ಅಂಚೆ ಮೂಲಕ: ರೂ. 14–00

ವಿಷಯ ಸೂಚಿಕೆ — ಪುಟ


- ಹಿಂದೂ-ಮುಸ್ಲಿಂ ಐಕ್ಯ . . . . . 1
- ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು . 2
- ಮೈತ್ರಿ ಸಂದೇಶ . . . . 3
- ದೇವನೂ ಸೃಷ್ಟಿಯೂ . . . . 8
- ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆ . 12
- ಬಾಬರಿ ಮಸ್ಜಿದ್: ಪರೀಕ್ಷೆಗಳಲ್ಲಿ ದೈವಿಕ ಹಸ್ತ . 17
- ಅಹ್ಮದಿಯಾ ಜಮಾಅತ್ ಮತ್ತು ಅದರ ವಿರೋಧಿಗಳು 29
- ಮಸೀದಿ ಒಡೆಯುವ ಮುಸಲ್ಮಾನರು! . . . 38


## ತಿದ್ದೋಲೆ

| ಪುಟ | ಸಾಲು | ತಪ್ಪು | ಸರಿ |
|---|---|---|---|
| 2 | 1 | ಮುಪಮ್ಮದ್ | ಮುಹಮ್ಮದ್ |
| 3 | 23 | ಜೀವಿತದ | ಜೀವಿತದಲ್ಲಿ |
| 6 | 15 | ಧರ್ಮಾ ಗ್ರಂಥ | ಧರ್ಮಗ್ರಂಥ |
| 6 | 25 | ಸಂಭವನೀಯ | ಅಸಂಭವನೀಯ |
| 7 | 12 | ಪರಸ್ವರ | ಪರಸ್ಪರ |
| 9 | 25 | ಮಹೋನ್ನತವಾದ | ಮಹೋನ್ನತನಾದ |
| 13 | 27 | ಹ। ಕರ್ | ಹ। ಅಬೂಬಕರ್ |
| 13 | 27 | ಪುಷ್ಪೆ ರಟರು | ಪುಷ್ಪೈರ ಹೊರಟರು |
| 23 | 26 | ವಿಶ್ವಾಸಘಾತಕ | ವಿಶ್ವಾಸಘಾತ |
| 34 | 25 | ಇಸ್ಲಂ | ಇಸ್ಲಾಂ |

بسم الله الرحمن الرحيم

نحمده ونصلي على رسوله الكريم

# ಯುಗರಶ್ಮಿ

ಸಂಪಾದಕ: ಮುಹಮ್ಮದ್ ಯೂಸುಫ್

| ಸಂಪುಟ: 17 | ಡಿಸೆಂಬರ್ 1992 | ಫತಹ್ 1371 | ಸಂಚಿಕೆ: 1-2 |
|---|---|---|---|

## ಹಿಂದೂ - ಮುಸ್ಲಿಂ ಐಕ್ಯ

ಐಕ್ಯ ಅಥವಾ ಮೈತ್ರಿ ಅತ್ಯಮೂಲ್ಯವಾದುದಾಗಿದೆ. ಬೇರಾವ ರೀತಿಯಿಂದಲೂ ನಿವಾರಿಸಲು ಸಾಧ್ಯವಿಲ್ಲದ ವಿಪತ್ತುಗಳನ್ನೂ ಸಂಕಷ್ಟಗಳನ್ನೂ ಐಕ್ಯದಿಂದ ದೂರೀಕರಿಸಲು ಸಾಧ್ಯವೆಂಬುದು ಸ್ಪಷ್ಟ. ಆದುದರಿಂದ ಐಕ್ಯದ ಅನುಗ್ರಹೀತ ಫಲಗಳಿಂದ ನಮ್ಮನ್ನು ನಾವೇ ದೂರ ಸರಿಸುವುದು ವಿವೇಕಯುತವಲ್ಲ. ಹಿಂದೂಗಳೂ ಮುಸ್ಲಿಮರೂ ಈ ರಾಷ್ಟ್ರದ ಅವಿಭಾಜ್ಯ ಘಟಕಗಳಾದ ಎರಡು ಸಮುದಾಯಗಳಾಗಿವೆ. ಇವುಗಳಲ್ಲಿ ಯಾವುದಾದರೂ ಒಂದು ಸಮುದಾಯವು ಯಾವಾಗಲಾದರೂ ಒಂದಾಗಿ ಇನ್ನೊಂದು ಸಮುದಾಯವನ್ನು (ಹಿಂದುಗಳು ಒಟ್ಟುಗೂಡಿ ಮುಸ್ಲಿಮರನ್ನೋ ಅಥವಾ ಮುಸ್ಲಿಮರು ಒಟ್ಟು ಸೇರಿ ಹಿಂದುಗಳನ್ನೋ) ಈ ರಾಷ್ಟ್ರದಿಂದ ಹೊರದಬ್ಬಲು ಆಲೋಚಿಸುವುದಾದರೆ ಅದು ಅಸಂಭವನೀಯ ಹಾಗೂ ಭ್ರಮೆ ಮಾತ್ರವಾಗಿದೆ. ಬದಲಾಗಿ, ಈ ಎರಡೂ ಸಮುದಾಯಗಳನ್ನು ಒಟ್ಟುಗೂಡಿಸುವ ಬಂಧವು ಭೇದಿಸಲಾಗದಷ್ಟು ಶಕ್ತಿಯುತವಾಗಿದೆ. ಇವರಲ್ಲಿ ಒಂದು ಸಮುದಾಯದವರಿಗೆ ಏನಾದರೊಂದು ವಿಪತ್ತು ಸಂಭವಿಸಿದರೆ ಮತ್ತೊಂದು ಸಮುದಾಯದವರಿಗೆ ಸಹ ಅದರ ಬಾಧೆ ತಟ್ಟದಿರಲಿಕ್ಕಿಲ್ಲ. ಒಂದು ಸಮುದಾಯವು ಅಹಂಭಾವದಿಂದ ಮತ್ತೊಂದು ಸಮುದಾಯವನ್ನು ನಿಂದಿಸುವುದಾದರೆ ಅಥವಾ ಅವಹೇಳನವನ್ನುಂಟು ಮಾಡುವುದಾದರೆ ಆ ಸಮುದಾಯವು ಸಹ ಅದೇ ರೀತಿಯ ನಿಂದನೆಗೂ ಅವಹೇಳನಕ್ಕೂ ಗುರಿಯಾಗುವುದು. ಒಂದು ಸಮುದಾಯವು ಇನ್ನೊಂದು ಸಮುದಾಯದೊಡನೆ ಅನುಕಂಪವನ್ನು ತೋರಿಸದಿದ್ದರೆ ಅವರಿಗೆ ಇವರ ಅನುಕಂಪ ಲಭಿಸಲಾರದು. ಒಂದು ಸಮುದಾಯದ ಒಬ್ಬ ವ್ಯಕ್ತಿ ಇನ್ನೊಂದು ಸಮುದಾಯಕ್ಕೆ ನಷ್ಟವನ್ನುಂಟು ಮಾಡಲು ನೋಡುವನಾದರೆ, ಅವನು ತಾನು ಕುಳಿತಿರುವ ಮರದ ಕೊಂಬೆಯನ್ನು ತನ್ನ ಕೈಯಿಂದಲೇ ಕಡಿಯುವವನಂತಾಗುವನು.

– **ಹಝ್ರತ್ ಮಿರ್ಝಾ ಗುಲಾಂ ಅಹ್ಮದ್**
ಅಹ್ಮದಿಯಾ ಸಂಘಟನೆಯ ಸ್ಥಾಪಕರು

# ಮಹಮ್ಮದ್ ಪೈಗಂಬರರ

# ನುಡಿಮುತ್ತುಗಳು

★ ಎಲ್ಲ ಕೃತ್ಯಗಳು ಉದ್ದೇಶಗಳನ್ನು ಅವಲಂಬಿಸಿಕೊಂಡಿವೆ. ಎಲ್ಲರಿಗೂ ತಂತಮ್ಮ ಉದ್ದೇಶಕ್ಕನುಗುಣವಾದ ಪ್ರತಿಫಲ ಲಭಿಸುವುದು.

★ ಅಲ್ಲಾಹನು ನೋಡುವುದು ನಿಮ್ಮ ರೂಪವನ್ನೂ ಸಂಪತ್ತನ್ನೂ ಅಲ್ಲ; ನಿಮ್ಮ ಹೃದಯವನ್ನೂ ಕೃತ್ಯವನ್ನೂ ಆಗಿದೆ.

★ ಎಲ್ಲ ಮುಸ್ಲಿಮರೂ ತಮ್ಮ ಮೇಲಧಿಕಾರಿಯ ಆಜ್ಞೆಯನ್ನು - ಅದು ಅವನಿಗೆ ಹಿಡಿಸಿದರೂ ಇಲ್ಲವಾದರೂ - ಅಲ್ಲಾಹನ ಅಥವಾ ಪ್ರವಾದಿಯ (ಅಥವಾ ಉನ್ನತಾಧಿಕಾರಿಯ) ಆಜ್ಞೆಗೆ ವಿರುದ್ಧವಲ್ಲದಿದ್ದರೆ ಅನುಸರಿಸಬೇಕು.

★ ನಿಮ್ಮ ಸಂತಾನಗಳನ್ನು ಗೌರವಿಸಿರಿ; ಅವರಿಗೆ ಉತ್ತಮ ಶಿಕ್ಷಣ ನೀಡಿರಿ.

★ ಪಾಪದ ಬಗ್ಗೆ ಪಶ್ಚಾತ್ತಾಪಪಡುವವನು ಪಾಪ ಮಾಡದವನ ಹಾಗೆ.

★ ಅಲ್ಲಾಹನ ತಕ್ಕಡಿಯಲ್ಲಿ ಉತ್ತಮ ಸ್ವಭಾವಕ್ಕಿಂತ ಭಾರವಿರುವ ಬೇರೊಂದು ವಸ್ತುವಿಲ್ಲ.

★ ಬಡವರನ್ನು ನಿರ್ಲಕ್ಷಿಸಿ ಧನಿಕರನ್ನು ಮಾತ್ರ ಆಮಂತ್ರಿಸುವ ಮದುವೆಯ ಔತಣ ಬಹಳ ಕೆಟ್ಟದ್ದಾಗಿದೆ. ಆಮಂತ್ರಣವನ್ನು ಸ್ವೀಕರಿಸದವನು ಅಲ್ಲಾಹ್ ಮತ್ತು ಪ್ರವಾದಿಗೆ ಅವಿಧೇಯನಾಗಿರುತ್ತಾನೆ.

★ ನೀವು ಜನರಿಗೆ ಕೇವಲ ನಿಮ್ಮ ಧನದಿಂದ ಸಹಾಯ ಮಾಡಲಾರಿರಿ. ನೀವು ಪ್ರಸನ್ನವದನರಾಗಿಯೂ ಸತ್‌ಸ್ವಭಾವದಿಂದಲೂ ವರ್ತಿಸಿ ಜನರಿಗೆ ಸಹಾಯ ಮಾಡಿರಿ.

★ ಜನರಿಗೆ ಕೃತಜ್ಞನಾಗಿರದವನು ಅಲ್ಲಾಹನಿಗೂ ಕೃತಜ್ಞನಾಗಲಾರ.

★ ತನ್ನ ತಂದೆತಾಯಂದಿರು ಅಥವಾ ಅವರ ಪೈಕಿ ಒಬ್ಬರು ವೃದ್ಧಾಪ್ಯವನ್ನು ತಲಪುವ ತನಕ ತಾನು ಜೀವಿಸಿದ್ದರೂ ಅವರ ಸೇವೆಯನ್ನು ಮಾಡಿ ಸ್ವರ್ಗವನ್ನು ಗಳಿಸಲು ಅಸಮರ್ಥನಾದವನು ಬಹಳ ದರಿದ್ರನು.

# ಮೈತ್ರಿ ಸಂದೇಶ

**ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಅವರು1908ನೇ ಇಸವಿಯಲ್ಲಿ ತನ್ನ ಮರಣಕ್ಕೆ ಎರಡು ದಿವಸ ಮೊದಲು ಭಾರತೀಯರಿಗೆ ನೀಡಿದ ಅಂತ್ಯ ಸಂದೇಶದ ಕೆಲವು ಭಾಗಗಳು.**

ಸ್ನೇಹಿತರೇ, ಹಿಂದುಗಳೋ, ಮುಸ್ಲಿಮರೋ ಆದ ನಾವೆಲ್ಲರೂ ನೂರಾರು ವಿಶ್ವಾಸಾಭಿಪ್ರಾಯ ವೈಪರೀತ್ಯಗಳಿಂದ ಕೂಡಿದವರಾಗಿದ್ದರೂ ಈ ಪ್ರಪಂಚದ ಸೃಷ್ಟಿಕರ್ತನೂ ಪ್ರಭುವೂ ಆದ ಪರಮಾತ್ಮನಲ್ಲಿ ವಿಶ್ವಾಸವಿಡುವ ವಿಷಯದಲ್ಲಿ ಒಂದಾಗುತ್ತೇವೆ. ಹಾಗೆಯೇ ನಾವೆಲ್ಲರೂ ಮನುಷ್ಯರೆಂದು ಮಾತ್ರವಲ್ಲ ಒಂದೇ ದೇಶದಲ್ಲಿ ವಾಸಿಸುವುದರಿಂದಲೂ ಪರಸ್ಪರ ನೆರೆಕರೆಯವರೆಂಬ ನೆಲೆಯಲ್ಲಿಯೂ ಸಾಮೂಹಿಕವಾಗಿ ಅಭಿವೃದ್ಧಿಗಳಿಗಾಗಿ ಒಂದಾಗುತ್ತೇವೆ. ಆದುದರಿಂದ ನಾವು ಆತ್ಮೀಯತೆಯಿಂದಲೂ ನಿಷ್ಕಳಂಕತೆಯಿಂದಲೂ ಪರಸ್ಪರ ಮಿತ್ರರಂತೆ ವರ್ತಿಸಿ, ಧಾರ್ಮಿಕವೂ ಲೌಕಿಕವೂ ಆದ ಎಲ್ಲ ಸಂಕಷ್ಟಗಳಲ್ಲಿ ಅನ್ಯೋನ್ಯ ಸಹಾನುಭೂತಿಯನ್ನು ಪ್ರಕಟಿಸಿ, ಒಂದೇ ಶರೀರದ ಅವಯವಗಳಂತೆ ಪರಸ್ಪರ ಸಹಕರಿಸಬೇಕಾದುದು ನಮ್ಮ ಕರ್ತವ್ಯವಾಗಿದೆ.

ಪ್ರಿಯ ದೇಶಬಾಂಧವರೇ, ಸಹಾನುಭೂತಿಯ ಉಪದೇಶವನ್ನೀಯದ ಧರ್ಮವು ಯಥಾರ್ಥ ಧರ್ಮವಲ್ಲ. ಹಾಗೆಯೇ ಸಹಾನುಭೂತಿಯನ್ನು ತೋರಿಸದ ಮನುಷ್ಯನು ಮನುಷ್ಯನೆಂದು ಕರೆಯಲ್ಪಡಲು ಅರ್ಹನಲ್ಲ. ಪರಮಾತ್ಮನು ತನ್ನ ಅನುಗ್ರಹವನ್ನು ಯಾವೊಂದು ಜಾತಿಯವರಿಗೂ ನೀಡದಿರಲಿಲ್ಲ. ಆರ್ಯಾವರ್ತದ ಪೂರ್ವಿಕರಿಗೆ ಅವನು ಏನೆಲ್ಲ ಶಕ್ತಿಗಳನ್ನೂ ಬೋಧನೆಗಳನ್ನೂ ಇತ್ತಿದ್ದನೋ ಅಂಥ ಶಕ್ತಿಗಳನ್ನೂ ಬೋಧನೆಗಳನ್ನೂ ಅವನು ಅರಬಿಯರಿಗೂ ಪಾರ್ಸಿಯರಿಗೂ ಸಿರಿಯಾದವರಿಗೂ ಚೀನೀಯರಿಗೂ ಜಪಾನಿಯರಿಗೂ ಯುರೋಪ್ಯನರಿಗೂ ಅಮೇರಿಕನರಿಗೂ ಇತ್ತಿರುವನು. ಸಕಲ ಜನಾಂಗಗಳಿಗೂ ದೇವನ ಭೂಮಿಯು ಒಂದು ವಿಶಾಲವಾದ ಪ್ರಾಂಗಣದಂತಿದೆ. ಹಾಗೆಯೇ ಎಲ್ಲರಿಗೂ ಸೂರ್ಯ, ಚಂದ್ರ ಮತ್ತು ನಕ್ಷತ್ರಗಳು ಪ್ರಕಾಶವನ್ನು ಕೊಡುವತ್ತವಲ್ಲದೆ ಅವುಗಳಿಗೆ ದೇವನು ನಿಶ್ಚಯಿಸಿದ ಮತ್ತಿತರ ಕಾರ್ಯಗಳನ್ನು ಸಹ ಅವು ನಿರ್ವಹಿಸುತ್ತವೆ. ಎಲ್ಲ ಜಾತಿಯವರೂ ಪರಮಾತ್ಮನಿಂದ ಸೃಷ್ಟಿಸಲ್ಪಟ್ಟ ವಾಯು, ನೀರು, ಬೆಂಕಿ, ಮಣ್ಣು ಎಂಬಿತ್ಯಾದಿಗಳಿಂದ ಪ್ರಯೋಜನವನ್ನು ಪಡೆಯುತ್ತಾರೆ. ಹಾಗೆಯೇ ಭೂಮಿಯ ಉತ್ಪತ್ತಿಗಳಾದ ಧಾನ್ಯಗಳನ್ನೂ ಮೂಲಿಕೆಗಳನ್ನೂ ಫಲಪುಷ್ಪಾದಿಗಳನ್ನೂ ತಮ್ಮ ಪ್ರಯೋಜನಕ್ಕಾಗಿ ಉಪಯೋಗಿಸುತ್ತಾರೆ. ಪರಮಾತ್ಮನ ಈ ವಿಶಾಲವಾದ ಉದಾರತೆಯು ನಮಗೆ ಕಲಿಸಿಕೊಡುವುದೇನೆಂದರೆ ನಾವು ಸಹ ಮನುಷ್ಯ ಕುಲಕ್ಕೆ ಒಳಿತನ್ನುಂಟುಮಾಡಬೇಕು ಹಾಗೂ ಸಂಕುಚಿತ ಮನೋಭಾವವಾಗಲಿ ಅಸಹಾನುಭೂತಿಯಾಗಲಿ ನಮ್ಮಲ್ಲಿ ಇರಬಾರದು.

ಸ್ನೇಹಿತರೇ, ನಮ್ಮಲ್ಲಿ ಯಾವುದಾದರೊಂದು ಸಮುದಾಯದವರು ಪರಮಾತ್ಮನ ಈ ದಿವ್ಯ ಮಾದರಿಯನ್ನು ಗೌರವಿಸದೆಯೂ ಅವನ ಪಾವನ ಗುಣಗಳನ್ನನುಸರಿಸಿ ತಮ್ಮ ನಡವಳಿಕೆಗಳನ್ನು ರೂಪಿಸದೆಯೂ ಇದ್ದರೆ ಅವರು ಬೇಗನೇ ನಾಶವಾಗುವರು. ಈ ಉಲ್ಲಂಘನೆಯ ದುಷ್ಪರಿಣಾಮಗಳು ಅವರ ಮೇಲೆ ಮಾತ್ರವಲ್ಲ, ಅವರ ಭಾವಿ ಸಂತಾನಗಳ ಮೇಲೆಯೂ ಉಂಟಾಗುವುದು. ಪರಮಾತ್ಮನ ಗುಣ ವಿಶೇಷಗಳನ್ನು ಗ್ರಹಣಮಾಡಿ ತನ್ನ ಜೀವಿತದ ಪ್ರತಿಬಿಂಬಿಸುವುದರ ಮೂಲಕ ಮನುಷ್ಯನ ಅಸ್ತಿತ್ವ ಬಾಕಿಯಾಗುವುದು. ಸಮಸ್ತ ಶಾಂತಿಯ ಮೂಲವಾದ ದೈವಿಕ ಗುಣಗಳಿಗನುಸಾರವಾಗಿ ಜೀವನ ಕ್ರಮವನ್ನು ಅಳವಡಿಸುವುದರಲ್ಲಿ ಮನುಷ್ಯನ ಭೌತಿಕ ಮತ್ತು ಆಧ್ಯಾತ್ಮಿಕ ಜೀವನ ಅವಲಂಬಿಸಿದೆ. ಲೋಕಾರಂಭ ಮೊದಲ್ಗೊಂಡು ಎಲ್ಲ ರಾಜ್ಯಗಳ ಸತ್ಯಸಂಧರಾದ ದೇವದಾಸರು ಇದನ್ನೇ ಸಾಕ್ಷೀಕರಿಸಿರುವರು.

ಈ ವಿಶಾಲವಾದ ತತ್ವವನ್ನು ಪ್ರಬೋಧಿಸುವ ಒಂದು ವಾಕ್ಯದಿಂದ ಪರಮಾತ್ಮನು ಪವಿತ್ರ ಖುರ್‌ಆನಿನ "ಫಾತಿಹ" ಎಂಬ ಪ್ರಥಮ ಅಧ್ಯಾಯವನ್ನು ಆರಂಭಿಸಿರು

ವನು. ನೋಡಿರಿ : "ಅಲ್‌ಹಮ್ದು ಲಿಲ್ಲಾಹಿ ರಬ್ಬಿಲ್ ಆಲಮೀನ್" ಅಂದರೆ "ಸರ್ವಸ್ತೋತ್ರಗಳು ಅಖಿಲಲೋಕ ಗಳ ಸೃಷ್ಟಿಕರ್ತನೂ ರಕ್ಷಕನೂ ಆದ ದೇವನಿಗೆ ಸಲ್ಲುವುವು". ಇಲ್ಲಿ "ಲೋಕಗಳು"ಎಂಬ ಪದದಲ್ಲಿ ಎಲ್ಲ ಜನಾಂದವರೂ ವಿವಿಧ ಕಾಲದವರೂ ವಿವಿಧ ರಾಜ್ಯದವರೂ ಒಳಪಡುತ್ತಾರೆ. ದೇವಾನುಗ್ರಹಗಳು ತಮಗೆ ಮಾತ್ರ ಲಭಿಸಿರುವುದೆಂದೋ, ಇತರ ಜನಾಂಗದವರು ಮನುಷ್ಯ ವರ್ಗದಲ್ಲಿ ಒಳಪಟ್ಟವರಲ್ಲವೆಂದೋ ದೇವರು ಅವರನ್ನು ಸೃಷ್ಟಿಸಿದ ನಂತರ ಅವರನ್ನು ಮರೆತಿರುವನೆಂದೋ ಕೈಬಿಟ್ಟಿರು ವನೆಂದೋ ಅವರು ಅವನ ಸೃಷ್ಟಿಗಳೇ ಅಲ್ಲವೆಂಬ ರೀತಿಯಲ್ಲಿ ದೇವರ ಅನುಗ್ರಹಗಳಲ್ಲಿ ಅವರಿಗೆ ಯಾವ ಸಹಭಾಗಿತ್ವ ಕೂಡ ಇಲ್ಲವೆಂದೋ ಭಾವಿಸಿ, ದೇವರ ಸರ್ವವ್ಯಾಪಕವಾದ ಕೃಪಾಕಟಾಕ್ಷವನ್ನು ಅವಗಣಿಸುವ ಎಲ್ಲ ಜಾತಿಯವರಿಗೂ ಈ ಖುರ್‌ಆನ್ ವಾಕ್ಯ ಒಂದು ಖಂಡನೆಯಾಗಿದೆ ....... ಸರ್ವ ಲೋಕಗಳ ರಕ್ಷಕನೂ ಪರಿಪಾಲಕನೂ ಆದ ಪರಮಾತ್ಮನು ಪಕ್ಷಪಾತವನ್ನು ತೋರಿಸುವ ರೀತಿಯಲ್ಲಿ ಒಂದು ಪ್ರತ್ಯೇಕ ಜನಾಂಗದವರಲ್ಲಿ ಮಾತ್ರ ಶ್ರದ್ಧೆಯಿಟ್ಟಿದ್ದಾನೆಂಬುದು ತುಂಬಾ ಅಸಂಗತವಾಗಿದೆ. ಇಂಥ ಅಸಂಬದ್ಧ ಸಿದ್ಧಾಂತಗಳನ್ನು ಖಂಡಿಸುವುದಕ್ಕಾಗಿ "ಸರ್ವಸ್ತೋತ್ರಗಳು ಅಖಿಲ ಲೋಕಗಳ ರಕ್ಷಕನೂ ಪರಿಪಾಲಕನೂ ಆದ ದೇವನಿಗೆ ಸಲ್ಲುವುವು" ಎಂಬ ವಚನದಿಂದ ಪವಿತ್ರ ಖುರ್‌ಆನ್ ಪ್ರಾರಂಭವಾಗುತ್ತದೆ.

ಪರಮಾತ್ಮನು ಯಾವುದಾದರೊಂದು ಪ್ರತ್ಯೇಕ ಜನಾಂಗದವರಲ್ಲಿ ಅಥವಾ ಪ್ರತ್ಯೇಕ ದೇಶದಲ್ಲಿ ಮಾತ್ರ ಪ್ರವಾದಿಗಳನ್ನು ನಿಯೋಜಿಸಿರುವನೆಂಬ ವಿಶ್ವಾಸವು ತಪ್ಪೆಂದು ಪವಿತ್ರ ಖುರ್‌ಆನಿನಲ್ಲಿ ಹಲವು ಸ್ಥಳಗಳಲ್ಲಿ ಅಲ್ಲಾಹನು ನುಡಿದಿರುವನು. ಆಧ್ಯಾತ್ಮಿಕ ಜ್ಞಾನವನ್ನು ನೀಡುವುದರಲ್ಲಿ ಯಾವ ಗೋತ್ರದವರನ್ನಾಗಲಿ ದೇಶದವರನ್ನಾಗಲಿ ಅವನು ಮರೆಯಲಿಲ್ಲ. ಈ ಸಂಗತಿಯನ್ನು ಪವಿತ್ರ ಖುರ್‌ಆನಿನಲ್ಲಿ ಹಲವೆಡೆಗಳಲ್ಲಿ ಉಪಯುಕ್ತ ಉದಾಹರಣೆಗಳಿಂದಲೂ ದೃಷ್ಟಾಂತ ಗಳಿಂದಲೂ ಸ್ಪಷ್ಟಪಡಿಸಲಾಗಿದೆ. ಸರ್ವಶಕ್ತನಾದ ಪರಮಾತ್ಮನು ಎಲ್ಲ ಸಮುದಾಯಗಳಿಗೂ ದೇಶದವರಿಗೂ ಅವರ ಭೌತಿಕಾವಶ್ಯಕತೆಗಳನ್ನು ಪೂರೈಸಲು ಸಕಲ ವಿಧದ ಸೌಕರ್ಯಗಳನ್ನು ಒದಗಿಸಿಕೊಟ್ಟಿರುವ ಹಾಗೆಯೇ ಎಲ್ಲ ಜನಾಂಗದವರ ಮತ್ತು ಎಲ್ಲ ದೇಶದವರ ಆಧ್ಯಾತ್ಮಿಕ ಅವಶ್ಯಕತೆಗಳಿಗಾಗಿಯೂ ಎಲ್ಲ ಏರ್ಪಾಡುಗಳನ್ನು ಮಾಡಿರುವನು. ಇದರ ಕುರಿತು ಪವಿತ್ರ ಖುರ್‌ಆನಿನ ಒಂದೆಡೆಯಲ್ಲಿ ಹೀಗೆ ಹೇಳಲಾಗಿದೆ: "ವ ಇನ್ ಮಿನ್ ಉಮ್ಮತಿನ್ ಇಲ್ಲಾ ಖಲಾ ಫೀಹಾ ನಧೀರ್" ಅಂದರೆ "ಒಬ್ಬ ಮುನ್ನೆಚ್ಚರಿಕೆಯನ್ನೀಯುವವನು(ಉಪದೇಶಕನು) ಬಂದಿರದ ಒಂದು ಸಮುದಾಯವಾಗಲಿ ಇಲ್ಲ" (35:25)

ಆದುದರಿಂದ ನಾವೆಲ್ಲರೂ ವಿಶ್ವಾಸವಿಡಬೇಕಾದ ಸಕಲ ಸಂಪೂರ್ಣನೂ ಸತ್ಯ ಸ್ವರೂಪವನೂ ಆದ ಪರಮಾತ್ಮನು ಸರ್ವಲೋಕಗಳ ಸೃಷ್ಟಿಕರ್ತನೂ ಪಾಲಕನೂ ಆಗಿದ್ದಾನೆಂಬುದು ಅವಿತರ್ಕ್ಯವಾಗಿದೆ. ಅವನ ಪರಿಪಾಲನೆಯು ಯಾವುದಾದರೊಂದು ಪ್ರತ್ಯೇಕ ಜಾತಿಗೋ ಪ್ರತ್ಯೇಕ ಕಾಲಕ್ಕೋ ಪ್ರತ್ಯೇಕ ರಾಜ್ಯಕ್ಕೋ ಸೀಮಿತವಾದುದಲ್ಲ. ಅವನು ಎಲ್ಲ ಜಾತಿಯವರ ಎಲ್ಲ ಕಾಲಗಳ ಎಲ್ಲ ರಾಜ್ಯಗಳ ಪಾಲಕನಾಗಿದ್ದಾನೆ. ಭೌತಿಕವೂ ಆಧ್ಯಾತ್ಮಿಕವೂ ಆದ ಸರ್ವಶಕ್ತಿಗಳ ಆರಂಭ ಅವನಿಂದಾಗಿದೆ. ಎಲ್ಲ ಸೃಷ್ಟಿಗಳನ್ನು ಸಾಕಿಸಲಹುವವನು ಅವನೇ ಆಗಿದ್ದಾನೆ. ಎಲ್ಲ ವಸ್ತುಗಳು ಅವನನ್ನೇ ಆಶ್ರಯಿಸಿಕೊಂಡಿವೆ. ಅವನ ಅನುಗ್ರಹವು ಸಕಲ ಜಾತಿಗಳಲ್ಲಿಯೂ ಸಕಲ ರಾಜ್ಯಗಳಲ್ಲಿಯೂ ಸಕಲ ಯುಗಗಳಲ್ಲಿಯೂ ಸರ್ವ ವ್ಯಾಪಕವಾಗಿದೆ. ಇದು ಹೀಗೆ ಇರುವುದೇಕೆಂದರೆ ಅವನ ಕೃಪಾಪಾಲನೆಗೆ ಸಂಬಂಧಿಸಿ ಯಾವೊಂದು ಜನತೆಯೂ ಆರೋಪಿಸುವ ಸಂದರ್ಭ ಬರಬಾರದೆಂಬುದಕ್ಕೆ. ಪರಮಾತ್ಮನು ಅವನ ಅನುಗ್ರಹಗಳನ್ನು ಇತರರಿಗಲ್ಲದೆ ತಮಗೆ ಕರುಣಿಸಲಿಲ್ಲವೆಂದೋ, ಪರಮಾತ್ಮನು ತನ್ನ ವಚನ, ಪ್ರಕಟನೆ ಹಾಗೂ ದೃಷ್ಟಾಂತಗಳ ಮುಖಾಂತರ ಹಿಂದಿನ ಕಾಲದಲ್ಲಿ ಅಲ್ಲದೆ ತಮ್ಮ ಕಾಲದಲ್ಲಿ ಪ್ರತ್ಯಕ್ಷನಾಗಲಿಲ್ಲವೆಂದೋ ಯಾವೊಂದು ಜನಾಂಗಕ್ಕೂ ಹೇಳುವರೆ ಅವನು ಎಡೆಗೊಡಲಿಲ್ಲ. ಹಾಗೆ ಆ ಸರ್ವವಲ್ಲಭನು ತನ್ನ ಭೌತಿಕವೂ ಆಧ್ಯಾತ್ಮಿಕವೂ ಆದ ಅನುಗ್ರಹಗಳಿಂದ ಒಂದು ಸಮುದಾಯವನ್ನಾಗಲಿ ಒಂದು ಕಾಲವನ್ನಾಗಲಿ ಬಿಡದೆ ತನ್ನ ಕೃಪಾ ವಿತರಣೆಯನ್ನು ಸರ್ವವ್ಯಾಪಕವನ್ನಾಗಿಯೂ ನಿತ್ಯವನ್ನಾಗಿಯೂ ಮಾಡಿರು ವನು.

ಹೀಗೆ ಪರಮಾತ್ಮನ ಅನುಗ್ರಹ ನಿಸ್ಸೀಮವೂ ಸರ್ವವ್ಯಾಪಕವೂ ಆಗಿರುವಾಗ ಅವನ ದಿವ್ಯಗುಣಗಳನ್ನು ನಾವು ನಮ್ಮ ಜೀವನ ಕ್ರಮದಲ್ಲಿ ತಂದು, ಅದಕ್ಕನುಸಾರವಾಗಿ ನಮ್ಮ ಸ್ವಭಾವಗಳನ್ನು ಕ್ರಮಪಡಿಸಬೇಕಾದುದು ಅತ್ಯಾವಶ್ಯಕವಾಗಿದೆ. ಎಲೈ ದೇಶಭಾಂದವರೇ, ಈ ವಿಶಾಲವಾದ ಮನೋಭಾವದೆಡೆಗೆ ನಿಮ್ಮನ್ನು ಆಮಂತ್ರಿಸಲಿಕ್ಕಾಗಿ "ಮೈತ್ರಿ ಸಂದೇಶ" ಎಂಬ ಈ ವಿಜ್ಞಾಪನೆಯನ್ನು ನಿಮ್ಮ ಸಮಕ್ಷಮ ಸಮರ್ಪಿಸುವೆನು. ಸ್ನೇಹಭಾವದ ಈ ಆಮಂತ್ರಣದ ಮರೆಯಲ್ಲಿ ನನಗೆ ಸ್ವಾರ್ಥಪರವಾದ ಉದ್ದೇಶವೇನಾದರೂ ಉಂಟೆಂದು ನೀವು ಭಾವಿಸದಿರಲಿಕ್ಕಾಗಿ, ಸರ್ವಶಕ್ತನಾದ ಪರಮಾತ್ಮನೇ ನಿಮ್ಮ ಹೃದಯಗಳಲ್ಲಿ ಸತ್ಯವನ್ನು ಪ್ರಕಟಿಸಲಿಯೆಂದೂ ನಿಮ್ಮ ಕ್ಷೇಮಾಭಿವೃದ್ಧಿಗಳಿಗಾಗಿ ನನ್ನ ಹೃದಯದಲ್ಲಿರುವ ಆ ಇಚ್ಛೆಯ ರಹಸ್ಯವನ್ನು ಅವನೇ ನಿಮಗೆ ಮನಗಾಣಿಸಲಿಯೆಂದೂ ನಾನು ಸಹೃದಯತೆಯಿಂದ ಪ್ರಾರ್ಥಿಸುತ್ತೇನೆ.

ಪ್ರಿಯ ಸಹೃದಯರೇ, ಒಂದು ಸಮುದಾಯವು ಅನ್ಯ ಸಮುದಾಯಗಳ ಪ್ರವಾದಿಗಳನ್ನು ನಿಂದಿಸುವುದೂ ಆಕ್ಷೇಪಿಸುವುದೂ ಕಾಲಾಂತರದಲ್ಲಿ ದೇಹಕ್ಕೆ ಮಾತ್ರವಲ್ಲ ಆತ್ಮಕ್ಕೆ ಸಹ ನಾಶವನ್ನುಂಟುಮಾಡಿ ಧಾರ್ಮಿಕವೂ ಲೌಕಿಕವೂ ಆದ ಜೀವಿತಕ್ಕೇನೇ ಹಾನಿಯುನ್ನುಂಟು ಮಾಡುವ ಒಂದು ಭಯಂಕರ ವಿಷವೆಂದು ದೀರ್ಘಕಾಲದ ಅನುಭವಗಳೂ ಆಗಿಂದಾಗ್ಗೆ ಸಂಭವಿಸುತ್ತಿರುವ ಪರೀಕ್ಷಾ ಸಂಭವಗಳೂ ನಮಗೆ ರುಜುಪಡಿಸಿಕೊಡುತ್ತವೆ. ಯಾವ ರಾಜ್ಯ ನಿವಾಸಿಗಳು ಅನ್ಯೋನ್ಯ ಮತಾಚಾರ್ಯರನ್ನು ಅವಹೇಳಿಸುತ್ತಾರೋ ಅವರಿಗೆ ಸಮಾಧಾನದ ಜೀವಿತ ಸಾಧ್ಯವಲ್ಲ. ಒಂದು ಸಮುದಾಯವು ಮತ್ತೊಂದು ಸಮುದಾಯದ ಪ್ರವಾದಿಗಳನ್ನು ಅಥವಾ ಎರಡು ಸಮುದಾಯಗಳು ಅನ್ಯೋನ್ಯ ಪ್ರವಾದಿಗಳನ್ನೂ ಋಷಿಗಳನ್ನೂ ಅವತಾರ ಪುರುಷರನ್ನೂ ಆಕ್ಷೇಪಿಸುವುದಾದರೆ, ದೂಷಿಸುವುದಾದರೆ ಆ ಸಮುದಾಯಗಳೆಡೆಯಲ್ಲಿ ಎಂದಿಗೂ ಪರಸ್ಪರ ಯಥಾರ್ಥ ಐಕ್ಯ ಮತ್ತು ಮೈತ್ರಿಯೇರ್ಪಡಲಾರದು. ತಾನು ನಂಬಿ ಆದರಿಸುವ ಪ್ರವಾದಿಯನ್ನೋ ಮತಾಚಾರ್ಯನನ್ನೋ ಇನ್ನೊಬ್ಬನು ನಿಂದಿಸುವುದನ್ನು ಕೇಳಿದಾಗ ಯಾರಿಗೆ ತಾನೆ ರೋಷವುಂಟಾಗಲಾರದು? ಮುಸ್ಲಿಮರು ತಮ್ಮ ಪ್ರವಾದಿಯನ್ನು ದೇವನೆಂದೋ, ದೇವಪುತ್ರನೆಂದೋ ಭಾವಿಸುವುದಿಲ್ಲವಾದರೂ ಅವರು ಆ ಪುಣ್ಯಾತ್ಮರನ್ನು ಭೂಜಾತರಾದ ಸಕಲ ಮಹಾತ್ಮರಿಗಿಂತ ಶ್ರೇಷ್ಠನೆಂದು ನಂಬುವ ಕಾರಣ ಆ ಮಹಾತ್ಮರಿಗೆ ಸಂಬಂಧಿಸಿ ಮಾತನಾಡುವಾಗ ಗೌರವಾದರಗಳಿಂದ ಕೂಡಿರದ ಪಕ್ಷದಲ್ಲಿ ಒಬ್ಬ ಯಥಾರ್ಥ ಮುಸ್ಲಿಮನೊಡನೆ ಸ್ನೇಹ ಸಂಬಂಧವನ್ನು ಸ್ಥಾಪಿಸಲು ಒಬ್ಬ ಮುಸ್ಲಿಮೇತರನಿಗೆ ಒಮ್ಮೆಯೂ ಸಾಧ್ಯವಿಲ್ಲ.

ನಾವು ಇತರ ಸಮುದಾಯಗಳ ಪ್ರವಾದಿಗಳನ್ನು ಎಂದಿಗೂ ನಿಂದಿಸುವುದಿಲ್ಲ. ತದ್ವಿರುದ್ಧವಾಗಿ, ಪ್ರಪಂಚದಲ್ಲಿ ಹಲವು ಕಾಲಘಟ್ಟಗಳಲ್ಲಿ ವಿವಿಧ ಜಾತಿಗಳೆಡೆಯಲ್ಲಿ ಆಗಮಿಸಿದ ಎಲ್ಲ ಪ್ರವಾದಿಗಳನ್ನೂ ನಂಬಿ ಆದರಿಸುತ್ತೇವೆ. ಆ ಮಹಾತ್ಮರನ್ನು ಕೋಟಿಗಟ್ಟಲೆ ಜನರು ನಂಬಿ, ಅವರ ಹೆಸರಿನಲ್ಲಿ ಲೋಕದ ಯಾವುದಾದರೊಂದು ಕಡೆಯಲ್ಲಿರುವ ಒಂದು ಜನಾಂಗ ಅನೇಕ ವರ್ಷಗಳಿಂದ ಸ್ನೇಹಾದರಗಳನ್ನು ಅರ್ಪಿಸುತ್ತಾ ಬರುತ್ತಿರುವುದೇ ಆ ಮಹಾತ್ಮರ ಸತ್ಯತೆಗೆ ತಕ್ಕುದಾದ ಸಾಕ್ಷ್ಯವಾಗಿದೆ. ಅವರು ದೇವ ನಿಯುಕ್ತರಾದ ಸತ್ಯಪುರುಷರಾಗಿಲ್ಲವಾಗಿದ್ದರೆ ಅವರ ಹೆಸರಿನಲ್ಲಿ ಕೋಟಿಗಟ್ಟಲೆ ಜನರ ಹೃದಯಗಳಲ್ಲಿ ಸ್ಥಾಯಿಯಾದ ಭಕ್ತಿ ವಿಶ್ವಾಸಗಳು ನೆಲೆಗೊಂಡಿರಲು ಸಾಧ್ಯವಿಲ್ಲ. ಪರಮಾತ್ಮನು ನಿಯೋಜಿಸಿ ಕಳುಹಿಸುವ ಮಹಾತ್ಮರಿಗೆ ಲಭಿಸುವ ರೀತಿಯ ಗೌರವಾದರಗಳು ಅನ್ಯರಿಗೆ ಲಭಿಸುವರೆ ಆ ಭಕ್ತವತ್ಸಲನು ಎಂದಿಗೂ ಎಡೆಗೊಡಲಾರನು. ಒಬ್ಬ ಮಿಥ್ಯವಾದಿ ಸತ್ಯ ಪ್ರವಾದಿಯಂತೆ ಅಭಿನಯಿಸಿ ಅವರ ಸ್ಥಾನವನ್ನು ಸ್ವಾಧೀನಪಡಿಸಲು ಭಾವಿಸುವನಾದರೆ ಅವನು ಹೆಚ್ಚು ವಿಳಂಬವಾಗದೆ ನಾಶಹೊಂದುವನು. ಇದೇ ಆಧಾರದಿಂದ ನಾವು ವೇದಗಳನ್ನು ದೈವಿಕವೆಂದು ನಂಬಿ ವೈದಿಕ ಋಷಿಗಳನ್ನು ಮಹಾತ್ಮರೆಂದು ಗೌರವಿಸುತ್ತೇವೆ. ವೇದ ಸಾವಿರಗಟ್ಟಲೆ ವರ್ಷ ಹಳೆಯದಾದುದರಿಂದ ಹಲವು ಕಾಲಘಟ್ಟಗಳಲ್ಲಿ ಭಾಷ್ಯಕಾರರಲ್ಲಿ ಕೆಲವರು ಅದರಲ್ಲಿ ಅನೇಕ ಮಾರ್ಪಾಟುಗಳನ್ನೂ ಕೂಡಿಕೆಗಳನ್ನೂ ಮಾಡಿರಬಹುದು. ಆದರೂ ಆರ್ಯಾವರ್ತದ ಕೋಟ್ಯಾನುಕೋಟಿ ಜನರು ಸಹಸ್ರಾರು ವರ್ಷಗಳಿಂದ ವೇದವನ್ನು ದೇವಪ್ರೋಕ್ತವೆಂದು ನಂಬುತ್ತಾರೆಂಬುದೇ ಅದರ ಸತ್ಯತೆಗೆ ನಮಗಿರುವ ತಕ್ಕುದಾದ ಸಾಕ್ಷ್ಯವಾಗಿದೆ. ವೇದಕ್ಕೆ ಸಿದ್ಧಿಸಿರುವ ರೀತಿಯ ಗೌರವಾದರಗಳು ಒಬ್ಬ ವ್ಯಾಜವಾದಿಯ ವಚನಕ್ಕೆ

ಲಭಿಸುವುದು ಎಂದಿಗೂ ಸಂಭವನೀಯವಲ್ಲ. ಕೇವಲ ಪರಮಾತ್ಮನ ಭಯದಿಂದ ವೇದವನ್ನು ನಾವು ದೇವಪ್ರೋಕ್ತವೆಂದು ಅಂಗೀಕರಿಸಿ, ಅದರ ಉಪದೇಶ ನಿರ್ದೇಶನಗಳಲ್ಲಿ ಕಂಡು ಬರುವ ಲೋಪದೋಷಗಳು ಅದರ ಭಾಷ್ಯಕಾರರಿಂದುಂಟಾದುವುಗಳೆಂದು ಭಾವಿಸುವಾಗ, ಪವಿತ್ರ ಖುರ್‌ಆನಿಗೆದುರಾಗಿ ಮರ್ಯಾದೆಗೆಟ್ಟ ರೀತಿಯ ದೋಷಾರೋಪಣೆಗಳನ್ನು ಮಾಡುವುದು ನ್ಯಾಯವೇ? ಹಾಗೆಯೇ ರಾಜ್ಯದಲ್ಲೆಲ್ಲ ವಿರೋಧ ಹಾಗೂ ವಿದ್ವೇಷದ ಬೀಜ ಬಿತ್ತುವುದೇತಕ್ಕೆ? ಇದರಲ್ಲಿ ಏನಾದರೂ ಒಳಿತುಂಟಾಗುವುದೆಂದೂ ಆಶಿಸುತ್ತೀರಾ?

ಪ್ರಿಯ ಜನರೇ, ಮೈತ್ರಿಯಷ್ಟು ಅತ್ಯಾವಶ್ಯಕವಾದುದು ಬೇರೊಂದಿಲ್ಲ. ಬನ್ನಿರಿ ನಾವು ಎರಡು ಪಕ್ಷದವರೂ ಉಭಯ ಸಮ್ಮತದಿಂದ ಒಂದಾಗೋಣ; ಒಂದು ಜನಾಂಗವಾಗೋಣ. ಪರಸ್ಪರ ಪ್ರವಾದಿಗಳನ್ನೂ ಧರ್ಮಾ ಗ್ರಂಥಗಳನ್ನೂ ಆಕ್ಷೇಪಿಸುವ ಕಾರಣದಿಂದ ಎಷ್ಟು ಛಿದ್ರತೆಯೂ ಗೊಂದಲವೂ ಉಂಟಾಗುವುದೆಂದೂ, ರಾಜ್ಯಕ್ಕೆ ಎಷ್ಟು ನಷ್ಟಗಳನ್ನು ಹೊರಬೇಕಾಗುವುದೆಂದೂ ನೀವು ಕಾಣುತ್ತಿದ್ದೀರಷ್ಟೇ. ಬನ್ನಿರಿ, ಇನ್ನು ಅನ್ಯೋನ್ಯ ಮತ ಸಹಿಷ್ಣುತೆಯ ಅನುಗ್ರಹ ಫಲಗಳನ್ನು ಒಮ್ಮೆ ಪರೀಕ್ಷಿಸಿರಿ. ಇದು ಪರಸ್ಪರ ಸಂಧಾನವನ್ನುಂಟುಮಾಡಲೂ ಮೈತ್ರಿಭಾವವನ್ನು ಹೆಚ್ಚಿಸಲೂ ಉತ್ತಮ ಮಾರ್ಗವಾಗಿದೆ. ಇದಲ್ಲದೆ ಬೇರೆ ಯಾವುದಾದರೂ ರೀತಿಯಲ್ಲಿ ಮೈತ್ರಿ ಸ್ಥಾಪಿಸಲು ಯತ್ನಿಸುವುದಾದರೆ, ಅದು ದುರ್ಗಂಧವೂ ಕೀವೂ ತುಂಬಿರುವ ಕುರುವನ್ನು ಅದರ ಬಾಹ್ಯವಾದ ಶುದ್ಧತೆಯನ್ನೂ ಹೊಳಪನ್ನೂ ಕಂಡು ಸಂತೋಷಪಟ್ಟು ಹಾಗೆಯೇ ಬಿಟ್ಟು ಬಿಡುವುದಕ್ಕೆ ಸಮಾನವಾಗಿದೆ.

ಎಲೈ ಮುಸ್ಲಿಮರೇ, ನಿಮಗೂ ಹಿಂದುಗಳಿಗೂ ನಡುವೆ ಯಥಾರ್ಥ ಹಾಗೂ ಸುಸ್ಥಿರವಾದ ಸೌಹಾರ್ದ ಭಾವನೆಯನ್ನುಂಟುಮಾಡುವುದು ಹೇಗೆ? ಉಭಯ ಪಕ್ಷದವರು ಸಹ ಪರಸ್ಪರ ಕಾಪಟ್ಯದಿಂದ ಕೂಡಿದ ಒಂದು ತಾತ್ಕಾಲಿಕ ಮೈತ್ರಿಯನ್ನುಂಟುಮಾಡಲೂಬಹುದು. ಆದರೆ ಯಥಾರ್ಥ ಮೈತ್ರಿಯೆಂದು ಹೇಳಲಾಗುವ ಭಾವೈಕ್ಯ ಉಂಟಾಗುವುದು ನೀವು ವೇದವನ್ನೂ ಋಷಿಗಳನ್ನೂ ಹೃತ್ಪೂರ್ವಕವಾಗಿ ಗೌರವಿಸುವುದರಿಂದಲೂ ಹಾಗೆಯೇ ಹಿಂದುಗಳು ಅವರ ಸಂಕುಚಿತ ಮನೋಭಾವಗಳನ್ನು ಬಿಟ್ಟು ನಮ್ಮ ಪ್ರವಾದಿಶ್ರೇಷ್ಠರಾದ ಮುಹಮ್ಮದ್ ಮುಸ್ತಫಾರವರ ಸತ್ಯತೆಯನ್ನು ಒಪ್ಪುವುದರಿಂದಲೂ ಆಗಿದೆ. ನಿಮ್ಮ ಹಾಗೂ ಹಿಂದುಗಳ ಎಡೆಯಲ್ಲಿ ಯಥಾರ್ಥವಾದ ಐಕ್ಯ ಹಾಗೂ ಸೌಹಾರ್ದ ಉಂಟಾಗಲು ಇದು ಏಕಮಾತ್ರ ಮಾರ್ಗವೆಂದೂ ಹೃದಯರೋಗಗಳನ್ನು ಗುಣಪಡಿಸುವ ಒಂದು ರಸಾಯನವೆಂದೂ ತಿಳಿಯಿರಿ. ಬೇರ್ಪಟ್ಟಿರುವ ಈ ಎರಡು ಸಮುದಾಯಗಳೆಡೆ ಸಂಧಾನವೇರ್ಪಡುವ ಸಂದರ್ಭವೊದಗಿದರೆ ಯಾವುದಕ್ಕಾಗಿ ಪರಮಾತ್ಮನು ನಮ್ಮ ಹೃದಯಗಳನ್ನು ತೆರೆದು ಕೊಟ್ಟಿರುವನೋ ಅದಕ್ಕಾಗಿ ಅವನು ಇವರ ಹೃದಯಗಳನ್ನೂ ಸಹ ತೆರೆದುಕೊಡುವನು.

* * *

ಐಕ್ಯ ಅಥವಾ ಮೈತ್ರಿ ಅತ್ಯಮೂಲ್ಯವಾದುದಾಗಿದೆ. ಬೇರಾವ ರೀತಿಯಿಂದಲೂ ನಿವಾರಿಸಲು ಸಾಧ್ಯವಿಲ್ಲದ ವಿಪತ್ತುಗಳನ್ನೂ ಸಂಕಷ್ಟಗಳನ್ನೂ ಐಕ್ಯದಿಂದ ದೂರೀಕರಿಸಲು ಸಾಧ್ಯವೆಂಬುದು ಸ್ಪಷ್ಟ. ಆದುದರಿಂದ ಐಕ್ಯದ ಅನುಗ್ರಹೀತ ಫಲಗಳಿಂದ ನಮ್ಮನ್ನು ನಾವೇ ದೂರ ಸರಿಸುವುದು ವಿವೇಕಯುತವಲ್ಲ. ಹಿಂದೂಗಳೂ ಮುಸ್ಲಿಮರೂ ಈ ರಾಷ್ಟ್ರದ ಅವಿಭಾಜ್ಯ ಘಟಕಗಳಾದ ಎರಡು ಸಮುದಾಯಗಳಾಗಿವೆ. ಇವುಗಳಲ್ಲಿ ಯಾವುದಾದರೂ ಒಂದು ಸಮುದಾಯವು ಯಾವಾಗಲಾದರೂ ಒಂದಾಗಿ ಇನ್ನೊಂದು ಸಮುದಾಯವನ್ನು (ಹಿಂದುಗಳು ಒಟ್ಟುಗೂಡಿ ಮುಸ್ಲಿಮರನ್ನೋ ಅಥವಾ ಮುಸ್ಲಿಮರು ಒಟ್ಟು ಸೇರಿ ಹಿಂದುಗಳನ್ನೋ) ಈ ರಾಷ್ಟ್ರದಿಂದ ಹೊರದಬ್ಬಲು ಆಲೋಚಿಸುವುದಾದರೆ ಅದು ಸಂಭವನೀಯ ಹಾಗೂ ಭ್ರಮೆ ಮಾತ್ರವಾಗಿದೆ. ಬದಲಾಗಿ, ಈ ಎರಡೂ ಸಮುದಾಯಗಳನ್ನು ಒಟ್ಟುಗೂಡಿಸುವ ಬಂಧವು ಭೇದಿಸಲಾಗದಷ್ಟು ಶಕ್ತಿಯುತವಾಗಿದೆ. ಇವರಲ್ಲಿ ಒಂದು ಸಮುದಾಯದವರಿಗೆ ಏನಾದರೊಂದು ವಿಪತ್ತು ಸಂಭವಿಸಿದರೆ ಮತ್ತೊಂದು ಸಮುದಾಯದವರಿಗೆ ಸಹ ಅದರ ಬಾಧೆ ತಟ್ಟದಿರಲಿಕ್ಕಿಲ್ಲ. ಒಂದು ಸಮುದಾಯವು ಅಹಂಭಾವದಿಂದ ಮತ್ತೊಂದು ಸಮುದಾಯವನ್ನು ನಿಂದಿಸುವುದಾದರೆ ಅಥವಾ ಅವಹೇಳನವನ್ನುಂಟು ಮಾಡುವುದಾದರೆ ಆ ಸಮುದಾಯವು ಸಹ ಅದೇ ರೀತಿಯ ನಿಂದನೆಗೂ

ಅವಹೇಳನಕ್ಕೂ ಗುರಿಯಾಗುವುದು. ಒಂದು ಸಮುದಾಯವು ಇನ್ನೊಂದು ಸಮುದಾಯದೊಡನೆ ಅನು ಕಂಪವನ್ನು ತೋರಿಸದಿದ್ದರೆ ಅವರಿಗೆ ಇವರ ಅನುಕಂಪ ಲಭಿಸಲಾರದು. ಒಂದು ಸಮುದಾಯದ ಒಬ್ಬ ವ್ಯಕ್ತಿ ಇನ್ನೊಂದು ಸಮುದಾಯಕ್ಕೆ ನಷ್ಟವನ್ನುಂಟುಮಾಡಲು ನೋಡುವನಾದರೆ, ಅವನು ತಾನು ಕುಳಿತಿರುವ ಮರದ ಕೊಂಬೆಯನ್ನು ತನ್ನ ಕೈಯಿಂದಲೇ ಕಡಿಯುವವ ನಂತಾಗುವನು.

ಮಿತ್ರರೇ, ದೇವಾನುಗ್ರಹದಿಂದ ನೀವೀಗ ವಿದ್ಯಾ ಸಂಪನ್ನರಾಗಿದ್ದೀರಿ. ಈ ಘಟ್ಟದಲ್ಲಿ ನೀವು ಎಲ್ಲ ವಿಧದ ಹಗೆ, ದ್ವೇಷಗಳನ್ನು ನಿಮ್ಮ ಹೃದಯಗಳಿಂದ ದೂರೀಕರಿಸಿ, ಪರಸ್ಪರ ಮೈತ್ರಿಯಿಂದಲೂ ಕ್ಷೇಮಾಕಾಂಕ್ಷೆಯಿಂದಲೂ ಮುನ್ನಡೆಯುವುದು ಅತ್ಯಾವಶ್ಯಕವಾಗಿದೆ. ನಿರ್ದಾಕ್ಷಿಣ್ಯತೆ ಯನ್ನು ಬಿಟ್ಟು ಅನುಕಂಪ ಭಾವವನ್ನು ಕೈಗೊಳ್ಳಬೇಕಾದ ಸಮಯವು ಸನ್ನಿಹಿತವಾಗಿದೆ. ಐಹಿಕ ಜೀವಿತ ಯಾತ್ರೆಯು ಕಠಿಣವಾದ ಬಿಸಿಲಿನಲ್ಲಿ ಮರುಭೂಮಿಯಲ್ಲಿ ಸಂಚರಿಸುವುದಕ್ಕೆ ತುಲ್ಯವಾಗಿದೆ. ಆದ್ದರಿಂದ ದುರ್ಗಮ ಪಥದ ಈ ಯಾತ್ರೆಯ ಬಿಸಿಲನ್ನು ತಣಿಸಲಿಕ್ಕೂ ಆಯಾಸದ ಉಪಶಮನಕ್ಕೂ ಮೈತ್ರಿಯೆಂಬ ಶೀತಲ ಜಲ ನಿಮಗೆ ಅತ್ಯಾವಶ್ಯಕವಾಗಿದೆ.

ನಿಮಗೆ ಎರಡು ಪಕ್ಷಗಳಿಗೂ ಸಮಾಧಾನವೂ ಶಾಂತಿಯೂ ಅತ್ಯಂತ ಆವಶ್ಯಕವಾಗಿರುವ ಕಾಲಘಟ್ಟದಲ್ಲೇ ನಾನು ನಿಮ್ಮನ್ನು ಮೈತ್ರಿಗಾಗಿ ಆಮಂತ್ರಿಸುತ್ತಿದ್ದೇನೆ. ಲೋಕದಲ್ಲಿ ಹಲವಿಧ ಆಪತ್ತುಗಳು ಸಂಭವಿಸುತ್ತಿವೆ. ಭೂಕಂಪಗಳೂ ಕ್ಷಾಮಗಳೂ ಉಂಟಾಗುತ್ತಿವೆ. ಪ್ಲೇಗು ನಮ್ಮನ್ನು ಇನ್ನೂ ಬಿಟ್ಟು ಹೋಗಿಲ್ಲ.

ಪರಮಾತ್ಮನು ನನಗೆ ತಿಳಿಸಿರುವನು: ಮನುಷ್ಯರು ಅವರ ದುಷ್ಕೃತ್ಯಗಳನ್ನು ತ್ಯಜಿಸಿ ತಮ್ಮ ಅಕೃತ್ಯಗಳ ಕುರಿತು ಪಶ್ಚಾತ್ತಾಪಪಟ್ಟು ಪರಮಾತ್ಮನೊಡನೆ ಕ್ಷಮೆಯಾಚಿಸದೆ ಇದ್ದರೆ ಲೋಕದಲ್ಲೆಲ್ಲ ಭಯಂಕರವಾದ ವಿಪತ್ತುಗಳೂ ನಾಶ ನಷ್ಟಗಳೂ ಸಂಭವಿಸುವುವು. ಒಂದು ಆಪತ್ತು ಮುಕ್ತಾಯವಾಗುವ ಮೊದಲೇ ಇನ್ನೊಂದು ಭಯಂಕರವಾದ ನಾಶವು ಸನ್ನಿಹಿತವಾಗುವುದು. ಈ ವಿಪತ್ತುಗಳಿಂದಾಗಿ ಮನುಷ್ಯರು ದಿಗ್ಭ್ರಾಂತರಾಗಿ ಇನ್ನೇನು ಸಂಭವಿಸಲಿದೆಯೆಂದು ಪ್ರಶ್ನಿಸಲಾರಂಭಿಸುವರು. ಅನೇಕರು ವಿವಿಧ ಆಪತ್ತುಗಳಿಗೆ ಗುರಿಯಾಗಿ ಭ್ರಾಂತರಾಗುವರು. ಆದುದರಿಂದ ಎಲೈ ನನ್ನ ದೇಶ ಬಾಂಧವರೇ, ಆ ದಿನಗಳು ಬರುವ ಮೊದಲೇ ನೀವು ಜಾಗರೂಕರಾಗಿರಿ. ಹಿಂದುಗಳೂ ಮುಸ್ಲಿಮರೂ ಪರಸ್ಪರ ಸಂಧಾನವನ್ನುಂಟು ಮಾಡಲಿ. ಐಕ್ಯ ಭಂಗವಾಗುವ ರೀತಿಯಲ್ಲಿ ಅಕ್ರಮವಾಗಿ ವರ್ತಿಸಿದ ಸಮುದಾಯವು ಆ ಅನ್ಯಾಯಗಳನ್ನು ತ್ಯಜಿಸಲಿ. ಇಲ್ಲವಾದರೆ ಅನ್ಯೋನ್ಯ ಶತ್ರುತ್ವದ ಎಲ್ಲ ಪಾಪವು ಆ ಅನ್ಯಾಯವಾಗಿ ವರ್ತಿಸಿದ ಸಮುದಾಯದ ಕೊರಳಿಗೆ ಉರುಳಾಗಿ ಪರಿಣಮಿಸುವುದು. ★

**"LOVE FOR ALL**

**HATRED FOR NONE".**

**"ಎಲ್ಲರೊಡನೆಯೂ ಪ್ರೀತಿ,**

**ಯಾರೊಡನೆಯೂ ದ್ವೇಷವಿಲ್ಲ".**

# ದೇವನೂ ಸೃಷ್ಟಿಯೂ

* ಎಂ. ಮುಹಮ್ಮದ್ ಯೂಸುಫ್ ಎಂ.ಎ., ಬಿ.ಎಲ್.

(ಮುಂದುವರಿದುದು)

## ದೇವನ ಗುಣ ಮಹಿಮೆ

ಎಲ್ಲ ಮಹತ್ವಗಳನ್ನು ಪರಿಪೂರ್ಣವಾಗಿ ಹೊಂದಿರುವ ಒಂದು ಸತ್ತೆಯೇ ದೇವನೆಂದು ಇಸ್ಲಾಂ ನಿರ್ವಚಿಸುತ್ತದೆ. ಪವಿತ್ರ ಖುರ್‌ಆನಿನ ಪ್ರಾರಂಭದ ಅಧ್ಯಾಯವೇ ಈ ದೈವಿಕ ಗುಣಮಹಿಮೆಗಳನ್ನು ಎತ್ತಿತೋರಿಸುತ್ತಾ ಆರಂಭವಾಗುತ್ತದೆ. ಅದು ಈ ರೀತಿಯಾಗಿದೆ: "ಸಕಲ ಲೋಕಗಳ ಸೃಷ್ಟಿಕರ್ತನೂ ರಕ್ಷಕನೂ ಆದ ಅಲ್ಲಾಹನಿಗೆಯೇ ಸರ್ವ ಸ್ತುತಿಸ್ತೋತ್ರಗಳು." 'ಸಕಲ ಲೋಕಗಳು' ಎಂಬುದರಲ್ಲಿ ವಿವಿಧ ಕಾಲಗಳ ಮತ್ತು ವಿವಿಧ ದೇಶಗಳ ಜನಸಂಚಯಗಳು ಸೇರುತ್ತವೆ. ಎಲ್ಲ ಜೀವಜಾಲಗಳನ್ನೂ ಎಲ್ಲ ವಸ್ತುಗಳನ್ನೂ ಅಲ್ಲಾಹನೇ ಸೃಷ್ಟಿಸಿದ್ದಾನೆ. ಆದ್ದರಿಂದ ಅವೆಲ್ಲ ಅವನನ್ನೇ ಆಶ್ರಯಿಸಿಕೊಂಡಿವೆ. ತನ್ಮೂಲಕ ಅವನೇ ಸರ್ವಸ್ತುತಿಗಳಿಗೆ ಅರ್ಹನಾಗುತ್ತಾನೆ. ನಿಸರ್ಗದಲ್ಲಿ ಕಾಣುವ ಸೌಂದರ್ಯವೂ ಮಹತ್ವವೂ ಅವನಿಂದಲೇ ಉದ್ಭೂತವಾಗಿವೆ. ಆದ ಕಾರಣ ಮಹತ್ವದ ಮತ್ತು ಶ್ರೇಷ್ಠತೆಯ ಪ್ರಭುವಾದ ದೇವನಿಗೆಯೇ ಸಕಲ ಸ್ತೋತ್ರಗಳು ಸಲ್ಲುತ್ತವೆಂದು ಪವಿತ್ರ ಖುರ್‌ಆನ್ ಸಾರುತ್ತದೆ. ಇದು ಬಹಳ ಅರ್ಥಗರ್ಭಿತವಾದುದೆಂದು ದಾರ್ಶನಿಕರಿಗೆ ಕಾಣಲು ಸಾಧ್ಯ. ದೇವನ ಬಗ್ಗೆ ಇಸ್ಲಾಂ ಸಂಪೂರ್ಣವಾದೊಂದು ವ್ಯಾಖ್ಯೆಯನ್ನು ನೀಡುತ್ತದೆ. ದೇಶೀಯ ಅಥವಾ ವರ್ಗೀಯ ದೇವನೊಬ್ಬನ ಕುರಿತು ಇಸ್ಲಾಂ ನಿರ್ವಚಿಸುವುದಿಲ್ಲ. ಒಂದು ನಿರ್ದಿಷ್ಟ ಜನಾಂಗದ ದೇವನೆಂದು ಸೂಚಿಸುವ ಒಂದು ದೇವವ್ಯಾಖ್ಯೆಯನ್ನು ಇಸ್ಲಾಂ ಅಂಗೀಕರಿಸುವುದಿಲ್ಲ. ದೇವವ್ಯಾಖ್ಯೆಯ ವಿಶಾಲತೆಯನ್ನು ಅಂಗೀಕರಿಸುತ್ತಾ ಮಾನವ ಸಹೋದರತೆಯ ಸೀಮೆಯನ್ನು ಅದು ವಿಪುಲಗೊಳಿಸಿದೆ. ಹಾಗೆ ಅದು ಭೂಮಂಡಲ ದಲ್ಲಿರುವ ಎಲ್ಲ ದೇಶಗಳನ್ನೂ ಆ ವಲಯದೊಳಗೆ ಸೇರಿಸಿಕೊಂಡು ಮಾನವ ಜನಾಂಗದ ಮೇಲಿನ ಸಹತಾಪದ ವಲಯವನ್ನೂ ವಿಶಾಲಗೊಳಿಸಿದೆ.

ದೇವನ 'ಏಕತ್ವ' ಎಂಬ ಸಿದ್ಧಾಂತಕ್ಕೆ ಪವಿತ್ರ ಖುರ್‌ಆನ್ ಬಹಳ ಪ್ರಾಧಾನ್ಯ ನೀಡುತ್ತದೆ. ದೇವನ ವ್ಯಾಖ್ಯೆಯಲ್ಲಿ ಯಾವುದೇ ರೀತಿಯ ಸಹಭಾಗಿತ್ವವನ್ನು ಇಸ್ಲಾಂ ನೀಡುವುದಿಲ್ಲ. ಬಹುದೇವ ನಂಬಿಕೆಯನ್ನು ಇಸ್ಲಾಂ ನಿಷಿದ್ಧಗೊಳಿಸುತ್ತದೆ. ದೇವನ ವ್ಯಾಖ್ಯೆಯಲ್ಲಿ ಯಾವುದೇ ರೀತಿಯ ಬಹುತ್ವವನ್ನು ಇಸ್ಲಾಂ ಒಪ್ಪುವುದಿಲ್ಲ. ಮಾತ್ರವಲ್ಲ, ಈ ಪ್ರಪಂಚದ ಆಧಿಪತ್ಯದಲ್ಲಿ ಬೇರೊಂದು ಶಕ್ತಿಗೆ ಯಾವುದೇ ರೀತಿಯ ಸಹಭಾಗಿತ್ವವನ್ನು ಸಮ್ಮತಿಸುವುದಿಲ್ಲ. ದೇವನು ಪರಿಪೂರ್ಣವೂ ಶ್ರೇಷ್ಠವೂ ಆದ ಸಕಲ ಗುಣಗಳನ್ನು ಹೊಂದಿದ್ದಾನೆಂದು ಇಸ್ಲಾಂ ಕಲಿಸುತ್ತದೆ. ದೇವನ ವಿಶೇಷ ಗುಣಗಳ ಪೈಕಿ 'ಕರುಣೆ'ಯು ಇತರ ಎಲ್ಲ ಗುಣಗಳಿಗಿಂತ ಮಿಗಿಲಾದುದಾಗಿದೆ. ಪವಿತ್ರ ಖುರ್‌ಆನಿನ ಪ್ರತಿಯೊಂದು ಅಧ್ಯಾಯ 'ಅರ್ರಹ್ಮಾನ್', 'ಅರ್ರಹೀಂ' ಎಂಬ ಗುಣನಾಮಗಳ ಸಹಿತ ಆರಂಭಗೊಂಡಿದೆ.

'ಅರ್ರಹ್ಮಾನ್' ಎಂಬ ಪದಕ್ಕೆ 'ದಯಾವಂತ' ಮತ್ತು 'ಅರ್ರಹೀಂ' ಎಂಬ ಪದಕ್ಕೆ 'ಕಾರುಣ್ಯನಿಧಿ' ಎಂದು ಅರ್ಥ ನೀಡಬಹುದಾದರೂ ಮೂಲ ಪದಗಳು ಒಳಗೊಳ್ಳುವ ಅರ್ಥದ ಗಾಂಭೀರ್ಯವನ್ನು ಅವು ವ್ಯಕ್ತಪಡಿಸುವುದಿಲ್ಲ. ಸೃಷ್ಟಿಗಳ ಮೇಲೆ ದೇವರು ತೋರಿಸಿರುವ ಮಹತ್ವದ ಅನುಗ್ರಹಗಳನ್ನೂ ಪ್ರೀತಿಯನ್ನೂ 'ಅರ್ರಹ್ಮಾನ್' ಎಂಬ ಪದವು ಒಳಗೊಳ್ಳುತ್ತದೆ. ಈ ಲೋಕದಲ್ಲಿ ಮನುಷ್ಯನು ಪ್ರತ್ಯಕ್ಷಗೊಳ್ಳುವುದಕ್ಕೆ ಮುಂಚೆಯೇ ಅವನಿಗೆ ಅಗತ್ಯವುಳ್ಳ ಎಲ್ಲ ವಸ್ತುಗಳನ್ನೂ ಸೃಷ್ಟಿಸಿ ಮತ್ತು ಅವೆಲ್ಲ ಅವನಿಗೆ ಉಪಯುಕ್ತವಾಗುವಂತೆ ವ್ಯವಸ್ಥೆ ಮಾಡಿ ದೇವರು ತನ್ನ ಕಾರುಣ್ಯದ ಮತ್ತು ಅನುಗ್ರಹದ ಪೀಯೂಷವನ್ನು ಮನುಷ್ಯನಿಗೆ ದಯಪಾಲಿಸಿದ್ದಾನೆ. ಮನುಷ್ಯನ ಜೀವನಕ್ಕೆ ಆವಶ್ಯಕವಾದ ಪ್ರಕಾಶ, ವಾಯು, ಅಗ್ನಿ, ಜಲ ಇತ್ಯಾದಿಗಳನ್ನು ಮನುಷ್ಯನ

ಸೃಷ್ಟಿಗೆ ಮುಂಚಿತವಾಗಿಯೇ ಸಿದ್ಧಪಡಿಸಿಟ್ಟು ದೇವರು ತನ್ನ 'ರಹ್ಮತ್' ಅಥವಾ ಅನುಗ್ರಹವನ್ನು ಮನುಷ್ಯ ಕುಲಕ್ಕೆ ನೀಡಿ ತಾನು 'ರಹ್ಮಾನ್' ಆಗಿದ್ದೇನೆಂದು ರುಜುಪಡಿಸಿದ್ದಾನೆ. ಇಷ್ಟೇ ಅಲ್ಲ, ಹಲವು ತರದ ಆಹಾರ ಸಾಮಾಗ್ರಿಗಳು, ಔಷಧಿಗಳು, ಅರಣ್ಯ ಸಂಪತ್ತುಗಳು, ಕಬ್ಬಿಣ, ಕಲ್ಲು ಮುಂತಾದ ಭೌತಿಕ ವಸ್ತುಗಳನ್ನು ಮನುಷ್ಯನ ಉಪಯೋಗಕ್ಕಾಗಿ ದೇವನು ಪ್ರದಾನ ಮಾಡಿ ತನ್ನ 'ರಹ್ಮಾನಿಯ್ಯತ್' ಎಂಬ ವಿಶೇಷ ಗುಣವನ್ನು ಪ್ರಕಟ ಪಡಿಸಿದ್ದಾನೆ. ಯಾವುದರ ಕಡೆಗೆ ಮನುಷ್ಯನ ಶ್ರದ್ಧೆ ಕೇಂದ್ರೀಕರಿಸಲ್ಪಡುತ್ತದೋ ಆ ಮಾರ್ಗದಲ್ಲಿ ಮನುಷ್ಯನು ಪ್ರಗತಿ ಪಡೆಯಲಿಕ್ಕೆ ಸಾಧ್ಯತೆಗಳನ್ನೂ ಸಂದರ್ಭಗಳನ್ನೂ ದೇವನು ಉಂಟುಮಾಡಿ ಕೊಡುತ್ತಾನೆ. ಹಾಗೆ ಮಾನುಷ್ಯನು ಅಗತ್ಯಪಡಿಸದೆಯೇ ಅವನಿಗೆ ನೀಡಲಾದ ಅನುಗ್ರಹಗಳ ಕಾರಣದಿಂದ ದೇವರು 'ರಹ್ಮಾನ್' ಆಗುತ್ತಾನೆ. ಈ ಅನುಗ್ರಹಗಳೆಲ್ಲ ಅವನ 'ರಹ್ಮಾನಿಯತ್' ಎಂಬ ಗುಣವನ್ನು ಪ್ರಕಟಗೊಳಿಸುತ್ತವೆ. ಮನುಷ್ಯನ ಪ್ರಯತ್ನವಿಲ್ಲದೆಯೇ ಅವನಿಗೆ ಲಭಿಸುವ ಈ ಅನುಗ್ರಹ ದೇವರ ಮಹತ್ವವುಳ್ಳ ಕಾರುಣ್ಯ ಗುಣದಿಂದ ಉದ್ಭೂತವಾದುದಾಗಿದೆ. ಜಾತಿ ಮತ ವರ್ಗ ಭೇದವಿಲ್ಲದೆ ಮನುಷ್ಯರೆಲ್ಲರಿಗೂ ಜಂತು ಸಸ್ಯಾದಿಗಳಿಗೂ ಒಂದೇ ರೀತಿ ಅನುಗ್ರಹ ಲಭ್ಯವಾಗುತ್ತದೆ. ಈ ವಿಶಾಲವಾದ ಅನುಗ್ರಹದ ಉದ್ಭವ ದೇವರ 'ರಹ್ಮಾನಿಯ್ಯತ್' ಎಂಬ ಗುಣದ ಪ್ರಕ್ರಿಯೆಯೇ ಆಗಿದೆ.

ಸೃಷ್ಟಿಗಳ ಯಾವ ವರ್ತನೆಯನ್ನೂ ಪರಿಗಣಿಸದೆ ದೇವರ ಸೀಮಾತೀತ ಅನುಗ್ರಹ ಮತ್ತು ಕರುಣೆ ಪ್ರಕಟಗೊಳ್ಳುವುದೇ 'ರಹ್ಮಾನಿಯ್ಯತ್' ಆಗಿದೆ. ಅದು ಜೀವಾತ್ಮಗಳ ಸುಖಕರವಾದ ಜೀವಿತಕ್ಕಾಗಿ ಅವುಗಳ ಸೃಷ್ಟಿಗೆ ಮುಂಚೆಯೇ ಪ್ರಕೃತಿಯಲ್ಲಿ ಸಿದ್ಧಪಡಿಸಿಟ್ಟ ಅನುಗ್ರಹ ಕಾರುಣ್ಯಗಳ ಪ್ರಕಟನೆಯಾಗಿದೆ. ಜೀವಾತ್ಮಗಳಿಂದ ಏನನ್ನೂ ನಿರೀಕ್ಷಿಸದೆ ನಿರುಪಾಧಿಕವಾಗಿ ಈ ದೈವಿಕಗುಣ ವರ್ತಿಸುತ್ತದೆ. ಈ ಮಹತ್ವದ ದೇವಗುಣದ ಪ್ರತಿಫಲನವನ್ನು ಪ್ರಕೃತಿಯಲ್ಲಿ ವಸ್ತುಗಳ ಸೃಷ್ಟಿಯಲ್ಲಿ ಮತ್ತು ನೆಲೆನಿಲ್ಲುವಿಕೆಯಲ್ಲಿ ನಾವು ಕಾಣುತ್ತೇವೆ. ಮನುಷ್ಯನು ಭೂಮಿಯಲ್ಲಿ ಹುಟ್ಟುವುದಕ್ಕೆ ಮುಂಚೆಯೇ ಅವನ ಜೀವನ ಸುಖಮಯವಾಗಲಿಕ್ಕೂ ಐಶ್ವರ್ಯದಿಂದ ಕೂಡಿರಲಿಕ್ಕೂ ಆವಶ್ಯಕವಾದ ಸೂರ್ಯಚಂದ್ರ ನಕ್ಷತ್ರಾದಿಗಳ ಮತ್ತು ಇತರ ವಸ್ತುಗಳ ಸೃಷ್ಟಿಯ ಮೂಲಕ ದೇವರ ಈ ವಿಶೇಷ ಗುಣ ಪ್ರತ್ಯಕ್ಷಗೊಂಡಿದೆ. ಈ ಮಹದ್ಗುಣದ ಒಡೆಯನನ್ನು 'ಅರ್ರಹ್ಮಾನ್' ಅಥವಾ 'ದಯಾವಂತ' ಎಂದು ಹೇಳಲಾಗುತ್ತದೆ.

ದೇವರನ್ನು 'ಅರ್ರಹೀಂ' ಎಂದು ಕರೆಯಲಾಗುತ್ತದೆ. ಅದರ ಅರ್ಥ, ಸೃಷ್ಟಿಗಳು ಗೈಯ್ಯುವ ಸತ್ಕರ್ಮಗಳಿಗೆ ತತ್ತುಲ್ಯವಾದ ಪ್ರತಿಫಲವನ್ನು ನೀಡುವವನು ಎಂದಾಗಿದೆ. ಮನುಷ್ಯರ ಪರಿಶ್ರಮಗಳನ್ನು ವ್ಯರ್ಥಮಾಡದೆ ಕರ್ಮಗಳಿಗೆ ಅನುಸಾರವಾಗಿ ಫಲವನ್ನೂ ಅನುಗ್ರಹಗಳನ್ನೂ ನೀಡುವವನು ಎಂದಾಗಿದೆ 'ಅರ್ರಹೀಂ' ಎಂಬುದರ ತಾತ್ಪರ್ಯ. ಇದು ಸಹ ಅಲ್ಲಾಹನ ಒಂದು ವಿಶೇಷ ಗುಣವಾಗಿದೆ. "ನನ್ನ ಕಾರುಣ್ಯ ಮತ್ತು ಅನುಗ್ರಹ ಎಲ್ಲ ವಸ್ತುಗಳಲ್ಲೂ ವ್ಯಾಪಿಸಿಕೊಂಡಿವೆ" (7 : 157) ಎಂದು ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೇಳಿದ್ದಾನೆ. ಆದ್ದರಿಂದಲೇ ದೇವರ ಈ ವಿಶೇಷ ಗುಣವನ್ನು ಘೋಷಿಸಿದ ಮಹಾಪುರುಷರಾದ ಮುಹಮ್ಮದ್ ಪೈಗಂಬರರನ್ನು ಲೋಕಕ್ಕೆಲ್ಲ ಒಂದು ಅನುಗ್ರಹ (21 : 108) ಆಗಿ ಪವಿತ್ರ ಖುರ್‌ಆನ್ ಸಾರಿದೆ.

ದೇವರ ಏಕತ್ವದ ಸಂದೇಶವಾಹಕರಾದ ಪ್ರವಾದಿವರ್ಯರು ಸಕಲ ವಸ್ತುಗಳ ಸೃಷ್ಟಿಕರ್ತನೂ ಕಾರುಣ್ಯವಂತನೂ ಆದ ಒಬ್ಬ ದೇವನ ಬಗ್ಗೆ ವ್ಯಾಖ್ಯೆ ನೀಡಿದ್ದಾರೆ. ಹಾಗೆ ಉತ್ಕೃಷ್ಟ ಗುಣಗಳಿಂದ ಕೂಡಿದ ಓರ್ವ ದೇವನ ಬಗ್ಗೆ ಪ್ರವಾದಿವರ್ಯರು ತನ್ನ ಶಿಷ್ಯರಿಗೆ ಕಲಿಸಿದ್ದಾರೆ. ಖುರ್‌ಆನ್ ಆ ಕುರಿತು ಹೀಗೆ ಹೇಳುತ್ತದೆ: "ಆರಾಧನೆಗರ್ಹನಾಗಿ ಮಹೋನ್ನತವಾದ ದೇವನ ಹೊರತು ಬೇರೆ ದೇವನಿಲ್ಲ, ಪ್ರತ್ಯಕ್ಷವಾಗಿರುವುದನ್ನೂ ಪರೋಕ್ಷವಾಗಿರುವುದನ್ನೂ ತಿಳಿಯಲು ಶಕ್ತನಾದ ದೇವನು, ದಯಾವಂತನೂ ಕಾರುಣ್ಯನಿಧಿಯೂ ಆದವನು. ಅವನೇ ಶಾಂತಿಯ ಮೂಲವೂ ಪರಿಶುದ್ಧನೂ ಪ್ರತಾಪ ಶಾಲಿಯೂ ಆದ ರಾಜ. ಸಕಲವಿಧ ಸುರಕ್ಷೆಯ ದಾತನೂ ಅವನೇ. ಸಕಲ ಸಂರಕ್ಷಕನೂ ಸರ್ವಶಕ್ತನೂ ಆದ ದೇವನು. ಯಾವ ನಷ್ಟವನ್ನೂ ಪರಿಹರಿಸುವವನೂ ಸಕಲ ಮಹತ್ವಕ್ಕೂ ಅಧಿನಾಥನೂ ಆಗಿದ್ದಾನೆ. ಸಕಲ ವಸ್ತುಗಳಿಗೆ ಮಿಗಿಲಾಗಿ ಪ್ರತಾಪಶಾಲಿಯಾಗಿ ವಿರಾಜಿಸುವವನೂ ಸಕಲ ವಸ್ತುಗಳ ಒಡೆತನ ಯಾವನಲ್ಲಿರುತ್ತದೋ ಅಂಥ ಮಹತ್ವದಿಂದ

ಕೂಡಿದ ದೇವನು. ಸಕಲ ಜೀವಜಾಲಗಳಿಗೂ ಸಕಲ ವಸ್ತುಗಳಿಗೂ ಕಾರಣಿಕನಾಗಿ ಸಕಲಕ್ಕೂ ರೂಪ ಕೊಡುವವನು. ಇಂತಹ ದೇವನ ಗುಣನಾಮಗಳು ಮನುಷ್ಯನಿಗೆ ಚಿಂತನಾತೀತವಾದ ರೀತಿಯಲ್ಲಿ ಅತ್ಯಂತ ಉತ್ಕೃಷ್ಟ ಹಾಗೂ ಸೌಂದರ್ಯದಿಂದ ಕೂಡಿದವು ಆಗಿವೆ. ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿರುವ ಎಲ್ಲವೂ ಅವನ ಮಹತ್ವವನ್ನೂ ಪರಿಪೂರ್ಣತೆಯನ್ನೂ ಹೊಗಳುತ್ತವೆ. ಅವನು ಅತಿ ಪ್ರತಾಪಶಾಲಿಯೂ ಅಗಾಧ ಬುದ್ಧಿಶಾಲಿಯೂ ಆಗಿದ್ದಾನೆ." (59 : 23 - 25). ಆ ಮಹಾಮಹಿಮನಾದ ದೇವನು ಎಲ್ಲವನ್ನೂ ಕಾಣುತ್ತಾನೆ, ಎಲ್ಲವನ್ನೂ ಆಲಿಸುತ್ತಾನೆ. ಅವನು ಎಲ್ಲ ಕ್ಲೇಶಗಳಿಂದ ಮತ್ತು ತೊಂದರೆಗಳಿಂದ ಸೃಷ್ಟಿಗಳನ್ನು ಮುಕ್ತಗೊಳಿಸುತ್ತಾನೆ. ಕಾರುಣ್ಯ ಮತ್ತು ಅನುಗ್ರಹದಿಂದ ಆ ಸರ್ವಶಕ್ತನು ವರ್ತಿಸುತ್ತಾನೆ. ಅವನು ಪಾಪಕರ್ಮಗಳನ್ನು ಕ್ಷಮಿಸುವವನೂ ಬಹಳ ನಿಕಟವಾಗಿರುವವನೂ ಆಗಿದ್ದಾನೆ. ಅವನು ಒಳಿತನ್ನು ಪ್ರೀತಿಸುತ್ತಾನೆ. ಕೆಡುಕನ್ನು ದ್ವೇಷಿಸುತ್ತಾನೆ. ಅವನು ಅಂತಹ ಮಹಾಮಹಿಮನಾಗಿದ್ದಾನೆ. ಅವನು ಮನುಷ್ಯನ ಎಲ್ಲ ಕೃತ್ಯಗಳ ಲೆಕ್ಕ ತೆಗೆಯುವವನೂ ಆಗಿದ್ದಾನೆ.

ದೇವಾಸ್ತಿತ್ವದಲ್ಲಿ ನಂಬಿಕೆ ಇಡುವುದೇ ಇಸ್ಲಾಂ ಧರ್ಮ ವಿಶ್ವಾಸಗಳ ಮೂಲವಾಗಿದೆ. ದೇವೇಕತ್ವದ ಮೇಲೆ ದೃಢವಿಶ್ವಾಸವೂ ಇಸ್ಲಾಮಿನ ವೈಶಿಷ್ಟ್ಯವಾಗಿದೆ. ಏಕದೇವ ವಿಶ್ವಾಸವೆಂಬ ತಳಪಾಯದಲ್ಲಿ ಕಟ್ಟಲಾಗಿರುವ ಒಂದು ಮನೋಜ್ಞ ಕಟ್ಟಡವಾಗಿದೆ ಇಸ್ಲಾಂ. ಸೃಷ್ಟಿಕಾರ್ಯದಲ್ಲಿ ದೇವರ ಶಕ್ತಿಯಲ್ಲಾಗಲಿ ಜ್ಞಾನದಲ್ಲಾಗಲಿ ಯಾವುದೇ ಪರಿಮಿತಿ ಇದೆಯೆಂಬ ಕೆಲವು ಧರ್ಮಗಳ ವಿಶ್ವಾಸವನ್ನು ಇಸ್ಲಾಂ ಬಲವಾಗಿ ಖಂಡಿಸುತ್ತದೆ. ಪಂಚಭೂತಗಳ ಮತ್ತು ಆತ್ಮದ ಸೃಷ್ಟಿಗೆ ಕಾರಣಕರ್ತ ದೇವನಲ್ಲವೆಂಬ ಆ ಜನರ ಅಭಿಮತವನ್ನು ಇಸ್ಲಾಂ ಅಂಗೀಕರಿಸುವುದಿಲ್ಲ. ಸಕಲ ಸೃಷ್ಟಿಗಳ ಕರ್ತ ಮತ್ತು ನಿಯಾಮಕ ಮಹೋನ್ನತವಾದ ದೇವನೇ ಆಗಿದ್ದಾನೆಂದು ಇಸ್ಲಾಂ ಕಲಿಸುತ್ತದೆ. ದೇವರು ಮನುಷ್ಯರೂಪವನ್ನು ಧರಿಸಿ ಲೋಕದಲ್ಲಿ ಅವತರಿಸುತ್ತಾನೆಂಬ ಸಿದ್ಧಾಂತವನ್ನು ಇಸ್ಲಾಂ ಸಂಪೂರ್ಣವಾಗಿ ಅಲ್ಲಗಳೆಯುತ್ತದೆ. ವಾಸ್ತವದಲ್ಲಿ, ಮನುಷ್ಯನು ಆಧ್ಯಾತ್ಮಿಕವಾಗಿ ಪರಿಶುದ್ಧಿಯನ್ನು ಗಳಿಸಿ ದೇವ ಸಂಪರ್ಕವನ್ನು ಸ್ಥಾಪಿಸಿ ದಿವ್ಯಗುಣಮಹಿಮೆಗಳನ್ನು ತನ್ನಲ್ಲಿ ಪ್ರತಿಬಿಂಬಿಸಿ ಆಧ್ಯಾತ್ಮಿಕತೆಯ ಔನ್ನತ್ಯವನ್ನು ಪಡೆಯುತ್ತಾನೆ.

ದೇವನು ನ್ಯಾಯತೀರ್ಮಾನ ದಿನದ ಅಧಿಪತಿ ಎಂಬುದಾಗಿ ಅವನ ಮತ್ತೊಂದು ವಿಶೇಷ ಗುಣದ ಬಗ್ಗೆ ಪವಿತ್ರ ಖುರ್‌ಆನ್ ಹೇಳುತ್ತದೆ. ವಿಚಾರಣಾ ದಿನದ ಮತ್ತು ರಕ್ಷಾಶಿಕ್ಷಾ ದಿನದ ಅಧಿಪತಿಯಾಗಿ ದೇವರು ಅತಿ ಪ್ರತಾಪಶಾಲಿಯಾಗಿ ವಿರಾಜಿಸುತ್ತಾನೆ. ಸಜ್ಜನರ ಸತ್ಕರ್ಮಗಳಿಗೆ ತಕ್ಕ ಪ್ರತಿಫಲವೂ ದುರ್ಜನರ ದುಷ್ಕೃತ್ಯಗಳಿಗೆ ತಕ್ಕ ಶಿಕ್ಷೆಯೂ ನೀಡಲ್ಪಡುವುದು. ಈ ರಕ್ಷೆ-ಶಿಕ್ಷೆಗಳು ಯಾವಾಗಲೂ ದೇವರ 'ಮಾಲಿಕಿಯ್ಯತ್' ಎಂಬ ಗುಣಕ್ಕನುಸಾರವಾಗಿದೆ. ಕ್ಷಮಿಸುವ ಹಕ್ಕು ಹಾಗೂ ಶಿಕ್ಷೆಯನ್ನು ಕಡಿಮೆ ಮಾಡುವ ಸ್ವಾತಂತ್ರ್ಯ ಅವನಿಗಿದೆ.

ದೇವನನ್ನು 'ಖದೀರ್' ಎಂದು ಸಹ ಖುರ್‌ಆನ್ ವರ್ಣಿಸುತ್ತದೆ. ನಿಸರ್ಗದಲ್ಲಿರುವ ಪ್ರತಿಯೊಂದು ವಸ್ತುವಿಗೆ ಅದರದೇ ಆದ ವಿಶೇಷ ಗುಣವನ್ನು ಅವನು ನೀಡಿದ್ದಾನೆ. ಪ್ರತಿಯೊಂದು ವಸ್ತುವಿಗೆ ಪ್ರತ್ಯಪ್ರತ್ಯೇಕ ಗುಣಗಳನ್ನು ದೇವರು ನೀಡಿರದಿದ್ದರೆ ಈ ಭೂಲೋಕದಲ್ಲಿ ಪದೇ ಪದೇ ಅನರ್ಥಗಳೂ ಗೊಂದಲಗಳೂ ಘಟಿಸುತ್ತಿದ್ದವು. ಕ್ರಮತಪ್ಪಿದ ಹಲವು ಘಟನೆಗಳು ನಡೆಯುತ್ತಿದ್ದವು. ಹಾಗೆ ಲೋಕ ವ್ಯವಹಾರಗಳೆಲ್ಲ ಗೊಂದಲಮಯವಾಗಿ ಯಾವಾಗಲೇ ಬ್ರಹ್ಮಾಂಡವು ಕೊನೆಗೊಳ್ಳುತ್ತಿತ್ತು. ವಸ್ತುಗಳ ಸಹಜ ಗುಣ-ದೋಷಗಳ ಬಗ್ಗೆ ತಿಳುವಳಿಕೆ ಇಲ್ಲದಿರುತ್ತಿದ್ದರೆ ಮನುಷ್ಯನಿಗೆ ಏನು ಮಾಡಲೂ ಸಾಧ್ಯವಾಗದೆ ಅವನು ಸಂಕಟಕ್ಕೊಳಗಾಗುತ್ತಿದ್ದನು.

ಪವಿತ್ರ ಖುರ್‌ಆನ್ ದೇವರ ಅಸಂಖ್ಯಾತ ವಿಶೇಷ ಗುಣಗಳನ್ನು ಒಂದೊಂದಾಗಿ ಹೇಳುತ್ತಾ ಅವನ ಅತುಲ್ಯವಾದ ಶಕ್ತಿಯ ಕಡೆಗೆ ನಮ್ಮ ಗಮನವನ್ನು ಸೆಳೆಯುತ್ತದೆ. ದೇವನು 'ಅಲೀಂ' ಎಂಬುದಾಗಿ ಖುರ್‌ಆನ್ ಮತ್ತೊಂದೆಡೆಯಲ್ಲಿ ವರ್ಣಿಸುತ್ತದೆ. ಗೋಪ್ಯವಾಗಿರುವುದರ ಬಗ್ಗೆ ಮತ್ತು ಬಹಿರಂಗವಾಗಿರುವುದರ ಬಗ್ಗೆ ದೇವರಿಗೆ ಸರಿಯಾದ ಅರಿವಿದೆ. ಈ ವಿಶೇಷ ಗುಣಗಳನ್ನು ಅಲೀಂ ಎಂಬ ಪದ ಸೂಚಿಸುತ್ತದೆ. ದೇವನು 'ಅಹದ್' ಎಂಬ ಗುಣನಾಮದಿಂದಲೂ ಕರೆಯಲ್ಪಡುತ್ತಾನೆ. ಅತುಲ್ಯನು ಎಂಬ ಅರ್ಥವನ್ನು ಆ ಪದಕ್ಕೆ ಕೊಡಬಹುದಾದರೂ ಅವನ ಏಕತ್ವವನ್ನೂ ಪ್ರಾಭವವನ್ನೂ

ಆ ಪದ ಸೂಚಿಸುತ್ತದೆ. ಅವನ ಕುರಿತು 'ವಾಹಿದ್' ಎಂದು ಸಹ ಪವಿತ್ರ ಖುರ್‌ಆನ್ ಹೇಳುತ್ತದೆ. ಎಲ್ಲ ವಸ್ತುಗಳ ಉದ್ಭವ ಸ್ಥಾನ ದೇವನಾದುದರಿಂದಲೂ ಅಥವಾ ದೇವನಾಜ್ಞೆ ಯಿಂದಾದುದರಿಂದಲೂ ಸಕಲ ಸೃಷ್ಟಿಜಾಲಗಳ ಆದಿಕಾರಣ ಈ ಸತ್ತೆಯಾದುದರಿಂದಲೂ ಈ ಪದಪ್ರಯೋಗ ಶಕ್ತಿ ಮತ್ತು ಪ್ರಾಭವದಲ್ಲಿರುವ ಏಕತ್ವವನ್ನು ಬಹಿರಂಗಪಡಿಸುವ ಒಂದು ವಿಶೇಷ ಗುಣವಾಗಿ ಪವಿತ್ರ ಖುರ್‌ಆನ್ ಎತ್ತಿ ಹೇಳುತ್ತದೆ. ದೇವರ ಇನ್ನೂ ಅನೇಕ ಗುಣಗಳ ಬಗ್ಗೆ ಪವಿತ್ರ ಖುರ್‌ಆನ್ ಪ್ರಸ್ತಾಪಿಸುತ್ತದೆ. ಈ ಗುಣಗಳಿಂದೆಲ್ಲ ತಿಳಿದು ಬರುವುದೇನೆಂದರೆ, ಇಸ್ಲಾಂ ಸಂಪೂರ್ಣವಾದೊಂದು ದೇವವ್ಯಾಖ್ಯೆಯನ್ನು ನೀಡುತ್ತಾ ಒಂದು ಕಡೆಯಲ್ಲಿ ಮನುಷ್ಯನಲ್ಲಿ ದೇವರ ಬಗ್ಗೆ ಭಕ್ತಿ ಮತ್ತು ಪ್ರೀತಿಯೂ ಮತ್ತೊಂದು ಕಡೆಯಲ್ಲಿ ಭಯವೂ ಹುಟ್ಟುವಂತೆ ಮಾಡುತ್ತದೆ. ಇವೆರಡು ಸಹ ದೇವನು ಮತ್ತು ಮನುಷ್ಯನಲ್ಲಿ ಪರಸ್ಪರ ಇರಬೇಕಾದ ನಿಜವಾದ ಸಂಬಂಧದ ನೆಲೆಯನ್ನು ಪ್ರಕಟಗೊಳಿಸಲಿಕ್ಕೆ ಅತ್ಯಗತ್ಯವಾಗಿದೆ.

ನಾವು ಚಿಂತಿಸುವುದಾದರೆ ಒಂದು ವಿಷಯವನ್ನು ನಮಗೆ ಮನವರಿಯಲು ಸಾಧ್ಯ. ಅಂದರೆ, ಒಂದೋ ಪ್ರೀತಿಯಿಂದ ಅಥವಾ ಭಯದಿಂದ ಮಾತ್ರವೇ ಸಂಪೂರ್ಣವಾದ ಅನುಕರಣೆ ಮನುಷ್ಯನಲ್ಲಿ ಉಂಟಾಗಲು ಸಾಧ್ಯ. ಪ್ರೀತಿಯಿಂದಲೇ ಉತ್ತಮವಾದ ಸಂಬಂಧವನ್ನು ಸ್ಥಾಪಿಸಲು ಸಾಧ್ಯವೆಂಬುದು ದಿಟ. ಆದರೆ ಕೆಲವರನ್ನು ಪ್ರೀತಿಯಿಂದ ಗೆಲ್ಲಲು ಸಾಧ್ಯವಿಲ್ಲ. ಅಂಥವರಿಗೆ 'ಭಯ' ಅಥವಾ 'ನಷ್ಟ' ದಿಂದ ಮಾತ್ರವೇ ಅವರಲ್ಲಿ ಏನಾದರೂ ಪರಿವರ್ತನೆ ಉಂಟುಮಾಡಲು ಶಕ್ಯವಾಗುವುದು. ದೇವರ ವಿಶೇಷ ಗುಣಗಳನ್ನು ವಿವರಿಸುವ ಒಂದು ನೈಜಧರ್ಮ ಇವೆರಡನ್ನೂ ದೇವರ ಗುಣಗಳಲ್ಲಿ ಸೇರಿಸುವುದು ಅವಶ್ಯವಾಗಿದೆ. ಕಾರುಣ್ಯ ಮತ್ತು ಶಿಕ್ಷೆಯನ್ನು ದೇವರ ಗುಣಗಳಲ್ಲಿ ಸೇರಿಸದ ಒಂದು ಧರ್ಮ ಸಂಪೂರ್ಣವಾಗಲಾರದು. ಈ ಎರಡೂ ಗುಣಗಳನ್ನು ಸೇರಿಸದೆ ದೈವಿಕ ಗುಣಗಳ ಬಗ್ಗೆ ಪರಾಮರ್ಶಿಸುವ ಒಂದು ಧರ್ಮ ಸಾರ್ವತ್ರಿಕ ಅಥವಾ ಸಾರ್ವಲೌಕಿಕ ಧರ್ಮವೆಂದು ಹೇಳಲಿಕ್ಕೆ ಸಾಧ್ಯವಾಗಲಾರದು.

ದೇವರ ಗುಣಗಳ ಬಗ್ಗೆ ವಿವರಿಸುವ ವೇಳೆಯಲ್ಲಿ ಪವಿತ್ರ ಖುರ್‌ಆನ್ ಈ ಎರಡು ಅಂಶಗಳನ್ನು ಪರಿಗಣಿಸಿಕೊಂಡು ಮನುಷ್ಯ ಸ್ವಭಾವದ ಸರಿಯಾದ ನೆಲೆಯನ್ನು ಗುರುತಿಸಿದೆ. ಸಮುದಾಯದಲ್ಲಿ ನಾಗರಿಕತೆಯಲ್ಲಿ ಉನ್ನತ ಮಟ್ಟದಲ್ಲಿರುವವರ ಸ್ವಭಾವವನ್ನೂ ಮತ್ತಿತರ ವರ್ಗಕ್ಕೆ ಸೇರಿದ ಜನರ ಸ್ವಭಾವವನ್ನೂ ನೈಸರ್ಗಿಕವಾದ ಸ್ವಭಾವವನ್ನೂ ಪರಿಗಣಿಸಿಕೊಂಡು ದೇವರ ಈ ಗುಣನಾಮ (ಮಾಲಿಕಿ ಯೌಮುದ್ದೀನ್)ವನ್ನು ಪವಿತ್ರ ಖುರ್‌ಆನ್ ವಿಶದ ಪಡಿಸುತ್ತದೆ. ಸಮಾಜದಲ್ಲಿ ಉನ್ನತಮಟ್ಟದಲ್ಲಿರುವ ಜನರು ಸ್ವಾಭಾವಿಕವಾಗಿಯೇ ಒಳಿತುಮಾಡಲು ಪ್ರೇರೇಪಿತ ರಾಗಿರುತ್ತಾರೆ. ಕೀಳು ಮಟ್ಟದಲ್ಲಿರುವ ಜನರು ಮನುಷ್ಯರೊಡನೆ ತೋರಿಸಬೇಕಾದ ಅವರ ಕರ್ತವ್ಯಗಳನ್ನು ಮರೆತಿರುತ್ತಾರೆ. ಈ ರೀತಿಯಾಗಿ ಕೀಳ್ಮಟ್ಟದಲ್ಲಿರುವ ಜನರ ಪೈಕಿ ಕೆಲವರನ್ನು ಹೊರತು ಬಾಕಿಯವರೆಲ್ಲರೂ 'ಭಯ'ದಿಂದ ಮಾತ್ರ ಕರ್ತವ್ಯನಿರತರಾಗುತ್ತಾರೆ. ಧಾರ್ಮಿಕ ಅಥವಾ ಆಧ್ಯಾತ್ಮಿಕವಾದ ಸುಧಾರಣೆ ಈ ಜನರಲ್ಲಿ ಉಂಟಾಗಬೇಕಾದರೆ ಒಂದೋ ಅವರಿಗೆ 'ನಷ್ಟ' ಉಂಟಾಗಬಹುದೆಂಬ ಶಂಕೆ ಅಥವಾ 'ಶಿಕ್ಷೆ' ಬಂದೆರಗಬಹುದೆಂಬ ಭಾವನೆ ಮೂಡಬೇಕಾಗಿದೆ. ಮನುಷ್ಯ ಮತ್ತು ದೇವರ ನೇರ ಸಂಬಂಧ ಸ್ಥಾಪಿಸಲು ಸಾಧ್ಯವೆಂದು ಹೇಳುವ ಇಸ್ಲಾಮಿನಂತಹ ಒಂದು ಧರ್ಮಕ್ಕೆ ಮನುಷ್ಯನ ಈ ರೀತಿಯ ಸ್ವಭಾವದ ಬಗ್ಗೆ ಸರಿಯಾದ ಪರಿಗಣನೆ ಇರಲೇಬೇಕಾಗಿದೆ. ದೇವರ ಈ ಎರಡು ಗುಣಗಳನ್ನು - ಪ್ರೀತಿ ಮತ್ತು ಕೋಪವನ್ನು - ಇಸ್ಲಾಂ ಒತ್ತಿ ಹೇಳುತ್ತಾ ಸಂಪೂರ್ಣವಾದ ವಿಶೇಷ ಗುಣಗಳನ್ನು ದೇವರಿಗೆ ಇಸ್ಲಾಂ ನೀಡಿದೆ. ಆದರೆ ದೇವಕ್ರೋಧ ಅವನ ಕಾರುಣ್ಯಕ್ಕೆ ಅಧೀನವಾಗಿಯೇ ವರ್ತಿಸುತ್ತದೆಂದು ಇಸ್ಲಾಂ ಬೋಧಿಸುತ್ತದೆ. "ನನ್ನ ಕಾರುಣ್ಯ ಸಕಲ ವಸ್ತುಗಳನ್ನೂ ವ್ಯಾಪಿಸಿಕೊಂಡಿದೆ" ಎಂದು ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ನುಡಿದಿದ್ದಾನೆ. ಅಂದರೆ ದೇವರ ಕರುಣೆ ಕ್ರೋಧಕ್ಕಿಂತ ಉನ್ನತಮಟ್ಟದಲ್ಲಿ ವರ್ತಿಸುತ್ತದೆಂದು ವ್ಯಕ್ತಗೊಳಿಸಲಾಗಿದೆ. ಕ್ರೋಧದ ಉದ್ದೇಶ ಮನುಷ್ಯನನ್ನು 'ಶುದ್ಧೀಕರಿಸಿ' ತೆಗೆಯುವುದಾಗಿದೆ; ಹಾಗಲ್ಲದೆ 'ನೋವು' ಉಂಟುಮಾಡಲಿಕ್ಕೆ ಮಾತ್ರವಿರುವುದಲ್ಲ.

★

(ಮುಂದುವರಿಯುವುದು)

* * * * * * * * * * * * * * * * * * * * * * * * * * * * * * *

# ಹಿಜ್ರತ್

* ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್

* * * * * * * * * * * * * * * * * * * * * * * * * * * * * * *

ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಹಾಗೂ ಅವರ ಅನುಯಾಯಿಗಳು ಮಕ್ಕವನ್ನು ತ್ಯಜಿಸಿ ಹಿಜ್ರತ್* ಹೋಗುವ ತಯಾರಿ ಪ್ರಾರಂಭಿಸಿದರು. ಕುಟುಂಬಗಳು ಒಂದೊಂದಾಗಿ ಮಕ್ಕದಿಂದ ನಿರ್ಗಮಿಸತೊಡಗಿತು. ದೇವ ಸಾಮ್ರಾಜ್ಯವನ್ನು ಎದುರುನೋಡುತ್ತಿದ್ದ ಮುಸಲ್ಮಾನರು ಆವೇಶಭರಿತ ರಾಗಿದ್ದರು. ಕೆಲವೊಮ್ಮೆ ರಾತ್ರ ಬೆಳಗಾಗುವುದರೊಳಗೆ ಒಂದು ಬೀದಿ ಸಂಪೂರ್ಣ ಜನಶೂನ್ಯವಾಗುತ್ತಿತ್ತು. ಜನರು ತಮ್ಮ ಮನೆಮಾರು ಉಪೇಕ್ಷಿಸಿ ಮದೀನಕ್ಕೆ ತೆರಳಿದರೆಂಬ ಸಂಗತಿ ಮಕ್ಕ ನಿವಾಸಿಗಳಿಗೆ ಮರುದಿನ ಬೆಳಕು ಹರಿದಾಗ ತಿಳಿಯುತ್ತಿತ್ತು. ಇಸ್ಲಾಂ ಧರ್ಮ ಶ್ರದ್ಧೆಯು ಜನರ ಹೃದಯಗಳನ್ನು ಇಷ್ಟೊಂದು ಆಳವಾಗಿ ಸ್ವಾಧೀನ ಪಡಿಸಿರುವುದನ್ನು ಕಂಡು ವಿರೋಧಿಗಳು ಬೆರಗಾ ಗುತ್ತಿದ್ದರು.

ಹೀಗೆ, ಮಕ್ಕ ಮುಸಲ್ಮಾನರಿಂದ ಬರಿದಾಯಿತು. ಕೊನೆಗೆ, ಕೆಲವು ಗುಲಾಮರು, ಸ್ವಯಂ ಪೈಗಂಬರರು ಹಾಗೂ ಹ| ಅಬೂಬಕರ್ ಮತ್ತು ಹ| ಅಲಿ ಮಾತ್ರ ಮಕ್ಕದಲ್ಲಿ ಬಾಕಿ ಉಳಿದಿದ್ದರು. ತಮ್ಮ ಬೇಟೆ ಕೈ ತಪ್ಪಿ ಹೋಗುತ್ತಿರುವುದನ್ನು ಗಮನಿಸಿದ ಮಕ್ಕದ ವಿರೋಧಿ ನೇತಾರರು ಪುನಃ ಒಂದುಗೂಡಿ ಸಮಾಲೋಚನೆ ನಡೆಸಿದರು. ಈಗ ಪೈಗಂಬರರನ್ನು ವಧಿಸಿಬಿಡುವುದೇ ಸೂಕ್ತವೆಂದು ಅವರು ತೀರ್ಮಾನಿಸಿದರು. ದೇವರ ವಿಧಿಲೀಲೆ ಅದೆಷ್ಟು ವಿಚಿತ್ರ! ಮುಹಮ್ಮದ್ ಪೈಗಂಬರರನ್ನು ವಧಿಸಲು ವಿರೋಧಿಗಳು ನಿಗದಿಪಡಿಸಿದ ದಿನವೂ ಮಕ್ಕವನ್ನು ತ್ಯಜಿಸಿ ಮದೀನಕ್ಕೆ ಹಿಜ್ರತ್ ಹೋಗಲು ಅಲ್ಲಾಹನು ಪೈಗಂಬರರಿಗೆ ನಿರ್ದೇಶ ನೀಡಿದ ದಿನವೂ ಒಂದೇ ಆಗಿತ್ತು!

ಪೈಗಂಬರರನ್ನು ಮುಗಿಸಿ ಬಿಡುವುದಕ್ಕಾಗಿ ನಿಗದಿಪಡಿಸಲಾದ ದಿನದಂದು ರಾತ್ರಿ ವಿರೋಧಿಗಳ ತಂಡ ಅವರ ಮನೆಯ ಬಳಿ ಜಮಾಯಿಸುತ್ತಿದ್ದಂತೆಯೇ ಕತ್ತಲೆಯಲ್ಲಿ ಹಝ್ರತ್ ಪೈಗಂಬರರು ಮದೀನಕ್ಕೆ ಹೋಗುವ ಸಲುವಾಗಿ ತನ್ನ ಮನೆಯಿಂದ ಹೊರನಡೆದರು. ತಮ್ಮ ಈ ನೀಚ ಯೋಜನೆಯ ಕುರಿತು ಪೈಗಂಬರರಿಗೆ ಮೊದಲೇ ತಿಳುವಳಿಕೆ ಲಭಿಸಿರಬಹುದೆಂದು ವಿರೋಧಿಗಳು ಖಂಡಿತವಾಗಿಯೂ ತಿಳಿದಿರಬಹುದು. ಆದರೆ ಕೂಡ ತಮ್ಮ ಕಣ್ಣೆದುರಲ್ಲೇ ಪೈಗಂಬರರು ಮನೆಯಿಂದ ಹೊರನಡೆ ಯುತ್ತಿದ್ದಾಗ ಅವರ ಮೇಲೆ ಆಕ್ರಮಣ ಮಾಡುವ ಬದಲು ಇದಾರೋ ಬೇರೆ ವ್ಯಕ್ತಿ ಇರಬಹುದೆಂದು ತಿಳಿದು ಗಲಿಬಿಲಿಯಿಂದ ಅವರು ಪೈಗಂಬರರಿಗೆ ದಾರಿ ಬಿಟ್ಟುಕೊಟ್ಟರು. ಮಾತ್ರವಲ್ಲ, ಈ ವ್ಯಕ್ತಿ, ನಾವು ಮನೆಯನ್ನು ಸುತ್ತುವರಿದಿರುವ ಸಂಗತಿ ಪೈಗಂಬರರಿಗೆ ತಿಳಿಸಿ ಬಿಡುವನೇ ಎಂಬ ಭಯದಿಂದ ಅವರು ಸ್ವಯಂ ಪೈಗಂಬರರಿಂದ ದೂರ ದೂರ ಸರಿದು ಮರೆಯಾಗಲು ಶ್ರಮಿಸಿದರು!

ತನ್ನೊಂದಿಗೆ ಯಾತ್ರೆಯಲ್ಲಿ ಸೇರಿಕೊಳ್ಳುವಂತೆ ಪೈಗಂಬರರು ತನ್ನ ಆಪ್ತ ಸ್ನೇಹಿತರಾಗಿದ್ದ ಅಬೂಬಕರ್(ರ)ರಿಗೆ ಹಿಂದಿನ ದಿನವೇ ತಿಳಿಸಿದ್ದರು. ಅದರಂತೆ ಅವರು ಸಹ ಪ್ರವಾದಿಯೊಂದಿಗೆ ಸೇರಿಕೊಂಡು

* ವಿಶ್ವಾಸ ಸಂರಕ್ಷಣೆಗಾಗಿ ಸ್ವಂತ ಊರನ್ನು ಬಿಟ್ಟು ಇನ್ನೊಂದು ಊರಿಗೆ ಹೋಗಿ ನೆಲಸುವ ಧಾರ್ಮಿಕ ವಲಸೆಯನ್ನು ಅರಬಿ ಭಾಷೆಯಲ್ಲಿ ಹಿಜ್ರತ್ ಎಂದು ಹೇಳಲಾಗುತ್ತದೆ.

ಈರ್ವರೂ ಮಕ್ಕ ಬಿಟ್ಟು ಹೊರ ನಡೆದರು. ಮಕ್ಕದಿಂದ ಮೂರು ನಾಲ್ಕು ಮೈಲು ದೂರದ "ಸೌರ್" ಎಂಬ ಬೆಟ್ಟದಲ್ಲಿನ ಒಂದು ಗುಹೆಯೊಳಗೆ ಅಡಗಿ ಕುಳಿತು ಆ ರಾತ್ರಿ ಅಲ್ಲಿಯೇ ಆಶ್ರಯವನ್ನು ಪಡೆದರು. *

ಹಝ್ರತ್ ಪೈಗಂಬರರು ಮಕ್ಕದಿಂದ ಹೊರಟು ಹೋಗಿರುವುದಾಗಿ ವಿರೋಧಿಗಳಿಗೆ ತಿಳಿಯುತ್ತಲೇ ಅವರು ಒಂದು ಬಲಿಷ್ಠ ಭಟರ ಗುಂಪನ್ನು ಸಜ್ಜುಗೊಳಿಸಿ ಪೈಗಂಬರರನ್ನು ಹಿಂಬಾಲಿಸಿ ಹಿಡಿಯಲು ಕಳುಹಿಸಿದರು. ಓರ್ವ ಹೆಜ್ಜೆಗುರುತು ಹಿಡಿಯುವ ತಜ್ಞನನ್ನು ಸಹ ಅವರೊಂದಿಗೆ ಕಳುಹಿಸಲಾಯಿತು. ಪೈಗಂಬರರ ಹೆಜ್ಜೆ ಗುರುತುಗಳನ್ನು ಅನುಗಮಿಸುತ್ತಾ ಇವರು 'ಸೌರ್' ಬೆಟ್ಟದ ಗುಹೆಯವರೆಗೂ ಬಂದರು. ಅಲ್ಲಿಂದ ಮುಂದಕ್ಕೆ ಅವರು ಹೋದ ಕುರುಹುಗಳು ಕಂಡು ಬರಲಿಲ್ಲ. ಹೆಜ್ಜೆ ಗುರುತು ಪರಿಣತನು ಆ ಗುಹೆಯ ಪ್ರವೇಶದ್ವಾರದಲ್ಲಿ ನಿಂತು ದೃಢ ಸ್ವರದಲ್ಲಿ ತನ್ನ ಜತೆಯವರೊಡನೆ ಹೇಳಿದನು — "ಮುಹಮ್ಮದ್ ಇದರೊಳಗೆ ಇರಬಹುದು; ಇಲ್ಲವಾದರೆ ಆಕಾಶಕ್ಕೆ ಏರಿ ಹೋಗಿರಬೇಕು." ಈ ಮಾತುಗಳನ್ನು ಕೇಳಿ ಹ| ಅಬೂಬಕರ್‌ರವರ ಎದೆ ನಡುಗಿತು. ಅವರು ಮೆಲ್ಲನೆ ಪೈಗಂಬರರ ಕಿವಿಯಲ್ಲಿ ಹೇಳಿದರು - "ಇದೀಗ ಶತ್ರುಗಳು ನಮ್ಮನ್ನು ಹಿಡಿಯಲಿದ್ದಾರೆ. ಅವರು ಯಾವುದೇ ಕ್ಷಣದಲ್ಲಿ ಈ ಗುಹೆಯೊಳಗೆ ಪ್ರವೇಶಿಸಬಹುದು." ಪೈಗಂಬರರು ದೃಢವಾಗಿಯೇ ಉತ್ತರಿಸಿದರು:

لَا تَحْزَنْ إِنَّ اللّٰهَ مَعَنَا

ಅಬೂಬಕರ್ ಭಯಪಡದಿರಿ, ನಿಶ್ಚಯವಾಗಿಯೂ ಅಲ್ಲಾಹನು ನಮ್ಮೊಂದಿಗಿದ್ದಾನೆ. **

ಇದನ್ನು ಕೇಳಿ ಹ| ಅಬೂಬಕರ್ ಈ ರೀತಿ ಹೇಳಿದರು:

"ಅಲ್ಲಾಹನ ಪ್ರವಾದಿಯವರೇ, ನಾನು ನನ್ನ ಪ್ರಾಣದ ಕುರಿತು ಭಯದಿಂದ ಆ ರೀತಿ ಹೇಳಲಿಲ್ಲ. ನಾನಾದರೋ ಒಬ್ಬ ಮಾಮೂಲಿ ಮನುಷ್ಯ. ನಾನು ಕೊಲ್ಲಲ್ಪಟ್ಟರೂ ಒಬ್ಬ ಸಾಮಾನ್ಯ ವ್ಯಕ್ತಿ ಕೊಲ್ಲಲ್ಪಟ್ಟಂತೆ. ಆದರೆ ಪೈಗಂಬರರೇ, ತಮ್ಮ ಜೀವದ ಕುರಿತು ಭಯದಿಂದ ನಾನು ಆ ರೀತಿ ಹೇಳಿದೆ. ತಮ್ಮ ಪ್ರಾಣಕ್ಕೇನಾದರೂ ಆಪತ್ತು ಬಂದಲ್ಲಿ ಲೋಕದಿಂದ ಆಧ್ಯಾತ್ಮಿಕತೆ ನಿರ್ಮೂಲನವಾಗಿ ಧರ್ಮಸಂಸ್ಥಾಪನೆಯ ಕಾರ್ಯವೇ ಸ್ಥಗಿತಗೊಳ್ಳುವುದಲ್ಲ ಎಂದು ಭಯಪಟ್ಟೆ." ಪೈಗಂಬರರು ಅವರನ್ನು ಸಾಂತ್ವನಗೊಳಿಸುತ್ತಾ ಹೇಳಿದರು: "ಅಂತಿದ್ದರೂ ಭಯಪಡಬೇಕಾದ ಅಗತ್ಯವಿಲ್ಲ. ಮೂರನೆಯವನಾಗಿ ದೇವರೂ ಸಹ ನಮ್ಮೊಂದಿಗಿದ್ದಾನೆ."

ಇಸ್ಲಾಂ ಧರ್ಮ ಜ್ಯೋತಿಯನ್ನು ಪ್ರಕಾಶಮಯಗೊಳಿಸಲು ಅಲ್ಲಾಹನು ನಿಶ್ಚಯಿಸಿರುವುದರಿಂದ ಮಕ್ಕದ ನಿವಾಸಿಗಳ ಅಧೋಗತಿ ಸಹ ಅದರೊಂದಿಗೆ ಜೋಡಿಸಲ್ಪಟ್ಟಿತ್ತು. ಅವರ ನೇತ್ರಗಳಿಗೆ ಅಲ್ಲಾಹನು ಪರದೆ ಹಾಕಿದನು. ಅವರು ಹೆಜ್ಜೆಗುರುತು ಪರಿಣತನ ಮಾತುಗಳನ್ನು ಅಪಹಾಸ್ಯ ಮಾಡಿ ತಿರಸ್ಕರಿಸಿಬಿಟ್ಟರು. ಹಾವು ಚೇಳುಗಳಿಂದ ತುಂಬಿರುವ ಈ ಗುಹೆಯೊಳಗೆ ಯಾರಾದರೂ ಆಶ್ರಯ ಪಡೆಯಲು ಸಾಧ್ಯವೇ? ವಿವೇಕವಿರುವ ಯಾವನಾದರೂ ವ್ಯಕ್ತಿ ಇದರೊಳಗೆ ಅಡಗಿ ಕೂರುವನೇ? ಎಂದೆಲ್ಲಾ ಹೇಳಿ ಗುಹೆಯೊಳಗೆ ಬಗ್ಗಿಯೂ ಸಹ ನೋಡದೆ ತಮ್ಮ ಹೆಜ್ಜೆ ಗುರುತು ತಜ್ಞನನ್ನು ಹೀನೈಸುತ್ತಾ ಅವರು ಹಿಂದಿರುಗಿದರು.

ಪೈಗಂಬರ್(ಸ) ಮತ್ತು ಅಬೂಬಕರ್(ರ) ಆ ಗುಹೆಯೊಳಗೆ ಎರಡು ದಿನಗಳನ್ನು ಕಳೆದರು. ಮೂರನೆಯ ದಿನ ಬೆಳಿಗ್ಗೆ ಅವರಿಗೆ ಯಾತ್ರೆ ಮುಂದುವರಿಸಲು ಪೂರ್ವನಿಶ್ಚಿತ ಯೋಜನೆಯಂತೆ ಎರಡು ಒಂಟೆಗಳನ್ನು ಒದಗಿಸಲಾಯಿತು. ಒಂದರಲ್ಲಿ ಹ| ಪೈಗಂಬರರು ಮತ್ತು ಅವರ ಮಾರ್ಗದರ್ಶಿ ಸವಾರಿ ಹೊರಟರೆ, ಇನ್ನೊಂದರಲ್ಲಿ ಹ| [illegible]ಕರ್ ಮತ್ತು ಅವರ ಸೇವಕ ಆಮಿರುಬ್ನು ಫುಹೈ[illegible]ಟರು. ಮದೀನದ ಕಡೆ ಸವಾರಿ ಹೊರಡುವ ಮೊದಲು ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಒಮ್ಮೆ ಮಕ್ಕದ ಕಡೆ ಮುಖ ಮಾಡಿ ನಿಂತರು. ಅವರ ಹೃದಯದಲ್ಲಿ ಉದ್ವೇಗದ ಅಲೆಗಳು ಎದ್ದವು. ತನ್ನ ಜನ್ಮ ದೇಶವಾದ ಪವಿತ್ರ ಮಕ್ಕದ ಕಡೆ ಅವರು ತುಂಬಿದ

* ಬುಖಾರಿ - ಬಾಬ್ ಹಿಜ್ರತುನ್ನಬೀ(ಸ)

** ಬುಖಾರಿ - ಬಾಬ್ ಮುನಾಖಿಬುಲ್ ಮುಹಾಜಿರೀನ್

ಕಣ್ಣುಗಳಿಂದ ನೋಡುತ್ತಿದ್ದರು. ತಾನು ಬಾಲ್ಯಕಾಲವನ್ನು ಕಳೆದ ನಾಡು. ಮೊತ್ತಮೊದಲಿನ ದೇವವಾಣಿ ತನಗೆ ಲಭಿಸಿದ ನಾಡು. ಹಝ್ರತ್ ಇಸ್ಮಾಯೀಲ್(ಅ) ಮೊದಲ್ಗೊಂಡು ತನ್ನ ತಾತ ಮುತ್ತಾತಂದಿರು ಅತ್ಯಂತ ವೈಭವದಿಂದ ಬಾಳಿಬೆಳಗಿದ ನಾಡು. ಪೈಗಂಬರರು ಉದ್ವೇಗಭರಿತರಾಗಿ ಸ್ವಲ್ಪ ಹೊತ್ತು ಹಾಗೆಯೇ ನಿಂತು ಮಕ್ಕದ ಕಡೆ ನೋಡಿದರು. ಗದ್ಗದ ಕಂಠದಿಂದ ಅವರು ಈ ರೀತಿ ಹೇಳಿದರು: "ಎಲೈ ಮಕ್ಕ, ನೀನು ನನಗೆ ಪ್ರಪಂಚದ ಇನ್ನಾವುದೇ ಪ್ರದೇಶಕ್ಕಿಂತಲೂ ಹೆಚ್ಚು ಪ್ರಿಯವಾಗಿರುವೆ. ಆದರೆ, ನಿನ್ನ ಜನರು ನನ್ನನ್ನು ಇಲ್ಲಿ ಬದುಕಲು ಬಿಡುವುದಿಲ್ಲ!" ಇದನ್ನು ಕೇಳಿ ದುಃಖಭರಿತನಾದ ಹಝ್ರತ್ ಅಬೂಬಕರ್ ಹೇಳಿದರು- "ಈ ನಗರದ ಜನರು ಅವರ ಪ್ರವಾದಿಯನ್ನು ತಿರಸ್ಕರಿಸಿ ಅಟ್ಟಿಬಿಟ್ಟಿದ್ದಾರೆ. ಅವರ ವಿನಾಶಕ್ಕೆ ಇದು ಕಾರಣವಾಗುವುದು."*

ಆ ಕಡೆ, ತಮ್ಮ ಶ್ರಮ ವಿಫಲವಾಯಿತೆಂದು ಕಂಡ ವಿರೋಧಿಗಳು ತಪ್ಪಿಸಿಕೊಂಡ ಆ ಈರ್ವರನ್ನು ಹಿಡಿದು ಕೊಡುವವರಿಗೆ ಬಹುಮಾನ ಕೊಡಲಾಗುವುದೆಂದು ಘೋಷಿಸಿದರು. ಮುಹಮ್ಮದರನ್ನಾಗಲೀ ಅಬೂಬಕರ್‌ರನ್ನಾಗಲೀ ಜೀವಂತ ಅಥವಾ ಕೊಂದು ತಂದೊಪ್ಪಿಸುವವರಿಗೆ ನೂರು ಒಂಟೆಗಳನ್ನು ಬಹುಮಾನವಾಗಿ ನೀಡಲಾಗುವುದೆಂದು ಸಾರಿದರು. ಮಕ್ಕದ ಸುತ್ತುಮುತ್ತಲಿನ ಗೋತ್ರಗಳೆಡೆಯಲ್ಲೂ ಈ ವಿವರವನ್ನು ತಕ್ಷಣವೇ ಪ್ರಚುರಪಡಿಸಲಾಯಿತು. ಹಾಗೆ, ಸುರಾಖ ಇಬ್ನು ಮಾಲಿಕ್ ಎಂಬ ಹೆಸರಿನ ಒಬ್ಬ ಬೆಡುಯೀನ್ ಧೀರ ಸರದಾರ ಈ ಬಹುಮಾನದ ಆಸೆಯಲ್ಲಿ ಮುಹಮ್ಮದ್ ಪೈಗಂಬರರನ್ನು ಹಿಡಿಯಲು ಹೊರಟರು. ತನ್ನ ಕುದುರೆಯೇರಿ ಅರಸುತ್ತಾ ನಡೆದ ಸುರಾಖ, ಮದೀನದ ದಾರಿಯಲ್ಲಿ ಹೋಗುತ್ತಿದ್ದ ಎರಡು ಒಂಟೆ ಸವಾರರನ್ನು ಕಂಡರು. ಅದು ಮುಹಮ್ಮದ್ ಮತ್ತು ಅವರ ಸಂಗಡಿಗ ಆಗಿರಬಹುದೆಂದು ಅವರಿಗೆ ಖಚಿತವಾಯಿತು. ಕುದುರೆಯ ವೇಗವನ್ನು ಹೆಚ್ಚಿಸಿ ಅವರನ್ನು ಹಿಂಬಾಲಿಸಿದರು. ಆದರೆ, ಸ್ವಲ್ಪ ದೂರ ಸಾಗುವಷ್ಟರಲ್ಲೇ ಅವರ ಕುದುರೆ ಮುಗ್ಗರಿಸಿ ಬಿತ್ತು. ಸುರಾಖ ನೆಲಕ್ಕೆ ಬಿದ್ದುಬಿಟ್ಟರು. ಐತಿಹಾಸಿಕ ಮಹತ್ವವಿರುವ ಈ ಘಟನೆಯನ್ನು, ನಂತರ ಇಸ್ಲಾಂ ಧರ್ಮ ಸ್ವೀಕರಿಸಿದ ಸುರಾಖ ಸ್ವಯಂ ಈ ರೀತಿ ವಿವರಿಸುತ್ತಾರೆ:-

"ನಾನು ಕುದುರೆಯಿಂದ ಕೆಳಗೆ ಬಿದ್ದಾಗ ಅರಬರ (ಅಂಧವಿಶ್ವಾಸದ) ಆಚಾರ ಸಂಪ್ರದಾಯದಂತೆ ಬಾಣವನ್ನು ಎಸೆದು ಶಕುನ ಪರೀಕ್ಷೆ ಮಾಡಿದೆನು. ಫಲಿತಾಂಶ ಕೆಡುಕನ್ನು ಸೂಚಿಸಿತು. ಆದರೂ ನೂರು ಒಂಟೆಗಳ ಬಹುಮಾನವನ್ನು ನೆನಸಿದಾಗ ನನ್ನಲ್ಲಿ ಆಸೆ ಮರುಕಳಿಸಿತು. ನಾನು ಪುನಃ ಕುದುರೆಯನ್ನೇರಿ ಅವರನ್ನು ಬೆನ್ನಟ್ಟಿದೆ. ಮುಹಮ್ಮದ್ ಪೈಗಂಬರರು ನಿರ್ಭೀತರಾಗಿ ತನ್ನ ಒಂಟೆಯಲ್ಲಿ ಪ್ರಯಾಣಿಸುತ್ತಿದ್ದರು. ಅವರು ಹಿಂದಿರುಗಿ ನೋಡುತ್ತಿರಲಿಲ್ಲ. ಆದರೆ, ಪೈಗಂಬರರಿಗೆ ನನ್ನಿಂದ ಏನಾದರೂ ಹಾನಿಯಾಗಬಹುದೆಂಬ ಶಂಕೆಯಲ್ಲಿ ಹ| ಅಬೂಬಕರ್ ಪದೇಪದೇ ಹಿಂದಿರುಗಿ ನೋಡುತ್ತಿದ್ದರು. ಅದೇನು ನಾನು ಅವರ ಹತ್ತಿರಕ್ಕೆ ಬಂದು ಬಿಟ್ಟೆ ಎನ್ನುವಷ್ಟರಲ್ಲಿ ನನ್ನ ಕುದುರೆ ಎರಡನೇ ಬಾರಿ ಮುಗ್ಗರಿಸಿ ಬಿತ್ತು. ನಾನು ಬಲವಾಗಿ ನೆಲಕ್ಕೆ ಅಪ್ಪಳಿಸಿ ಬಿದ್ದೆ. ಆಗಲೂ ನಾನು ಬಾಣದಿಂದ ಅದೃಷ್ಟ ಪರೀಕ್ಷೆ ನಡೆಸಿದೆ. ಫಲಿತಾಂಶ ಅಶುಭವನ್ನೇ ಸೂಚಿಸಿತು.

ನನ್ನ ಕುದುರೆಯ ಕಾಲುಗಳು ಮರಳಲ್ಲಿ ಹೂತುಹೋಗಿದ್ದವು. ಬಹಳ ಪ್ರಯಾಸಪಟ್ಟು ಅದು ಬಿಡಿಸಿಕೊಳ್ಳುತ್ತಿರುವುದನ್ನು ನಾನು ಕಂಡೆ. ಆಗ ನನ್ನ ಮನಸ್ಸಿನಲ್ಲಿ ಅದ್ಭುತಕರವಾದ ಒಂದು ಪರಿವರ್ತನೆ ಉಂಟಾಯಿತು. ಈ ಜನರು ಪರಮಾತ್ಮನ ಅತಿ ಭದ್ರವಾದ ಸಂರಕ್ಷಣೆಯಲ್ಲಿದ್ದಾರೆಂದು ನನಗೆ ಮನವರಿಕೆಯಾಯಿತು. ಆಗ ನಾನು ಉಚ್ಚಸ್ವರದಿಂದ ಅವರನ್ನು ಕೂಗಿ ಕರೆದೆನು. ಅವರು ನನಗೆ ಹತ್ತಿರವಾದಾಗ, ನಾನು ಅವರಿಗೆ ನನಗಿದ್ದ ದುರುದ್ದೇಶದ ಕುರಿತು ವಿವರಿಸಿ, ಈಗ ಮನಃಪರಿವರ್ತನೆಯಾಗಿದೆಯೆಂದೂ ವಾಪಾಸು ಹೋಗಲು ತೀರ್ಮಾನಿಸಿರುವೆನೆಂದೂ ಹೇಳಿದೆ. "ನಿಶ್ಚಯವಾಗಿಯೂ ದೇವರು ನಿಮ್ಮೊಂದಿಗಿದ್ದಾನೆಂಬ ಬಗ್ಗೆ ನನಗೆ ದೃಢ ನಂಬಿಕೆ ಉಂಟಾಗಿದೆ- ಹಿಂದಿರುಗಲು ನನಗೆ ಅನುಮತಿ ನೀಡಿ." ಪ್ರವಾದಿವರ್ಯರು ನನ್ನ ಮಾತುಗಳನ್ನು ಕೇಳಿ ನನಗೆ ವಾಪಾಸಾಗಲು ಅನುಮತಿ ನೀಡಿದರು. ಆದರೆ, ತಮ್ಮ ಬಗ್ಗೆ

* ದುರ್‌ಖಾನಿ, ಮುಸ್ನದ್ ಅಹ್ಮದ್, ತಿರ್‌ಮದಿ.

ಯಾರಿಗೂ ಸುಳಿವು ನೀಡಬಾರದಾಗಿ ಹೇಳಿದರು. ನಾನದಕ್ಕೆ ಒಪ್ಪಿದೆ. ಹಝ್ರತ್ ಪೈಗಂಬರರ ಮುಖಾರವಿಂದವನ್ನು ನೋಡುತ್ತಿದ್ದಂತೆಯೇ ಈ ವ್ಯಕ್ತಿ ಓರ್ವ ಸತ್ಯಾತ್ಮರಾಗಿದ್ದಾರೆಂದೂ ಒಂದು ದಿನ ಖಂಡಿತವಾಗಿಯೂ ತನ್ನ ಉದ್ದೇಶಗಳಲ್ಲಿ ಜಯಗಳಿಸುವರೆಂದೂ ನನಗೆ ಎನಿಸತೊಡಗಿತು. ತಾನು ಜಯಶಾಲಿಯಾಗಿ ಹಿಂದಿರುಗುವ ಕಾಲದಲ್ಲಿ ನನಗೆ ಸಂರಕ್ಷಣೆ ಒದಗಿಸುವ ಕುರಿತು ಒಂದು ಅಭಯದಾನ ಬರೆದುಕೊಡುವಂತೆ ನಾನು ಪೈಗಂಬರರನ್ನು ವಿನಂತಿಸಿಕೊಂಡೆ. ಆಮಿರುಬ್ನು ಫುಹೈರರೊಡನೆ ಆ ರೀತಿಯ ಒಂದು ಅಭಯಪತ್ರ ಬರೆದುಕೊಡುವಂತೆ ಪೈಗಂಬರರು ನಿರ್ದೇಶಿಸಿದರು. ಅವರು ಪತ್ರ ಬರೆದು ನನ್ನ ಕೈಗಿತ್ತರು."*

ಸಂತೋಷದಿಂದ ಸುರಾಖ ಹಿಂದಿರುಗಲಣಿಯಾದಾಗ ಭವಿಷ್ಯದ ಒಂದು ಮಹತ್ವಪೂರ್ಣ ಘಟನೆಯ ಕುರಿತು ಅಲ್ಲಾಹನು ಪೈಗಂಬರರಿಗೆ ತಿಳುವಳಿಕೆ ನೀಡಿದನು. ಹಝ್ರತ್ ಪೈಗಂಬರರು ಅವರನ್ನು ಕರೆದು "ಸುರಾಖ, ಕಿಸ್ರಾ ಚಕ್ರವರ್ತಿಯ ರಾಜಕಂಕಣಗಳು ನಿನ್ನ ಕೈಗೆ ನೀಡಲ್ಪಟ್ಟಾಗ ನಿನಗೆಷ್ಟು ಸಂತೋಷವಾಗಬಹುದು?" ಸುರಾಖ ಆಶ್ಚರ್ಯ ಚಕಿತರಾಗಿ ಕೇಳಿದರು - "ಏನು, ಇರಾನ್ ದೇಶದ ಚಕ್ರವರ್ತಿಯಾದ ಕಿಸ್ರಾರ ಸ್ವರ್ಣ ಬಳೆಗಳೇ!?" ಪೈಗಂಬರರು ಮರುನುಡಿದರು "ಹೌದು."**

ಹದಿನಾರು ಹದಿನೇಳು ವರ್ಷಗಳ ಬಳಿಕ ಈ ಭವಿಷ್ಯವಾಣಿ ಅಕ್ಷರಶಃ ನೆರವೇರಿತು. ಸುರಾಖ ಇಸ್ಲಾಂ ಧರ್ಮ ಸ್ವೀಕರಿಸಿ ಮದೀನಕ್ಕೆ ಬಂದು ನೆಲಸಿದರು. ಹ| ಮುಹಮ್ಮದ್ ಪೈಗಂಬರರು ನಿಧನರಾದ ಬಳಿಕ ಹ| ಅಬೂಬಕರ್(ರ) ಇಸ್ಲಾಮಿನ ಪ್ರಥಮ ಖಲೀಫ ಹಾಗೂ ಹ|ಉಮರ್(ರ) ದ್ವಿತೀಯ ಖಲೀಫರಾದರು. ಈ ವೇಳೆಯಲ್ಲಿ ಇಸ್ಲಾಂ ಧರ್ಮದ ಪುರೋಗತಿಯನ್ನೂ ಬೆಳೆದು ಬರುತ್ತಿದ್ದ ಅದರ ಪ್ರಭಾವವನ್ನೂ ಕಂಡು ಆತಂಕಿತರಾದ ಇರಾನಿಯರು ಮುಸಲ್ಮಾನರನ್ನು ಸರ್ವನಾಶಮಾಡುವ ಉದ್ದೇಶದಿಂದ ಅವರ ಮೇಲೆ ಆಕ್ರಮಣ ಮಾಡಿದರು. ಆದರೆ ಇಸ್ಲಾಮಿಗೆದುರಾಗಿ ನಡೆಸಿದ ಈ ಹೋರಾಟದಲ್ಲಿ ಇರಾನಿಯರು ಮುಸ್ಲಿಮರನ್ನು ನಾಶಪಡಿಸುವ ಬದಲು ಅವರೇ ಸ್ವಯಂ ಸೋಲನ್ನಪ್ಪಿದರು. ಇರಾನಿನ ರಾಜಧಾನಿ ಮುಸಲ್ಮಾನರ ವಶವಾಯಿತು. ರಾಜಕೋಶ ಸಹ ಅವರ ಅಧೀನಕ್ಕೆ ಬಂತು. ಮುಸಲ್ಮಾನರ ಅಧೀನಕ್ಕೆ ಬಂದ ರಾಜ ಭಂಡಾರದಲ್ಲಿ, ಕಿಸ್ರಾ ಚಕ್ರವರ್ತಿ ರಾಜ ದರ್ಬಾರ ನಡೆಸುವಾಗ ಸಿಂಹಾಸನದಲ್ಲಿ ಕುಳಿತುಕೊಳ್ಳುವ ವೇಳೆ ಮಾತ್ರ ಧರಿಸುತ್ತಿದ್ದ ಪ್ರತಿಷ್ಠೆಯ ಚಿನ್ನದ ಬಳೆಗಳೂ ಇದ್ದವು. ಹಝ್ರತ್ ಪೈಗಂಬರರ ಹಿಜ್ರತ್ ವೇಳೆ ನಡೆದ ಮೇಲಿನ ಘಟನೆಯ ಕುರಿತು ಸುರಾಖ ಇತರ ಮುಸಲ್ಮಾನರೊಡನೆ ಬಹಳ ಅಭಿಮಾನದಿಂದ ಆಗಾಗ ಹೇಳುತ್ತಿದ್ದರು. "ಸುರಾಖ, ಕಿಸ್ರಾ ತೊಡುವ ರಾಜ ಬಳೆಗಳು ನಿನ್ನ ಕೈಗೆ ಬಂದಾಗ ನಿನ್ನ ಸ್ಥಿತಿ ಏನಿರಬಹುದು?" ಎಂಬುದಾಗಿ ಪೈಗಂಬರರು ಅವರೊಡನೆ ಹೇಳಿರುವ ವಿಚಾರ ಎಲ್ಲ ಮುಸಲ್ಮಾನರಿಗೂ ತಿಳಿದಿತ್ತು. ಇರಾನ್ ದೇಶದ ರಾಜಭಂಡಾರವನ್ನೂ ಯುದ್ಧದಲ್ಲಿ ಸ್ವಾಧೀನ ಪಡಿಸಲಾದ ಇತರ ಸಮಸ್ತ ಧನರಾಶಿಯನ್ನೂ ಖಲೀಫ ಹಝ್ರತ್ ಉಮರ್(ರ)ರವರ ಸಮಕ್ಷಮದಲ್ಲಿ ಹಾಜರು ಪಡಿಸಲಾಯಿತು. ಅದರಲ್ಲಿ ಕಿಸ್ರಾ ಧರಿಸುವ ರಾಜಕಂಕಣಗಳನ್ನು ಖಲೀಫ ಉಮರ್ ಕಂಡರು. ಆಗ ಅವರ ಕಣ್ಮುಂದೆ ಪೂರ್ವಕಾಲದ ಘಟನಾವಳಿಗಳು ಪ್ರತ್ಯಕ್ಷಗೊಂಡವು. ಆ ಅತ್ಯಂತ ಶೋಚನೀಯವಾದ ಹಾಗೂ ದುರ್ಬಲವಾದ ಪರಿಸ್ಥಿತಿ. ಆಗ ಪ್ರವಾದಿವರ್ಯರಿಗೆ ತನ್ನ ಸ್ವಂತ ಊರನ್ನು ತ್ಯಜಿಸಿ ಮದೀನದಲ್ಲಿ ಆಶ್ರಯ ಪಡೆಯಬೇಕಾಗಿ ಬಂದಿತ್ತು. ಕಣ್ಣುತಪ್ಪಿಸಿ ಓಡಿ ಹೋಗುತ್ತಿದ್ದ ಪೈಗಂಬರರನ್ನು ನೂರು ಒಂಟೆಗಳ ಬಹುಮಾನದ ಆಸೆಯಿಂದ ಬೆಂಬತ್ತಿದ ಸುರಾಖ! ಪೈಗಂಬರರನ್ನು ಜೀವಂತವಾಗಿಯಾಗಲಿ ಅಥವಾ ನಿರ್ಜೀವವಾಗಿಯಾಗಲಿ ಮಕ್ಕದ ಜನರಿಗೆ ತಂದೊಪ್ಪಿಸುತ್ತಿದ್ದರೆ ಸುರಾಖಗೆ 100 ಒಂಟೆಗಳ ಬೃಹತ್ ಬಹುಮಾನ ಲಭಿಸುತ್ತಿತ್ತು. ಅಂತಹ ಅಸಹಾಯಕ ಪರಿಸ್ಥಿತಿಯಲ್ಲಿ ಪೈಗಂಬರರು ಹೇಳುತ್ತಾರೆ - "ಸುರಾಖ, ಕಿಸ್ರಾ ಧರಿಸುವ ರಾಜಬಳೆಗಳು ನಿನ್ನ ಕೈಗೆ ಬಂದರೆ ನಿನಗೆ ಅದೆಷ್ಟು ಸಂತೋಷವಾಗುವುದು" ಎಂದು! ಎಷ್ಟೊಂದು

---

* ಬುಖಾರಿ - ಬಾಬ್ ಹಿಜ್ರತುನ್ನಬೀ

** ಸೀರತುಲ್ ಹಲ್ಬಿಯ, ಉಸೂದಲ್‌ಗಾಬ

ಮಹತ್ವಪೂರ್ಣವಾದ ಭವಿಷ್ಯವಾಣಿಯಿದು! ತನ್ನ ಮುಂದೆ ಕಿಸ್ರಾ ಸಾಮ್ರಾಟನ ಸ್ವರ್ಣ ಬಳೆಗಳನ್ನು ನೋಡುತ್ತಲೇ ಖಲೀಫ ಹ| ಉಮರ್‌ರವರ ಭಾವನೆಯಲ್ಲಿ ಈ ಎಲ್ಲ ಸಂಗತಿಗಳೂ ಒಮ್ಮೆ ಮಿಂಚಿದವು. ಅಲ್ಲಾಹನ ಅದ್ಭುತವಾದ ಶಕ್ತಿ ಪ್ರತಾಪಗಳ ಜ್ವಲಂತ ನಿದರ್ಶನ! ಸುರಾಖರನ್ನು ತನ್ನ ಬಳಿ ಕರೆತರುವಂತೆ ಖಲೀಫ ಉಮರ್ ಸೂಚಿಸಿದರು. ಸುರಾಖ ಹಾಜರಾದಾಗ ಕಿಸ್ರಾರ ಸ್ವರ್ಣ ಬಳೆಗಳನ್ನು ತನ್ನ ಕೈಗಳಲ್ಲಿ ಧರಿಸಿಕೊಳ್ಳುವಂತೆ ಖಲೀಫ ಅವರೊಡನೆ ಆಜ್ಞಾಪಿಸಿದರು. "ಪುರುಷರು ಸ್ವರ್ಣವನ್ನು ಧರಿಸುವುದು ನಿಷಿದ್ಧವಲ್ಲವೇ?" ಎಂದು ಕೇಳುತ್ತಾ ಸುರಾಖ ಅವುಗಳನ್ನು ಧರಿಸಲು ಒಪ್ಪಲಿಲ್ಲ. ಆಗ ಹ| ಉಮರ್ ವಿವರಿಸಿದರು: " ಹೌದು, ನಿಷಿದ್ಧ ಹೌದು. ಆದರೆ ಅದು ಈ ವಿಶಿಷ್ಟ ಸಂದರ್ಭಕ್ಕೆ ಅನ್ವಯಿಸುವುದಿಲ್ಲ. ನೀವು ಈ ಸ್ವರ್ಣ ಬಳೆಗಳನ್ನು ಧರಿಸಿರುವುದಾಗಿ ಅಲ್ಲಾಹನು ಪ್ರವಾದಿ ವರ್ಯರಿಗೆ ತೋರಿಸಿಕೊಟ್ಟಿರುತ್ತಾನೆ. ಆದುದರಿಂದ ನೀವಿದನ್ನು ಧರಿಸಬೇಕಾದುದು ಅನಿವಾರ್ಯವಾಗುತ್ತದೆ".

ಹಝ್ರತ್ ಪೈಗಂಬರರ ಒಂದು ಮಹತ್ವಪೂರ್ಣ ಭವಿಷ್ಯವಾಣಿಯು ತನ್ನ ಮೂಲಕ ಪೂರ್ಣಗೊಳ್ಳುವುದನ್ನು ಕಾಣಲು ಸುರಾಖ ಅತ್ಯಂತ ಕಾತರರಾಗಿದ್ದರು. ಅವರ ಆ ಆಕ್ಷೇಪಣೆ ಕೇವಲ ಶರೀಅತ್ ವಿಧಿಗಳ ಕುರಿತು ಮಾತ್ರ ಆಗಿತ್ತು. ಆ ಬಗ್ಗೆ ಸಂಶಯ ನಿವಾರಣೆಯಾದಾಗ ಸುರಾಖ ಸ್ವರ್ಣ ಬಳೆಗಳನ್ನು ತನ್ನ ಕೈಗಳಲ್ಲಿ ಧರಿಸಿಕೊಂಡರು. ಹಝ್ರತ್ ಮುಹಮ್ಮದ್ ಪೈಗಂಬರರ ಭವಿಷ್ಯವಾಣಿಯ ಪೂರ್ತೀಕರಣವನ್ನು ಅಲ್ಲಿ ನೆರೆದಿದ್ದ ಸಮಸ್ತ ಮುಸಲ್ಮಾನರು ತಮ್ಮ ಕಣ್ಣುಗಳಿಂದ ಕಂಡರು. ಒಂದೊಮ್ಮೆ ಮಕ್ಕದಿಂದ ಓಡಿಹೋಗಲು ನಿರ್ಬಂಧಿತ ರಾಗಿದ್ದ ಪೈಗಂಬರರು ಈಗ ಓರ್ವ ಸಾಮ್ರಾಟನ ಸ್ಥಾನದಲ್ಲಿ ಅಭಿಷಿಕ್ತಗೊಂಡಿದ್ದಾರೆ. ಅವರು ಬದುಕಿಲ್ಲವಾದರೂ ಅವರ ಅನುಯಾಯಿಗಳಿಗೆ ಅವರ ಭವಿಷ್ಯ ನುಡಿಗಳ ಸಾಕ್ಷಾತ್ಕಾರವನ್ನು ಕಂಡುಕೊಳ್ಳಲು ಸಾಧ್ಯವಾಯಿತು. ★


ಓದಿರಿ -

# ಯೇಸು ಎಲ್ಲಿ ಮಡಿದರು ?

ಬೈಬಲ್, ಖುರ್‌ಆನ್ ಮತ್ತು ಇತರ ಐತಿಹಾಸಿಕ ಸಾಕ್ಷ್ಯಗಳ ಆಧಾರದಲ್ಲಿ ಬರೆದ ಸಂಶೋಧನಾತ್ಮಕ ಗ್ರಂಥ

ಗ್ರಂಥಕರ್ತ : ಜಲಾಲುದ್ದೀನ್ ಶಮ್ಸ್

(ಮಾಜಿ ಇಮಾಂ, ಲಂಡನ್ ಮಸ್ಜಿದ್, ಲಂಡನ್)

ಬೆಲೆ: ರೂ. 15 ಅಂಚೆ ವೆಚ್ಚ : ರೂ. 1.00

ವ್ಯವಹರಿಸಿರಿ : ಜಮಾಅತ್ ಅಹ್ಮದಿಯಾ

10-23-1008/1 ಅನ್ಸಾರಿ ರೋಡ್, ಮಂಗಳೂರು -575 001

# ಬಾಬರಿ ಮಸ್ಜಿದ್ : ಪರೀಕ್ಷೆಗಳಲ್ಲಿ ದೈವಿಕ ಹಸ್ತ

* ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್
ಅಹ್ಮದಿಯಾ ಜಮಾಅತಿನ ಚತುರ್ಥ ಖಲೀಫ

وَمَنْ أَظْلَمُ مِمَّنْ مَّنَعَ مَسَٰجِدَ ٱللَّهِ أَن يُذْكَرَ فِيهَا
ٱسْمُهُۥ وَسَعَىٰ فِى خَرَابِهَآ ۚ أُو۟لَٰٓئِكَ مَا كَانَ لَهُمْ أَن
يَدْخُلُوهَآ إِلَّا خَآئِفِينَ ۚ لَهُمْ فِى ٱلدُّنْيَا خِزْىٌ وَلَهُمْ
فِى ٱلْءَاخِرَةِ عَذَابٌ عَظِيمٌ ﴿١١٥﴾
وَلِلَّهِ ٱلْمَشْرِقُ وَٱلْمَغْرِبُ ۚ فَأَيْنَمَا تُوَلُّوا۟ فَثَمَّ وَجْهُ
ٱللَّهِ ۚ إِنَّ ٱللَّهَ وَٰسِعٌ عَلِيمٌ ﴿١١٦﴾

(ಪವಿತ್ರ ಖುರ್‌ಆನ್ 2:115, 116)

ಇದು ಮುಸ್ಲಿಂ ಲೋಕದ ಅತ್ಯಂತ ದುಃಖದಾಯಕವಾದ ಕಾಲಘಟ್ಟವಾಗಿದೆ. ಮುಸ್ಲಿಮರಿಗೆ ಸಂಬಂಧಿಸಿ ಅತಿ ದುರಂತಮಯ ಕಾಲ. ಒಂದು ದೀರ್ಘಕಾಲದಿಂದ ಪರೀಕ್ಷೆಗಳ ಮತ್ತು ಸಂಕಷ್ಟಗಳ ಕೊನೆಯಿಲ್ಲದ ಒಂದು ಶೃಂಖಲೆಯೇ ಗೋಚರವಾಗುತ್ತದೆ. ಒಂದರ ನಂತರ ಇನ್ನೊಂದರಂತೆ ಪರೀಕ್ಷಾಘಟ್ಟಗಳು ತಲೆಯೆತ್ತುತ್ತಿವೆ. ಈ ಪರೀಕ್ಷೆಗಳಲ್ಲಿ ಅಂತರ್ಲೀನವಾಗಿರುವ ಅಲ್ಲಾಹನ ಸಂದೇಶವನ್ನು ಕೇಳಲಿಕ್ಕೆ ಮತ್ತು ಕಾಣಲಿಕ್ಕೆ ಕಿವಿ ಮತ್ತು ಕಣ್ಣು ಇಂದು ಕೂಡ ಅಧಿಕಾಂಶ ಜನರಿಗೆ ಇಲ್ಲದಾಗಿದೆ. ವಿಧಿಲಿಖಿತವನ್ನು ಓದಲು ಅವರು ಅಶಕ್ತರು. ಲೋಕದಿಂದ ಮುಸ್ಲಿಮರ ಪ್ರತಾಪ ಮತ್ತು ಪ್ರೌಢಿಮೆಯನ್ನು ನಿರ್ಮೂಲ ಮಾಡುವ ರೀತಿಯಲ್ಲಿ ಮುಸ್ಲಿಮರನ್ನು ಪರೀಕ್ಷೆಗೆ ಗುರಿಪಡಿಸಲು ಏನಾದರೂ ಕಾರಣ ಬೇಕಲ್ಲವೇ. ಪವಿತ್ರ ಖುರ್‌ಆನ್ ಎರಡು ರೀತಿಯ ಪರೀಕ್ಷಾ ಘಟ್ಟಗಳ ಕುರಿತು ಪ್ರಸ್ತಾಪಿಸುತ್ತದೆ. ಒಂದು, ಒಳ್ಳೆಯ ರೀತಿಯಲ್ಲಿರುವ ಸುಖಾಂತ್ಯದ ಪರೀಕ್ಷೆ. ಅಲ್ಲಾಹನು ತನ್ನ ಸತ್ಯವಿಶ್ವಾಸಿಗಳಾದ ಭಕ್ತದಾಸರನ್ನು ಇಂತಹ ಪರೀಕ್ಷೆಗಳಿಗೆ ಗುರಿಪಡಿಸುವನೆಂದು ಪವಿತ್ರ ಖುರ್‌ಆನ್ ಹೇಳುತ್ತದೆ. ಒಬ್ಬ ಸತ್ಯವಿಶ್ವಾಸಿ ಇಂತಹ ಪರೀಕ್ಷೆಗಳಿಗೆ ಈಡಾಗುವಾಗ ಪೂರ್ವಾಧಿಕ ಆರೋಗ್ಯಶಾಲಿಯಾಗಿಯೂ ಬಲಶಾಲಿಯಾಗಿಯೂ ಉನ್ನತಿಗೇರುತ್ತಾನೆ. ಇಂತಹ ಪರೀಕ್ಷೆಗಳಿಂದ ದೈವಿಕ ಜಮಾಅತುಗಳು ಯಾವಾಗಲೂ ಹೊಸ ಆವೇಶದಿಂದಲೂ ಉತ್ಸುಕತೆಯಿಂದಲೂ ಉತ್ತೇಜನದಿಂದಲೂ ಹೊರಗೆ ಬರುತ್ತದೆ. ತಮಗೆ ಅಭಿವೃದ್ಧಿಹೊಂದಲಿಕ್ಕೂ ಮುನ್ನಡೆಯಲಿಕ್ಕೂ ಹಲವು ರಂಗಗಳು ಅವರ ಮುಂದೆ ಗೋಚರಿಸುತ್ತವೆ.

ಇನ್ನೊಂದು ರೀತಿಯ ಪರೀಕ್ಷೆ ಅವಿಶ್ವಾಸಿಗಳಿಗಿರುವುದಾಗಿ ಖುರ್‌ಆನ್ ಹೇಳುತ್ತದೆ. ಇದರ ಕೊನೆ ದುಃಖಭರಿತವಾಗಿರುತ್ತದೆ. ಈ ಪರೀಕ್ಷೆ ಅವರ ಮುಖದಿಂದ ಓಜಸ್ಸನ್ನೂ ತೇಜಸ್ಸನ್ನೂ ಅಳಿಸಿಬಿಡುತ್ತದೆ. ಕೆಲವು ಸಂದರ್ಭಗಳಲ್ಲಿ ಅವರಿಗೆ ಹಸಿವೆ, ದಾಹ, ದಾರಿದ್ರ್ಯ ಮತ್ತು ಇತರ ಕಷ್ಟಗಳನ್ನು ಎದುರಿಸಬೇಕಾಗಿ ಬರುತ್ತದೆ. ಕೆಲವು ಸಂದರ್ಭಗಳಲ್ಲಿ ಅವರ ಅನ್ಯಾಯ ಮತ್ತು ಅಕ್ರಮಗಳ ಬಿಲಸುಗಳಲ್ಲಿನಲ್ಲಿ ಅವರು ಜಜ್ಜಲ್ಪಟ್ಟು ನಾಮಾವಶೇಷವಾಗುತ್ತಾರೆ. ಆಗ ಅವರ ಸಹಾಯಕ್ಕೆ ಯಾರೂ ಇರುವುದಿಲ್ಲ. ದೈನಂದಿನ ಅವರ ಶಕ್ತಿ ಕ್ಷಯಿಸುತ್ತಾ ಅಳಿದು ಹೋಗುತ್ತದೆ. ಇಂತಹ ಪರೀಕ್ಷೆಗಳು ಅವಿಶ್ವಾಸಿಗಳಿಗೆ ಮಾತ್ರ ಬರಬೇಕೆಂದಿಲ್ಲ. ಕೆಲವು ಸಲ ಇಂತಹ ಪರೀಕ್ಷೆಗಳು ಒಂದು ಮುನ್ನೆಚ್ಚರಿಕೆಯೆಂಬಂತೆ ಸಹ ಪ್ರತ್ಯಕ್ಷವಾಗುತ್ತದೆ. "ನನ್ನ ಮಾರ್ಗದರ್ಶನವನ್ನನುಸರಿಸಿ ನೈತಿಕವಾದ ಒಂದು ಪರಿವರ್ತನೆಯನ್ನು ನಿಮ್ಮಲ್ಲುಂಟುಮಾಡದಿದ್ದರೆ ನಿಮ್ಮ ಅಂತ್ಯ ಬಹಳ ಶೋಚನೀಯವಾಗುವುದು" ಎಂಬ ದೈವಿಕ ಎಚ್ಚರಿಕೆ ಸಹ ಇದರಲ್ಲಿ ಅಡಕವಾಗಿದೆ.

ಸತ್ಯವಿಶ್ವಾಸಿಗಳಿಗೆ ಬಂದೊದಗುವ ಪರೀಕ್ಷೆಗಳಲ್ಲಿ ಇತರ ವಿಶ್ವಾಸಿಗಳಿಗೂ ಒಂದು ಉಪದೇಶವಿದೆ. ಅದೇನೆಂದರೆ, ಅಲ್ಲಾಹನ ಮಾರ್ಗದಲ್ಲಿ ಸಂಕಟಗಳನ್ನೂ ತೊಂದರೆಗಳನ್ನೂ ಅನುಭವಿಸುವವರು ಎಂದಿಗೂ ನಷ್ಟಹೊಂದಿದವರಾಗಲಿಕ್ಕಿಲ್ಲ. ಅವರು ಸದಾ ಮುನ್ನೇರುತ್ತಲೇ ಇರುವರು. ಪ್ರತಿಯೊಂದು ದುಃಖದ

ಹಿಂದೆ ಸುಖವು ಅವರನ್ನು ನಿರೀಕ್ಷಿಸುತ್ತಿರುವುದಾಗಿ ಕಾಣಬಹುದು. ಇತರ ವಿಶ್ವಾಸಿಗಳು ಈ ಪರೀಕ್ಷೆಗಳನ್ನೂ ಅವರ ಅಂತ್ಯವನ್ನೂ ಕಾಣುವಾಗ ಅವರಲ್ಲಿ ಸಹ ಒಂದು ನವಚೈತನ್ಯ ಮೂಡಿ ತಾವು ಸಹ ಪರೀಕ್ಷೆಗೊಳಗಾಗಬೇಕೆಂಬ ಅಭಿಲಾಷೆ ಹುಟ್ಟಿ ಅದಕ್ಕೆ ಸಿದ್ಧರಾಗುತ್ತಾರೆ. ಆದರೆ ಅಲ್ಲಾಹನ ಸಂಬಂಧವನ್ನು ಮುರಿಯುವವರಿಗೆ ಪರೀಕ್ಷೆ ಬರುವುದು ಒಂದು ಶಿಕ್ಷೆಯ ರೂಪದಲ್ಲಾಗಿರಬಹುದು. ಇಂತಹವರು ಪರೀಕ್ಷೆಗಳಿಂದ ಕೂಡ ಪಾಠ ಕಲಿಯುವುದಿಲ್ಲ.

ಅಲ್ಲಾಹನ ಭಕ್ತದಾಸರಿಗೆ, ಅವನ ಪ್ರೀತಿಯ ಜನರಿಗೆ ಪರೀಕ್ಷೆಗಳು ಬರುವಾಗ ಒಳಿತಿಗೆ ಪ್ರಾಶಸ್ತ್ಯ ಇರುತ್ತದೆ. ಆದರೆ ಅದರೊಂದಿಗೆ ಕೆಡುಕಿನ ಅಂಶ ಸಹ ಅಡಕವಾಗಿರಬಹುದು. ಹಝ್ರತ್ ಮುಹಮ್ಮದ್ ಪೈಗಂಬರ್ (ಸ)ರಿಗೆ ಮತ್ತು ಅವರ ಶಿಷ್ಯರಿಗೆ ಪರೀಕ್ಷಾಘಟ್ಟ ಬಂದಾಗ ಪೈಗಂಬರರು ಮತ್ತು ಶಿಷ್ಯರು ಸ್ಥಿರಚಿತ್ತರಾಗಿದ್ದುಕೊಂಡು ಆ ಪರೀಕ್ಷಾಘಟ್ಟಗಳನ್ನು ಎದುರಿಸಿದರು. ಅಷ್ಟೇ ಅಲ್ಲ; ಪೂರ್ವಾಧಿಕ ಉತ್ಸಾಹದಿಂದಲೂ ಚೈತನ್ಯದಿಂದಲೂ ಹೊರಗೆ ಬಂದು ಪರೀಕ್ಷಾಘಟ್ಟದಲ್ಲಿ ಸರ್ವಾತ್ಮನಾ ಅಲ್ಲಾಹನ ಇಚ್ಛೆಯಲ್ಲಿ ಸಂತೃಪ್ತರಾಗಿದ್ದರೆಂದೂ ಆದರೆ ದುರ್ಬಲಚಿತ್ತರಾದ ಕೆಲವರು ಆ ಪರೀಕ್ಷಾಘಟ್ಟವನ್ನು ಎದುರಿಸುವ ಶಕ್ತಿಯಿಲ್ಲದೆ ಒಣಗಿದ ಎಲೆಯಂತೆ ಉದುರಿಹೋಗಿ ಎಂದೆಂದಿಗೂ ವಿಶ್ವಾಸ ನಷ್ಟವಾಗಿ ಇಹಪರ ಲೋಕಗಳಲ್ಲಿ ನಷ್ಟ ಹೊಂದಿದವರಾದರೆಂದೂ ಪವಿತ್ರ ಖುರ್‌ಆನ್ ಪ್ರಸ್ತಾಪಿಸುತ್ತದೆ.

ಕೆಲವು ಸಲ ಪರೀಕ್ಷೆಗಳಿಂದ ಪಾಠ ಕಲಿಯುವ ಅರ್ಹತೆಯಿಲ್ಲದೆ ವಕ್ರಬುದ್ಧಿಯವರಿಗೆ ಪರೀಕ್ಷಾಘಟ್ಟ ಬರುತ್ತದೆ. ಅವರ ಹೃದಯ ಮತ್ತು ಬುದ್ಧಿ ಸಂಪೂರ್ಣವಾಗಿ ಕೆಟ್ಟು ಹೋದುದರ ಫಲವಾಗಿ ಅವರು ನಾಶದೆಡೆಗೆ ಸಾಗುತ್ತಾರೆ. ಅವರಲ್ಲಿ ಕೇವಲ ಕೆಲವು ಜನರಿಗೆ ಮಾತ್ರ ಪಾಠ ಕಲಿಯಲಿಕ್ಕೆ ಸಾಧ್ಯವಾಗುತ್ತದೆ. ಈ ಮೂಲ ತತ್ವವನ್ನೂ ಅಲ್ಲಾಹನ ವಿಧಿಯನ್ನೂ ಪರಿಗಣಿಸಿ ಇಂದು ಮುಸ್ಲಿಮರಿಗೆ ಎದುರಿಸಬೇಕಾಗಿ ಬರುವ ಪರೀಕ್ಷೆಗಳ ಕುರಿತು ಅವಲೋಕನ ಮಾಡುವುದಾದರೆ ಖಂಡಿತವಾಗಿಯೂ ಅವರೊಡನೆ ಅಲ್ಲಾಹನಿಗಿರುವ ಕೋಪ ಮತ್ತು ಅಸಂತುಷ್ಟಿ ಸ್ಪಷ್ಟವಾದ ರೀತಿಯಲ್ಲಿ ಗೋಚರವಾಗುತ್ತದೆ. ಆದಿಕಾಲ ಮುಸ್ಲಿಮರಿಗೆ ಎದುರಿಸಬೇಕಾಗಿ ಬಂದ ಪರೀಕ್ಷಾ ಘಟ್ಟವಲ್ಲ ಇದೆಂದು ಸ್ಪಷ್ಟ. ಹಝ್ರತ್ ಮುಹಮ್ಮದ್ ಪೈಗಂಬರ್(ಸ) ರವರಿಗೂ ಶಿಷ್ಯವೃಂದಕ್ಕೂ ಎದುರಿಸಬೇಕಾಗಿ ಬಂದ ಪರೀಕ್ಷಾಘಟ್ಟ ಮತ್ತು ಇಂದಿನ ಮುಸ್ಲಿಮರಿಗೆ ಬಂದಿರುವ ಪರೀಕ್ಷಾಘಟ್ಟಕ್ಕೆ ಮಧ್ಯ ಅಜಗಜಾಂತರವಿದೆ. ಅಲ್ಲಾಹನಿಂದಿರುವ ಒಳಿತಿನ ಕೈಗಳು ಆ ಪರೀಕ್ಷಾಘಟ್ಟಗಳಲ್ಲಿ ವರ್ತಿಸಿವೆಯೆಂದು ನಾವು ಸೂಕ್ಷ್ಮಾವಲೋಕನ ಮಾಡಿದರೆ ಕಾಣಲು ಸಾಧ್ಯ. ಆದರೆ ಇದರಿಂದ ಪ್ರಯೋಜನ ಪಡೆಯುವವರು ತೀರಾ ವಿರಳ. ಕಾರಣವೇನೆಂದರೆ, ಈ ಪರೀಕ್ಷೆಗಳಲ್ಲಿ ಒಳಗೊಂಡಿರುವ ದೈವಿಕ ಕಾರುಣ್ಯದ ಮತ್ತು ಒಳಿತಿನ ಅಂಶವನ್ನು ಕಾಣಲು ಈ ಆಧ್ಯಾತ್ಮಿಕಾಂಧರಿಗೆ ಸಾಧ್ಯವಾಗುವುದಿಲ್ಲ.

ಅಯೋಧ್ಯೆಯ ಮಸೀದಿಗೆ ಸಂಬಂಧಿಸಿ ಕೆಲವು ಕಾಲದಿಂದ ಬರುತ್ತಲಿರುವ ವಾರ್ತೆಗಳ ಪರಿಣಾಮವಾಗಿ ಜಗತ್ತಿನ ಯಾವ ಕಡೆಯಲ್ಲಿರುವ ಮುಸ್ಲಿಮನಾದರೂ ಮುಸ್ಲಿಮರಲ್ಲಿ ಸೇರಿದ ಯಾವ ಪಂಗಡದವನಾದರೂ ಆತನ ಹೃದಯ ಭಾವೋದ್ರೇಕದಿಂದ ಉಕ್ಕಿ ಬರುತ್ತದೆ. ಇಲ್ಲಿರುವ ಪ್ರಶ್ನೆ: ಯಾಕೆ ದೈವಿಕ ಸಹಾಯ ಬಂದೊದಗುವುದಿಲ್ಲ? ಈ ಪರೀಕ್ಷೆಗಳ ಫಲವಾಗಿ ಮುಸ್ಲಿಮರ ಪ್ರತಾಪ ಮತ್ತು ಪ್ರೌಢಿಮೆ ದುರ್ಬಲಗೊಂಡುದರ ಕಾರಣವೇನು? ಎಂಬುದಾಗಿದೆ. ಲೋಕದೃಷ್ಟಿಯಲ್ಲಿ ಇಂದು ಮುಸ್ಲಿಮರಿಗೆ ಶೋಚನೀಯ ಅವಸ್ಥೆ ಗೋಚರವಾಗುತ್ತದೆ. ಈ ಬಗ್ಗೆ ಸತ್ಯಸಂಧವಾಗಿಯೂ ದೇವಭಕ್ತಿಯಿಂದಲೂ ವಿಷಯ ಗ್ರಹಣ ಮಾಡಬೇಕಾಗಿದೆ. ಬಾಬರಿ ಮಸ್ಜಿದ್ ಧ್ವಂಸ ಮಾಡಲ್ಪಟ್ಟಿದೆಯಷ್ಟೇ. ಏಕದೇವಾರಾಧನಾಲಯವನ್ನು ಕೆಡವಿ ಅಲ್ಲಿ ಬಹುದೇವಾರಾಧನಾಲಯವನ್ನು ನಿರ್ಮಿಸುವುದು ಅತಿ ದೊಡ್ಡ ಅನೀತಿ ಮತ್ತು ಅನ್ಯಾಯವಾಗಿದೆ ಎಂಬುದರಲ್ಲಿ ಸಂಶಯವೇನೂ ಇಲ್ಲ. ಆದರೆ ಅಲ್ಲಾಹನ ವಿಧಿ ಕೆಲವು ಸಲ ಇಂತಹ ಅಕ್ರಮ ವರ್ತನೆಗಳನ್ನು ಸ್ಥೈರಿಸುವುದಕ್ಕೆ ಕಾರಣವಿದೆ. ಈ ಕಾಲಘಟ್ಟದ ಜನರು ದೈವಿಕ ವಿಧಿಯನ್ನು ತಮಗೆ ಅನುಕೂಲಕರವಾಗಿಸಲಿಕ್ಕೂ ತಮಗೋಸ್ಕರ ಅಸಾಮಾನ್ಯ ಮತ್ತು ಅದ್ಭುತಕರವಾದ ವಿಚಾರಗಳು ಪ್ರಕಟಗೊಳಿಸಲ್ಪಡಲಿಕ್ಕೂ ಅರ್ಹತೆಯಿಲ್ಲದವರಾಗಿದ್ದಾರೆ. ಅಲ್ಲಾಹನನ್ನು ಆರಾಧಿಸಲಿಕ್ಕೆ ಅತ್ಯಂತ ಆದರಣೀಯ ಗೃಹ

ಪ್ರವಾದಿ ಹಝ್ರತ್ ಇಬ್ರಾಹಿಂ(ಅ) ಮತ್ತು ಪ್ರವಾದಿ ಹಝ್ರತ್ ಇಸ್ಮಾಈಲ್ (ಅ) ಸ್ವಯಂ ಪ್ರಯತ್ನಿಸಿ ಜೀರ್ಣೋದ್ಧಾರ ಮಾಡಿದ ಕಅಬತುಲ್ಲಾಹ್ ಆಗಿತ್ತು. ಜೀರ್ಣಾವಸ್ಥೆಯಲ್ಲಿದ್ದ ಅದರ ಪುನರ್ನಿರ್ಮಾಣ ಮಾಡಿದ್ದು ಪ್ರವಾದಿಗಳಾದ ಹಝ್ರತ್ ಇಬ್ರಾಹೀಂ (ಅ) ಮತ್ತು ಅವರ ಪುತ್ರ ಹಝ್ರತ್ ಇಸ್ಮಾಈಲ್ (ಅ) ಆಗಿದ್ದರು. ಈ ಭವನವು ಏಕದೇವೋಪಾಸನೆಯ ಕೇಂದ್ರವಾಗಿತ್ತು. ಜಗತ್ತಿನಲ್ಲಿಡೀ ಏಕದೇವ ಸಂದೇಶವನ್ನು ತಲಪಿಸಬೇಕೆಂಬ ಉದ್ದೇಶದಿಂದ ಅಲ್ಲಿ ಭವನ ನಿರ್ಮಿಸಲ್ಪಟ್ಟಿತ್ತು. ಆದರೆ ಎಷ್ಟು ನೂರು ವರ್ಷಗಳ ಕಾಲ ಆ ಪುಣ್ಯಗೃಹ ವಿಗ್ರಹಗಳ ಮತ್ತು ಪ್ರತಿಮೆಗಳ ಕೇಂದ್ರವಾಗಿತ್ತೆಂಬ ವಿಚಾರ ನಿಮಗೆ ಗೊತ್ತು. ಒಂದೊಂದು ದಿನಕ್ಕೆ ಒಂದೊಂದು ಮೂರ್ತಿ ಎಂಬಂತೆ ಒಂದು ವರ್ಷಕ್ಕೆ 365 ಮೂರ್ತಿಗಳು ಅಲ್ಲಿ ಪ್ರತಿಷ್ಠಾನಗೊಂಡಿದ್ದವು. ಏಕದೇವೋಪಾಸನೆಯ ಕೇಂದ್ರ ಬಹುದೇವೋಪಾಸನೆಯ ಬಹುದೊಡ್ಡ ಕೇಂದ್ರವಾಗಿ ಮಾರ್ಪಟ್ಟಿತ್ತು. ಹಾಗೆ ಹಲವು ನೂರು ವರ್ಷಗಳು ಕಳೆದರೂ ಅಲ್ಲಾಹನ ಅಭಿಮಾನ ಆಗ ಪ್ರಕಟವಾಗಲಿಲ್ಲ. ತನ್ನನ್ನು ಮಾತ್ರ ಆರಾಧಿಸುವವರಿಗೆ ಆ ಭವನವನ್ನು ಒಪ್ಪಿಸುವ ಒಂದು ಏರ್ಪಾಡನ್ನಾಗಲಿ ಅಲ್ಲಾಹನು ಮಾಡಲಿಲ್ಲ. ಆ ವಿಗ್ರಹಗಳನ್ನು ಆ ಭವನದಿಂದ ಸ್ಥಾನಪಲ್ಲಟಗೊಳಿಸಲಿಕ್ಕೆ ಏನನ್ನೂ ಅವನು ಮಾಡಲಿಲ್ಲ. ಹಾಗೆ ಕಾಲ ಕಳೆಯುತ್ತಿತ್ತು. ಹಝ್ರತ್ ಮುಹಮ್ಮದ್ ಪೈಗಂಬರ್ (ಸ)ರವರ ಕ್ರಾಂತಿಕಾರಿ ಕಾಲ ಬಂದದ್ದು ಆ ಬಳಿಕವಾಗಿದೆ. ಆ ಕಾಲದ ಬಗ್ಗೆ ಅಲ್ಲಾಹನು ಹೆಸರಿಸಿದ್ದು ಸಾಅತ್ (ಖಿಯಾಮತ್, ಪ್ರಳಯ) ಎಂದಾಗಿದೆ. ಆ ಸಂದರ್ಭದಲ್ಲಿ ನೂರಾರು ವರ್ಷಗಳ ಕಾಲ ಮೃತಪ್ರಾಯರಾಗಿದ್ದವರಿಗೆ ನವಜೀವನ ನೀಡಲ್ಪಟ್ಟಿತು. ಅತುಲ್ಯವಾದ ಅತಿಮಹತ್ವದ ಆಧ್ಯಾತ್ಮಿಕ ಕ್ರಾಂತಿ ಸಹ ತಲೆಯೆತ್ತಿತು. ಏಕದೇವ ವಿಶ್ವಾಸಿಗಳ ಒಂದು ಪಂಗಡ ರೂಪುಗೊಂಡಾಗ, ಅಸಾಮಾನ್ಯವಾದ ಶಕ್ತಿ ಮತ್ತು ಆಧಿಪತ್ಯ ಇದ್ದ ಬಹುಸಂಖ್ಯಾತರಾದ ಬಹುದೇವ ವಿಶ್ವಾಸಿಗಳ ಎಲ್ಲ ಶಕ್ತಿದುರ್ಗಗಳು ಛಿನ್ನಭಿನ್ನವಾದುವು. ಅವರದೇನೂ ಬಾಕಿಯುಳಿಯಲಿಲ್ಲ. ಏಕದೇವನನ್ನು ಆರಾಧಿಸಲಿಕ್ಕಾಗಿ ಏಕದೇವತ್ವದ ಸಾರ್ವಲೌಕಿಕ ದೃಷ್ಟಾಂತವಾದ ಆ ಪುಣ್ಯಭವನವನ್ನು ಅಲ್ಲಾಹನು ಏಕದೇವ ವಿಶ್ವಾಸಿಗಳಿಗೆ ಒಪ್ಪಿಸಿದನು. ಅವರು ಏಕದೇವಾರಾಧಕರಾಗಿ ಮಾತ್ರ ಸೃಷ್ಟಿಸಲ್ಪಟ್ಟವರಾಗಿದ್ದರು. ಆರಾಧನೆಗೋಸ್ಕರ ಮಾತ್ರ ಪೈಗಂಬರ್(ಸ)ರವರು ಅವರನ್ನು ಪರಿಪಾಲಿಸಿ ಅವರಿಗೆ ಶಿಕ್ಷಣವಿತ್ತಿದ್ದರು. ಹಾಗೆ ಆ ದೈವಿಕ ಭವನವನ್ನು ಸಂರಕ್ಷಿಸಲಿಕ್ಕೂ ಏಕದೇವತ್ವವನ್ನು ನೆಲೆಗೊಳಿಸಲಿಕ್ಕೂ ಶಕ್ತಿ ಸಾಮರ್ಥ್ಯವಿರುವ ಏಕದೇವ ವಿಶ್ವಾಸಿಗಳು ಸಿದ್ಧರಾದಾಗ ಅಲ್ಲಾಹನು ಅವರಿಗೆ ಆ ಭವನವನ್ನು ಒಪ್ಪಿಸಿದನು. ಆಗ ಆ ಭವನ ಬಹುದೇವೋಪಾಸನೆಯಿಂದ ಮುಕ್ತವಾಗಿ ಪರಿಶುದ್ಧ ಗೊಳಿಸಲ್ಪಟ್ಟಿತು. ಇದರಲ್ಲಿ ಅತ್ಯಂತ ಗಹನವಾದೊಂದು ಪಾಠ ಅಡಕವಾಗಿದೆ. ಎಂದರೆ, ಕೆಲವು ವಸ್ತುಗಳು ಸಾತ್ವಿಕರೂ ಸಜ್ಜನರೂ ಆದ ಜನರ ಬಳಕೆಯಲ್ಲಿ ಬರುವಾಗ ಅವುಗಳಿಗೆ ಒಂದು ವಿಶಿಷ್ಟ ಪದವಿ ಮತ್ತು ಸ್ಥಾನ ಲಭ್ಯವಾಗುತ್ತದೆ. ಆದರೆ ಅದೇ ವಸ್ತುಗಳು ದುಷ್ಟರ ಬಳಕೆಯಲ್ಲಿರುವಾಗ ಅವು ಕೆಟ್ಟವು ಹಾಗೂ ನಿಂದಾರ್ಹವಾಗುತ್ತವೆ. ಒಟ್ಟಿನಲ್ಲಿ, ಬಾಹ್ಯ ಕಟ್ಟಡಕ್ಕಾಗಲಿ ಇಟ್ಟಿಗೆ, ಕಲ್ಲು ಇತ್ಯಾದಿಗಳಿಗಾಗಲಿ ಯಾವ ಪಾವಿತ್ರ್ಯವೂ ಮಾನ್ಯತೆಯೂ ಪರಿಶುದ್ಧಿಯೂ ಇಲ್ಲವೇ ಇಲ್ಲ. ಅದೇ ಪ್ರಕಾರ ಬಾಹ್ಯವಾದೊಂದು ಕಟ್ಟಡಕ್ಕೆ ಕೇಡನ್ನಾಗಲಿ ಅಗೌರವವನ್ನಾಗಲಿ ಕಲ್ಪಿಸಬಾರದು. ಯಥಾರ್ಥದಲ್ಲಿ ಪರಿಶುದ್ಧಿ ಮತ್ತು ಅಪರಿಶುದ್ಧಿ ಮನುಷ್ಯರಿಗೆ, ಅವರ ಹೃದಯಗಳಿಗೆ ಸಂಬಂಧಿಸಿದುದಾಗಿದೆ. ಎಷ್ಟರ ವರೆಗೆ ಪರಿಶುದ್ಧ ಹೃದಯತೆ ಉಂಟಾಗುವುದಿಲ್ಲವೋ ಅಷ್ಟರ ವರೆಗೆ ಬಾಹ್ಯವಾದ ಕಟ್ಟಡಗಳ ಪರಿಶುದ್ಧತೆ ಅವರಿಗೆ ಮರಳಿಸಲ್ಪಡಲಾರದು. ಅಲ್ಲಾಹನು ತನ್ನ ದೇವೇಕತ್ವದ ಕುರಿತು ಅಭಿಮಾನ ವುಳ್ಳವನಾಗಿದ್ದಾನೆ. ಎಷ್ಟರ ತನಕ ದೇವೇಕತ್ವದ ಬಗ್ಗೆ ಅಭಿಮಾನವುಳ್ಳವರು ಜನ್ಮವೆತ್ತುವುದಿಲ್ಲವೋ ಅಷ್ಟರ ವರೆಗೆ ಬಾಹ್ಯವಾದ ದೇವೇಕತ್ವದ ಭವನವಾದ ಆ ಪುಣ್ಯಗೃಹವನ್ನು ಅಲ್ಲಾಹನು ಯಾರಿಗೂ ಒಪ್ಪಿಸಲಿಲ್ಲ. ನೋಡಿರಿ, ಅಲ್ಲಾಹನು ತನ್ನ ಪುಣ್ಯಭವನವನ್ನು ಎಷ್ಟುಕಾಲ ಶೈತಾನನ ಸ್ವಾಧೀನದಲ್ಲಿ ಅವನ ಕೈಯಿಂದ ನಿಂದಿಸಲ್ಪಡುತ್ತಿದ್ದುದನ್ನು ವೀಕ್ಷಿಸುತ್ತಿದ್ದನು. ಅಲ್ಲಾಹನು ಅದನ್ನೇನೂ ಗಣ್ಯ ಮಾಡಲಿಲ್ಲ. ಆದರೆ ಹಝ್ರತ್ ಪೈಗಂಬರ್ (ಸ) ಮತ್ತು ಶಿಷ್ಯವೃಂದ ಜನ್ಮತಾಳಿದಾಗ ಎಷ್ಟು ಮಹತ್ತರವಾಗಿ ಎಲ್ಲ ವಿಗ್ರಹಗಳೂ ಸ್ಥಳಾಂತರಗೊಂಡವು! ಆಗ ಶೈತಾನನಿಗೂ

ಅವನ ಸಹಚರರಿಗೂ ಏನು ಮಾಡಲಿಕ್ಕೂ ಸಾಧ್ಯವಾಗಲಿಲ್ಲ.

ಈ ನಿಜಾಂಶದೆಡೆಗೆ ಜಗತ್ತಿನ ಮುಸ್ಲಿಮರು ಕಣ್ಣು ಹಾಯಿಸಿ ತಮ್ಮ ಪ್ರತಿಕ್ರಿಯೆಗಳ ಕುರಿತು ಅವಲೋಕನ ಮಾಡಬೇಕಾಗಿದೆ. ದೇವಭವನದ ಮೇಲಿರುವ ಪ್ರೀತಿಯ ಫಲವಾಗಿ, ದೇವಪ್ರೀತಿಯನ್ನು ಪಡೆಯುವ ಉದ್ದೇಶದಿಂದ ಕೂಡಿದ ಪ್ರತಿಕ್ರಿಯೆಯೆಂದಾದರೆ ದೇವವಿಧಿ ಅವರಿಗೆ ಅನುಕೂಲಕರವಾಗುವುದು. ಆ ಸಂದರ್ಭದಲ್ಲಿ ಅಲ್ಲಾಹನ ನೆರವು ಸಿಗದಿರುವುದು ಅಸಂಭವನೀಯ. ಮುಸ್ಲಿಮರಿಗೆ ಯಾರೂ ಸಹಾಯಕರಿಲ್ಲವೆಂದು ಈಗಿನ ಘಟನೆಗಳು ಮನದಟ್ಟು ಮಾಡಿಕೊಡುತ್ತವೆ. ಆದರೆ ಪವಿತ್ರ ಖುರ್‌ಆನ್ ನಮಗೆ ಮನವರಿಕೆ ಮಾಡಿಕೊಡುವುದೇನೆಂದರೆ, ಮುಸ್ಲಿಮರಿಗೆ ಮತ್ತು ಅಮುಸ್ಲಿಮರಿಗೆ ಮಧ್ಯೆ ಮೂಲಭೂತ ವ್ಯತ್ಯಾಸವು ಅವರಿಗೆ ಒಬ್ಬ 'ಮೌಲ' (ಸಂರಕ್ಷಕ ಮತ್ತು ಒಡೆಯ) ಇಲ್ಲ; ಯಥಾರ್ಥ ಸತ್ಯವಿಶ್ವಾಸಿಗಳಿಗೆ ಒಬ್ಬ ಸಂರಕ್ಷಕನೂ ಒಡೆಯನೂ ಇದ್ದಾನೆ. ಅಲ್ಲಾಹನೊಡನೆ ಸಂಬಂಧವನ್ನಿರಿಸಿಕೊಂಡವರನ್ನು ಅವನು ಸಹಾಯಿಸಿ ಅನುಗ್ರಹಿಸುತ್ತಾನೆ. ಇತರರನ್ನು ಅವನು ದಿಕ್ಕಿಲ್ಲದವರನ್ನಾಗಿಯೂ ನಿರಾಲಂಬರನ್ನಾಗಿಯೂ ಮಾಡುತ್ತಾನೆ. ದೈವಿಕ ಬೆಂಬಲವಿರುವವರು ಎಂದಿಗೂ ನಿರಾಲಂಬರೂ ನಿರಾಶ್ರಯರೂ ಆಗಲಾರರು.

ಇಂದಿನ ಮುಸ್ಲಿಂ ಜಗತ್ತು ಮೂಲಭೂತವಾದ ಈ ವಿಚಾರದ ಬಗ್ಗೆ ನಿಷ್ಪಕ್ಷವಾಗಿಯೂ ಕೂಲಂಕಷವಾಗಿಯೂ ಚಿಂತನೆ ಮಾಡಬೇಕಾಗಿದೆ. ಅಲ್ಲಾಹನು ತಮಗೆ ಬೆಂಬಲವಾಗಿದ್ದಾನೆಯೇ? ಅವನಿಂದ ತಮಗೆ ಸಹಾಯ ಲಭಿಸುತ್ತಿದೆಯೇ? ಇಲ್ಲವಾದರೆ ಏಕೆ? ಅಲ್ಲಾಹನು ವಿಶ್ವಾಸಘಾತಕನಲ್ಲ (ನಊದುಬಿಲ್ಲಾಹ್). ಹಾಗಾದರೆ ವಿಶ್ವಾಸ ವಂಚನೆ ಮಾಡಿದ್ದು ಯಾರು? ಈ ವಿಚಾರ ಅವರು ಯೋಚಿಸಲಿ. ರೋಗವೇನೆಂದು ಗುರುತಿಸುವ ವರೆಗೆ ಸರಿಯಾದ ಚಿಕಿತ್ಸೆ ಲಭ್ಯವಾಗದು. ರೋಗ ಒಂದೆಡೆ ಅದರ ಚಿಕಿತ್ಸೆ ಮತ್ತೊಂದೆಡೆ ಎಂದಾದರೆ ಅದರಿಂದ ನಷ್ಟ ಮಾತ್ರ ಉಂಟಾದೀತು. ಪ್ರತಿಕ್ರಿಯೆ ಅಲ್ಲಾಹನಿಗೋಸ್ಕರ, ಅವನ ಸಂತುಷ್ಟಿಗೋಸ್ಕರ ಮಾತ್ರವಾಗಿರಬೇಕಾಗಿದೆ. ಭಾರತದಲ್ಲಿ ಮುಸ್ಲಿಮರನ್ನು ಜೀವಸಹಿತ ಅಗ್ನಿಗಾಹುತಿ ಮಾಡುವುದಾದರೆ ಅದರ ಪ್ರತಿಕಾರವಾಗಿ ಪಾಕಿಸ್ಥಾನದಲ್ಲಿ ಹಿಂದುಗಳನ್ನು ಸುಟ್ಟು ಹಾಕುವುದಲ್ಲ. ಇಂತಹ ನೀಚವಾದ ಪ್ರತಿಕ್ರಿಯೆಯನ್ನು ಇಸ್ಲಾಂ ಎಂದಿಗೂ ಒಪ್ಪುವುದಿಲ್ಲ. ಇಸ್ಲಾಮಿನ ಅಧ್ಯಾಪನೆ ಬಹಳ ಸ್ಪಷ್ಟವೂ ಪರಿಪೂರ್ಣವೂ ಆಗಿದೆ. ನಿಸ್ತುಲ್ಯವಾದ ಅದರ ಅಧ್ಯಾಪನೆಗಳು ನೀತಿ-ನ್ಯಾಯದಲ್ಲಿ ಅಧಿಷ್ಠಿತವಾಗಿದೆ. ಅಪರಾಧಿಗಳನ್ನು ಶಿಕ್ಷಿಸಲಿಕ್ಕೆ ಒಪ್ಪಿಗೆಯನ್ನು ಮಾತ್ರ ಇಸ್ಲಾಂ ನೀಡುತ್ತದೆ. ಅಕ್ರಮಿಗಳ ಅಕ್ರಮದ ಪ್ರತಿಕಾರವನ್ನು ಯಾವ ಅಪರಾಧವನ್ನೂ ಮಾಡದವರೊಡನೆ ತೋರಿಸುವುದು ಅನೀತಿಯೂ ದ್ರೋಹವೂ ಆಗಿದೆ. ಅದು ಕ್ಷಮಾರ್ಹವಲ್ಲದ ಒಂದು ದುಷ್ಕೃತ್ಯವಾಗಿದೆ. ಇಸ್ಲಾಂ ಮತ್ತು ಮುಹಮ್ಮದ್ ಪೈಗಂಬರ್(ಸ)ರವರ ಪರಿಶುದ್ಧ ಮಾದರಿ ಇದನ್ನು ವಿರೋಧಿಸುತ್ತದೆ. ಹಝ್ರತ್ ಪೈಗಂಬರರು ಒಮ್ಮೆಯೂ ಒಬ್ಬ ಮರ್ದಕನೊಡನಿರುವ ಪ್ರತಿಕಾರವನ್ನು ಅಪರಾಧಿಯಲ್ಲದ ಬೇರೊಬ್ಬನೊಡನೆ ತೋರಿಸಿರಲಿಲ್ಲ.

ಇಸ್ಲಾಂ ಆರಾಧನಾಲಯಗಳ ಪರಿಶುದ್ಧಿಯನ್ನೂ ಪವಿತ್ರತೆಯನ್ನೂ ಸಂರಕ್ಷಿಸುತ್ತದೆ. ಒಂದು ಸ್ಥಳದಲ್ಲಿ ಕೆಲವು ಮಸೀದಿಗಳನ್ನು ಒಡೆಯುವುದಾದರೆ ಅದರ ಪ್ರತಿಕಾರವಾಗಿ ಬೇರೆಯವರ ಆರಾಧನಾಲಯಗಳನ್ನು ಒಡೆಯುವುದರಲ್ಲಿ ಏನು ನೀತಿ-ನ್ಯಾಯವಿದೆ? ಅದರ ಪರಿಣಾಮವೇನಾಯಿತು? ಅನೇಕ ಮಸೀದಿಗಳು ಕೆಡಲ್ಪಟ್ಟವು. ಇವೆಲ್ಲ ಬುದ್ಧಿಹೀನ ವರ್ತನೆಗಳ ಪ್ರತಿಕ್ರಿಯೆಗಳೂ ಪರಿಣಾಮಗಳೂ ಆಗಿವೆ. ಆದರೆ ಮುಸ್ಲಿಂ ಜಗತ್ತು ಇಂತಹ ಪ್ರತಿಕಾರ ಕ್ರಮವನ್ನು ಕೈಗೊಳ್ಳದೆ ಮಸೀದಿ ಧ್ವಂಸ ಮಾಡಿದವರನ್ನು ನೋಡಿ, "ನಿಮ್ಮಲ್ಲಿ ಮನುಷ್ಯತ್ವವಿಲ್ಲದಿದ್ದರೆ ನಮ್ಮಲ್ಲಿ ಅದಿದೆ. ನಿಮಗೆ ಶಿಕ್ಷಣ ವಿಗ್ರಹ (ಅಂತಹದ್ದೊಂದು ಇದ್ದರೆ) ಕೊಟ್ಟಿದ್ದರೆ ನಮಗೆ, ಸರಿಸಾಟಿ ಇಲ್ಲದ ಏಕದೇವನಾದ ಅಲ್ಲಾಹನು ಶಿಕ್ಷಣ ನೀಡಿದ್ದಾನೆ. ಹಝ್ರತ್ ಮುಹಮ್ಮದ್ ಪೈಗಂಬರ್ (ಸ) ನಮಗೆ ಶಿಕ್ಷಣ ನೀಡಿದ್ದಾರೆ. ನೀವು ಮಾಡಿದಂತಹ ಹೀನ ಕೃತ್ಯವನ್ನು ನಾವು ಮಾಡಲಾರೆವು. ನಮಗೆ ಶಕ್ತಿ ಲಭಿಸುವುದಾದರೆ ಅಕ್ರಮಿಯ ಅಕ್ರಮಕ್ಕೆ ಪ್ರತಿಕಾರವನ್ನು ನಾವು ಮಾಡುವೆವು. ಆದರೆ ಈ ಪ್ರತಿಕಾರ ಮೌಢ್ಯದಿಂದ ಕೂಡಿರಲಾರದು. ಒಬ್ಬನು ಅಪರಾಧ ಮಾಡಿದರೆ

ಇನ್ನೊಬ್ಬನನ್ನು ಶಿಕ್ಷಿಸುವ ಒಪ್ಪಿಗೆಯನ್ನು ಇಸ್ಲಾಂ ನಮಗೆ ನೀಡುವುದಿಲ್ಲ" ಎಂದು ಹೇಳಿಕೊಂಡು ಇತರರ ಆರಾಧನಾಲಯಗಳನ್ನು ಅದು ಯಾರದೇ ಆಗಿದ್ದರೂ ನೀವು ಸಂರಕ್ಷಿಸುವುದಾದರೆ ಖಂಡಿತವಾಗಿಯೂ ಅಲ್ಲಾಹನ ಸಹಾಯ ನಿಮಗೆ ಒದಗುತ್ತಿತ್ತು. ಈಗ ಉಂಟಾದಂತಹ ಅಕ್ರಮವೂ ದೌರ್ಜನ್ಯವೂ ಕೊಳ್ಳೆಯೂ ಕೊಲೆಯೂ ಎಂದಿಗೂ ಉಂಟಾಗುತ್ತಿರಲಿಲ್ಲ.

ವಾಸ್ತವದಲ್ಲಿ, ಉಗ್ರವಾದಿಗಳಾದ ಹಿಂದುಗಳು ಗಲಭೆ-ಗೊಂದಲಗಳನ್ನು ಸೃಷ್ಟಿಸಿದ ಅವರ ಉದ್ದೇಶ – ಇದರ ಫಲವಾಗಿ ಮುಸ್ಲಿಮರು ಪ್ರತಿಕ್ರಿಯಿಸಿದರೆ, ಅಂದರೆ ಅವರು ಪ್ರತ್ಯಾಕ್ರಮಣಕ್ಕೆ ಇಳಿದರೆ, ಅದರ ಹೆಸರಿನಲ್ಲಿ ಹಿಂದುಗಳನ್ನು ಮುಸ್ಲಿಮರಿಗೆದುರಾಗಿ ರೊಚ್ಚಿಗೆಬ್ಬಿಸ ಬಹುದು ಎಂದಾ ಗಿತ್ತು. ಭಾರತ ಹಿಂದುಗಳಿಗೆ ಮಾತ್ರವಿರುವುದಾಗಿದೆ; ಮುಸ್ಲಿಮರಿಗೆ ಈ ದೇಶದಲ್ಲಿ ಯಾವ ಸ್ಥಾನವೂ ಇಲ್ಲವೆಂದು ಘೋಷಣೆ ಕೂಗುತ್ತಾ ದೇಶದಲ್ಲಿ ಗಲಭೆಯ ಕಿಚ್ಚನ್ನು ಹೊತ್ತಿಸಲಿಕ್ಕೂ ಹಾಗೆ ಮುಸ್ಲಿಮರಿಗೆದುರಾಗಿ ಕಿಚ್ಚಿಡುವಿಕೆ, ಕೊಳ್ಳೆ, ಕೊಲೆಗಳನ್ನು ಮಾಡಿಸಲಿಕ್ಕೂ ಅವರು ಯೋಜನೆ ಹಾಕಿಕೊಂಡಿದ್ದರು. ಇದಾಗಿದೆ ಅವರ ವಾದ. ಇಂದು ಕೂಡ ಇದೇ ವಾದವಾಗಿದೆ. ದೈವಿಕ ವಿಧಿ ಅವರಿಗೆ ಶಿಕ್ಷೆ ನೀಡದಿದ್ದರೆ ನಾಳೆ ಸಹ ಇದೇ ವಾದವಿರಬಹುದು. ಈ ವಾದದ ಪ್ರತಿಕಾರವೆಂಬಂತೆ ವಿದೇಶಗಳಲ್ಲೂ ನಿರಾಯುಧರಾದ ಮುಸ್ಲಿಮರು ಆಕ್ರಮಣಗಳಿಗೂ ದೌರ್ಜನ್ಯಗಳಿಗೂ ಗುರಿಯಾಗಿದ್ದಾರೆ. ಉಭಯ ಪಕ್ಷಗಳ ಇಂತಹ ಅಕ್ರಮ ವರ್ತನೆಗಳಲ್ಲಿ ವಿಶ್ವಾಸದ ಪ್ರಕಾಶವಾಗಲಿ ಪ್ರಬುದ್ಧತೆಯಾಗಲಿ ಗೋಚರವಾಗುವುದಿಲ್ಲ. ಸಂಪೂರ್ಣ ವಿವೇಕಹೀನವಾದ ಮೌಢ್ಯ ವರ್ತನೆಯೂ ಪ್ರತಿಕ್ರಿಯೆಯೂ ಇದಾಗಿದೆ.

ಬೊಂಬಾಯಿಯಲ್ಲಿ ಇಷ್ಟು ಮಕ್ಕಳು ಅಗ್ನಿಗ್ರಾಹುತಿಯಾದರು; ಕೈಟ್ಟಾದಲ್ಲಿ ಇಷ್ಟು ಮಕ್ಕಳು ಸುಡಲ್ಪಟ್ಟರು; ಭಾರತದಲ್ಲಿ ಇಷ್ಟು ಮಸೀದಿಗಳು ನಾಶಗೊಳಿಸಲ್ಪಟ್ಟವು; ಅದರ ಪ್ರತಿಕಾರವಾಗಿ ಪಾಕಿಸ್ತಾನದಲ್ಲಿ ಇಷ್ಟು ದೇವಾಲಯಗಳು ಕೆಡವಲ್ಪಟ್ಟವು ಎಂದು ವೃತ್ತಪತ್ರಿಕೆಗಳಲ್ಲಿ ವಾರ್ತೆಗಳು ಬರುತ್ತಿವೆ. ಕೇವಲ ಸಂಖ್ಯೆಯ ವ್ಯತ್ಯಾಸ. ದುಷ್ಕೃತ್ಯದಲ್ಲಿ ಯಾವ ವ್ಯತ್ಯಾಸವೂ ಇಲ್ಲ. ಮನುಷ್ಯತ್ವರಾಹಿತ್ಯದಲ್ಲಿ ಯಾವ ವ್ಯತ್ಯಾಸವೂ ಇಲ್ಲ. ಹಾಗೆ ಹಝ್ರತ್ ಮುಹಮ್ಮದ್ ಮುಸ್ತಫಾ (ಸ) ತಂದ ಧರ್ಮವನ್ನು ಇತರ ಧರ್ಮಗಳನ್ನೂ ಮಿಶ್ರ ಮಾಡಿ ಇವರು ದೊಡ್ಡ ಅನ್ಯಾಯವೆಸಗಿದ್ದಾರೆ. ಅವರು ಸತ್ಯಹೃದಯದೊಂದಿಗೆ ಪಶ್ಚಾತ್ತಾಪ ಪಡದಿದ್ದರೆ ದೈವಿಕ ಸಹಾಯ ಇಲ್ಲದಾಗಿ ಪುನಃ ಅವನ ಶಿಕ್ಷೆಗೆ ಗುರಿಯಾಗಬೇಕಾದೀತೇ ಎಂದು ಭಯಪಡಬೇಕಾಗಿದೆ. ಅಲ್ಲಾಹನು ತನ್ನ ವರಿಷ್ಠ ದಾಸರಿಗೆ ಖಂಡಿತವಾಗಿಯೂ ಸಹಾಯಮಾಡುವವನು. ಹಝ್ರತ್ ಪೈಗಂಬರ್ (ಸ)ರಿಗೆ ಅರೇಬಿಯದ ವಿಗ್ರಹಾರಾಧಕರ ಮುಂದೆ ಜನಸಂಖ್ಯೆಯ ವಿಚಾರದಲ್ಲಿ ನೋಡುವುದಾದರೆ, ಇಂದು ಭಾರತದಲ್ಲಿ ಬಹುದೇವಾರಾಧಕರ ಮುಂದೆ ಮುಸ್ಲಿಮರಿಗಿರುವುದಕ್ಕಿಂತ ಸಂಖ್ಯಾಬಲ ಎಷ್ಟೋ ಕಡಿಮೆ ಇತ್ತು. ನೀವೊಮ್ಮೆ ತುಲನಾತ್ಮಕ ಅಧ್ಯಯನ ಮಾಡಿ ನೋಡಿರಿ. ಮದೀನದಲ್ಲಿ ಬೆರಳೆಣಿಕೆಯ ಕೆಲವು ಮುಸ್ಲಿಮರು ಮತ್ತು ಇತರ ಸ್ಥಳಗಳಲ್ಲಿ ಅಲ್ಲೊಬ್ಬ ಇಲ್ಲೊಬ್ಬರಾಗಿ ಕೆಲವರು ಮಾತ್ರವೇ ಇದ್ದರು. ಅವರ ವಿರುದ್ಧ ಅರೇಬಿಯದಲ್ಲಿಡೀ ಬಹುದೇವಾರಾಧಕರ ಶಕ್ತಿ ನೂರು ಪಟ್ಟು ಅಥವಾ ಅದಕ್ಕಿಂತ ಹೆಚ್ಚಾಗಿತ್ತು. ಆದರೆ ಅಲ್ಲಾಹನ ವಿಧಿ ಎಂತಹ ಮಾರ್ಪಾಟು ಉಂಟು ಮಾಡಿತೆಂದು ನೋಡಿರಿ. ಮುಸ್ಲಿಮರಿಗೆ ಒಂದಕ್ಕೆ ಬದಲು ನೂರು ಪಟ್ಟು ಶಕ್ತಿ ನೀಡಿ ನೂರು ಪಾಲು ಶಕ್ತಿಯಿದ್ದ ಬಹುದೇವಾರಾಧಕರನ್ನು ಒಂದು ಪಾಲು ಶಕ್ತಿಯಾಗಿ ಕಡಿಮೆಗೊಳಿಸಿದನು. ದೈವಿಕ ಹಸ್ತಗಳು ಇಲ್ಲಿ ವರ್ತಿಸಿದ್ದವು. ದೈವಿಕ ಸಹಾಯ ಅರೇಬಿಯದಲ್ಲಿ ಒದಗಿದ್ದರೆ ಅದೇ ಹಸ್ತಗಳು ಭಾರತದಲ್ಲಿ ಏಕೆ ವರ್ತಿಸುವುದಿಲ್ಲ? ಅಲ್ಲಾಹನ ಕೈಗಳನ್ನು ತಡೆಯಲು ಯಾರಿಗೆ ಸಾಧ್ಯ? ಆದರೆ ಮುಸ್ಲಿಮರು ತಮ್ಮ ಭಾವನೆಗಳನ್ನೂ ತಮ್ಮ ಹೃದಯಗಳನ್ನೂ ಹಝ್ರತ್ ಪೈಗಂಬರ್ ಮತ್ತು ಶಿಷ್ಯರ ಮಾದರಿಯಲ್ಲಿ ಬದಲಾಯಿಸಬೇಕಾದುದು ಅವಶ್ಯಕ. ಅವರ ನಡೆವಳಿಕೆಗಳನ್ನೂ ತ್ಯಾಗಗಳನ್ನೂ ನೀವು ಅನುಕರಿಸಿದರೆ ಅಲ್ಲಾಹನ ಸಹಾಯದ ದೃಶ್ಯಗಳನ್ನು ನಿಮಗೆ ಕಾಣಲು ಸಾಧ್ಯವಾಗುವುದು. ಮುಸ್ಲಿಮರಿಗೆ ಒಂದು ಸುಸಂದರ್ಭ ಒದಗಿ ಬಂದಿತ್ತು. ಆದರೆ ಅವರ ನಿರ್ಭಾಗ್ಯವಂತ ನೇತಾರರ

ದಾರಿತಪ್ಪಿದ ನಾಯಕತ್ವ ಈ ಪರೀಕ್ಷೆಯಿಂದ ಪ್ರಯೋಜನ ಪಡೆಯುವ ಬದಲು ಸಮುದಾಯವನ್ನು ನಾಶದೆಡೆಗೆ ತಳ್ಳಿಬಿಟ್ಟಿದೆ.

ಭಾರತದಲ್ಲಿ ನಡೆದ ಅಕ್ರಮ ಮತ್ತು ದೌರ್ಜನ್ಯಗಳ ಪ್ರತಿಕ್ರಿಯೆ ವಿದೇಶಗಳಲ್ಲಿ ಸಹ ಕಂಡು ಬಂತು. ಆದರೆ ಅರಬ್ ರಾಜ್ಯಗಳಲ್ಲಿರುವ ಧರ್ಮಪಂಡಿತರು ಇತರ ರಾಜ್ಯಗಳಲ್ಲಿರುವವರಿಗಿಂತ ಬುದ್ಧಿಜೀವಿಗಳು. ಅದೇ ಪ್ರಕಾರ ಅಲ್ಲಿರುವ ಸರಕಾರಗಳು ಸಹ ಬುದ್ಧಿ ಪ್ರಯೋಗಿಸಿ ವರ್ತಿಸಿದವು. ಗಲ್ಫ್ ಮತ್ತು ಅರಬ್ ರಾಜ್ಯಗಳಲ್ಲಿ ಸಹ ಧಾರಾಳ ಹಿಂದೂ ವ್ಯಾಪಾರಿಗಳೂ ಕೂಲಿಯಾಳುಗಳೂ ಇದ್ದಾರೆ. ಅವರ ಆರಾಧನಾಲಯಗಳನ್ನು ಒಡೆಯ ಬಾರದೆಂದೂ ಯಾವನಾದರೂ ಒಬ್ಬ ಅಮುಸ್ಲಿಮನನ್ನು ಕೊಲ್ಲಬಾರದೆಂದೂ ಖಡಾಖಂಡಿತವಾಗಿ ಅಲ್ಲಿಯ ಸರಕಾರಗಳು ಆದೇಶಿಸಿದವು. ಪಾಕಿಸ್ತಾನದಿಂದ ಆಮದು ಮಾಡಲ್ಪಟ್ಟ ಮುಲ್ಲಾಗಳು ಅಲ್ಲಿರುವ ಮುಸ್ಲಿಮರನ್ನು ರೊಚ್ಚಿಗೆಬ್ಬಿಸಲಿಕ್ಕೆ ಪ್ರಯತ್ನಿಸಿದರೂ ಅನ್ಯಧರ್ಮೀಯರಿಗೆ ವಿರುದ್ಧವಾಗಿ ಬೆರಳೆತ್ತಲು ಕೂಡ ತಮ್ಮ ರಾಜ್ಯದಲ್ಲಿ ಯಾರನ್ನೂ ಬಿಡಲಾಗದೆಂದು ಸರಕಾರಗಳು ಮುಲ್ಲಾಗಳಿಗೆ ಮುನ್ನೆಚ್ಚರಿಕೆ ನೀಡಿದವು. ಇಂತಹ ಒಂದು ನಿರೋಧವನ್ನು ಪ್ರಕಟಿಸಿರುವುದರಿಂದ ಅವರ ಉದ್ದೇಶ ಏನಿದ್ದರೂ ಅದು ವಿವೇಕಯುತವೂ ಪ್ರಶಂಸನೀಯವೂ ಆಗಿದೆ. ಇಸ್ಲಾಮಿಕ ಅಧ್ಯಾಪನೆಗಳ ಬೆಳಕಿನಲ್ಲಿ ಶುದ್ಧ ಹೃದಯದಿಂದ ಅವರು ಹೀಗೆ ಮಾಡಿದ್ದರೆ ಅದು ಬುದ್ಧಿ ಮತ್ತು ದೇವರೊಡನೆ ಭಯಭಕ್ತಿಯ ಪ್ರಕಾಶದಲ್ಲಿ ಮಾಡಿದ್ದಾಗಿರಬಹುದು. ಅಲ್ಲಾಹನು ಹಾಗೆಯೇ ಮಾಡಲಿ. ಆದರೆ ಭಾರತ ಮತ್ತು ಪಾಕಿಸ್ತಾನದ ಮುಸ್ಲಿಮರಿಗೆ ಈ ಬುದ್ಧಿ ತೋಚಲಿಲ್ಲ. ಅವರ ದಾರಿಗೆಟ್ಟ ನಾಯಕತ್ವ ಅವರನ್ನು ಆಪತ್ತಿನೆಡೆಗೆ ತಳ್ಳಿಬಿಟ್ಟಿತು.

ಪ್ರಾಮಾಣಿಕತೆಯ ಬಗ್ಗೆ ನಾನು ಈ ಮೊದಲು ಕೆಲವು ಖುತ್ಬಗಳಲ್ಲಿ ಜಮಾಅತನ್ನು ಎಚ್ಚರಿಸಿದ್ದೇನೆ. ವಿಶ್ವಾಸಘಾತಕರ ಪೈಕಿ ಅತ್ಯಂತ ದೌರ್ಭಾಗ್ಯವಂತನೆಂದರೆ, ಸಮುದಾಯದ ನಾಯಕತ್ವವನ್ನು ವಹಿಸಿಕೊಂಡು ವಿಶ್ವಾಸಘಾತ ಮಾಡುವವನು ಎಂದು ಹಝ್ರತ್ ಪೈಗಂಬರ್(ಸ) ನುಡಿದಿದ್ದಾರೆ. ಭಾರತ ಮತ್ತು ಪಾಕಿಸ್ತಾನದಲ್ಲಿರುವ ಮುಸ್ಲಿಂ ನೇತಾರರು ಹಝ್ರತ್ ಪೈಗಂಬರ್(ಸ)ರವರ ಪರಿಶುದ್ಧ ಮಾದರಿಯನ್ನು ಕೈಗೊಂಡು ವರ್ತಿಸಿರುತ್ತಿದ್ದರೆ ಇಂದು ಕಾಣುವುದಕ್ಕಿಂತ ಸಂಪೂರ್ಣ ವ್ಯತ್ಯಾಸವಾಗಿರುವ ಒಂದು ಸ್ಥಿತಿಯನ್ನು ಕಾಣಲು ಸಾಧ್ಯವಾಗುತ್ತಿತ್ತು. ಹೃದ್ರಾವಕವಾದ ಸ್ಥಿತಿಗಳು ಹುಟ್ಟಿಕೊಂಡಿದ್ದರೆ ಸಹ ಅದು ಪ್ರಾರಂಭದಲ್ಲೇ ಕೊನೆಗೊಳ್ಳುತ್ತಿತ್ತು. ನನಗೆ ಬರುತ್ತಿದ್ದ ಪತ್ರಗಳಿಂದ, ಯಾವ ವೃತ್ತಪತ್ರಿಕೆಯಲ್ಲೂ ಪ್ರಕಟವಾಗದ ಭಯಾನಕವೂ ಹೃದ್ರಾವಕವೂ ಆದ ರೀತಿಯಲ್ಲಿ ಮುಸ್ಲಿಮರಿಗೆ ವಿರುದ್ಧವಾಗಿ ಎಸಗಲ್ಪಟ್ಟ ದೌರ್ಜನ್ಯಗಳ ಮತ್ತು ಅಕ್ರಮಗಳ ದೃಕ್‌ಸಾಕ್ಷಿ ವಿವರಣೆಗಳಿವೆ. ಇದು ಇಲ್ಲಿಯೇ ಕೊನೆಗೊಳ್ಳುವುದೆಂದು ತೋರುವುದಿಲ್ಲ. ಇದರಲ್ಲಿ ಅನೇಕ ಗೂಢಾಲೋಚನೆಗಳೂ ಷಡ್ಯಂತ್ರಗಳೂ ಒಳಗೊಂಡಿವೆ ಯೆಂದು ಮನದಟ್ಟಾಗುತ್ತದೆ. ಆದರೆ ಇವರು ಬಹುದೇವಾರಾಧಕರಾಗಿಯೂ ಇಸ್ಲಾಮಿನ ಮೇಲೆ ವಿದ್ವೇಷ ಇದ್ದವರಾಗಿಯೂ ಪಾಕಿಸ್ತಾನದ ಮೇಲೆ ಧರ್ಮದ ನಾಮದಲ್ಲಿ ವೈರವಿದ್ದೂ ಇವರ ಸರಕಾರಗಳು ಲೋಕಕ್ಕೆ ಮುಖ ತೋರಿಸಲಿಕ್ಕಾದರೂ ಏನಾದರೂ ಪ್ರಯತ್ನಿಸುವುದಾಗಿ ಕಾಣಲು ಸಾಧ್ಯವಾಗುತ್ತದೆ. ತಮ್ಮ ಲೋಪದೋಷಗಳನ್ನು ಮರೆಮಾಚಲು ಶ್ರಮಿಸುತ್ತವೆ. ದೃಕ್‌ಸಾಕ್ಷಿಗಳ ವಿವರಣೆಗಳಿಂದ ತಿಳಿಯಲು ಸಾಧ್ಯವಾಗುವುದೇನೆಂದರೆ, ಅಯೋಧ್ಯೆಯ ಮಸೀದಿಯ ವಿಚಾರದಲ್ಲಿ ಕೇಂದ್ರ ಸರಕಾರ ನಿಷ್ಕ್ರಿಯತೆ ತೋರಿಸಿ ಕಣ್ಣುಮುಚ್ಚಿಕೊಂಡು ಈ ಘಟನೆ ನಡೆಯಲು ಅನುಮತಿಸಿತು. ಉತ್ತರ ಪ್ರದೇಶ ಸರಕಾರ ಈ ವಿಚಾರದಲ್ಲಿ ಸಂಪೂರ್ಣವಾಗಿಯೂ ಪಾತ್ರ ವಹಿಸಿತ್ತು. ಆಗ ಕೇಂದ್ರ ಸರಕಾರ ಉತ್ತರ ಪ್ರದೇಶ ಸರಕಾರಕ್ಕೆ ಈ ಬಗ್ಗೆ ಮುನ್ನೆಚ್ಚರಿಕೆ ನೀಡಿತ್ತು. ಘಟನೆ ನಡೆದ ಕೂಡಲೇ ಕೇಂದ್ರ ಸರಕಾರ ಉತ್ತರ ಪ್ರದೇಶ ಸರಕಾರವನ್ನು ವಜಾ ಮಾಡಿತು. ಇದು ಕೂಡ ಧಾರ್ಮಿಕತೆ ಅಥವಾ ಸದಾಚಾರದಿಂದ ಕೂಡಿದ ಒಂದು ಕ್ರಮವಾಗಿರಲಿಲ್ಲ. ಕೇಂದ್ರ ಸರಕಾರ ನಿಯಮದ ಸಹಾಯದಿಂದ, ತಮ್ಮ ಆಜ್ಞೆಗಳನ್ನು ಅನುಸರಿಸದೆ ಸ್ವೇಚ್ಛೆಯಿಂದ ವರ್ತಿಸಿದ ಸರಕಾರವನ್ನು ತಾವು ವಿಸರ್ಜಿಸಿದೆವು ಎಂದು ಘಂಟಾಘೋಷ ಮಾಡಿತು.

ಅಂದರೆ, ಇವೆಲ್ಲ ಲೋಕಕ್ಕೆ ತೋರಿಸಲು ಮಾಡಿದ ಯೋಜನೆಗಳಾಗಿವೆ. ಈ ಪ್ರಾಂತ್ಯ ಸರಕಾರದೊಡನೆ ರಾಜಕೀಯ ಪ್ರತಿಕಾರ ಮಾಡಲು ಕೇಂದ್ರವು ಸಂದರ್ಭ ಕಾಯುತ್ತಿತ್ತು. ಇಂತಹ ಒಂದು ಘಟನೆ (ಮಸೀದಿ ಒಡೆಯುವುದು) ಸಂಭವಿಸುವುದೆಂದು ತಿಳಿದು ಕೂಡ ಕೇಂದ್ರ ಸರಕಾರ ಬೇಕೆಂದೇ ಕಣ್ಣು ಮುಚ್ಚಿ ಕುಳಿತಿತು. ದೇಶದಲ್ಲೆಲ್ಲ ಪ್ರಸ್ತುತ ಘಟನೆಯ ಬಗ್ಗೆ ವಿಷಾದ ಮತ್ತು ಲಜ್ಜೆ ಪ್ರಕಟಗೊಂಡಿರುವುದೆಂದೂ ಅಯೋಧ್ಯಾ ಪ್ರಕರಣ ಮತ್ತು ಅದಕ್ಕೆ ಸಂಬಂಧಿಸಿದ ಗಲಭೆಗಳು ಮುಗಿಯದ ಕಳಂಕವನ್ನು ದೇಶಕ್ಕೆ ತಂದೊಡ್ಡಿವೆಯೆಂದೂ ಪತ್ರಿಕೆಗಳು ಅಭಿಪ್ರಾಯಪಡುತ್ತವೆ. ಎಂದಿಗೂ ಅಳಿಸಲಾಗದ ರಕ್ತರಂಜಿತ ಕಳಂಕ ತಮಗುಂಟಾಗಿದೆಯೆಂದು ಜನರು ತಿಳಿದುಕೊಂಡಿದ್ದಾರೆ. ಮಸೀದಿ ಧ್ವಂಸಗೊಳಿಸಲ್ಪಟ್ಟ ಪರಿಣಾಮವಾಗಿ ಎಷ್ಟೋ ಶತಮಾನಗಳಷ್ಟು ಕಾಲದ ಪರಂಪರೆ ಇರುವ ಭಾರತೀಯ ಸಂಸ್ಕೃತಿ ಒಡೆದು ನುಚ್ಚು ನೂರಾಗಿದೆಯೆಂದು ಪತ್ರಿಕೆಗಳು ಘೋಷಿಸಿದವು. ಒಟ್ಟಾರೆ, ಭಾರತದ ಪತ್ರಿಕೆಗಳು ಪ್ರಸ್ತುತ ಘಟನೆಗಳ ಬಗ್ಗೆ ತಮ್ಮ ತೀವ್ರವಾದ ಪ್ರತಿಭಟನೆಯನ್ನು ತೋರಿಸಿವೆ. ಆದರೆ ವಿಷಾದಕರವೇನೆಂದರೆ, ಕೆಲವು ಮುಸ್ಲಿಂ ನಾಯಕರು ಇಂತಹ ಸಂದರ್ಭದಲ್ಲಿ ತೀರಾ ಅವಿವೇಕತನದಲ್ಲಿ ವರ್ತಿಸಿದರು. ಅವರು ಮಸೀದಿಗಳ ಮಿಂಬರ್‌ಗಳನ್ನು ಹತ್ತಿ, ಎದ್ದೇಳಿರಿ, ಜಿಹಾದಿನ ಸಂದರ್ಭ ಬಂದೊದಗಿದೆ, ಪ್ರತಿಕಾರ ಕ್ರಮ ಕೈಗೊಳ್ಳಿರಿ, ಹೊಡೆಯಿರಿ, ಬಡಿಯಿರಿ ಎಂಬಿತ್ಯಾದಿಯಾಗಿ ಪ್ರಚೋದನಾತ್ಮಕವಾಗಿ ಭಾಷಣ ಮಾಡುತ್ತಾ ಪಾಮರ ಮುಸ್ಲಿಮರನ್ನು ರೊಚ್ಚಿಗೆಬ್ಬಿಸುತ್ತಿದ್ದರು. ಧೆಲ್ಲಿ ಮಸೀದಿಯ ಇಮಾಮಿನ ಮತ್ತು ಇತರ ಮಸೀದಿಗಳಲ್ಲಿ ನಡೆಯುವ ಭಾಷಣಗಳನ್ನು ಇವರು ಅಂತರ್ದೇಶೀಯ ದೃಶ್ಯ ಮಾಧ್ಯಮಗಳ ಮೂಲಕ ಲೋಕದಲ್ಲೆಲ್ಲೂ ಪ್ರದರ್ಶಿಸುತ್ತಾರೆ. ಹಾಗೆ ಉಭಯ ಪಕ್ಷಗಳ ವರ್ತನೆ ಒಂದೇ ರೀತಿಯಾಗಿದೆಯೆಂದು ಇವರು ರುಜುಪಡಿಸುತ್ತಾರೆ. ಒಟ್ಟಾರೆ, ಬಲಶಾಲಿಗಳ ಮತ್ತು ಬಲಹೀನರ ಮಧ್ಯೆ ಇಲ್ಲಿ ಹೋರಾಟ ನಡೆಯುತ್ತಿದೆ. ಪಾಕಿಸ್ತಾನದಲ್ಲಿ ಅಲ್ಪ ಸಂಖ್ಯೆಯಲ್ಲಿ ಹಿಂದೂ ದೇವಾಲಯಗಳಿರುವುದರಿಂದ ಅಲ್ಲಿ ಅಲ್ಪ ಸಂಖ್ಯೆಯಲ್ಲಿ ದೇವಾಲಯಗಳು ಧ್ವಂಸಗೊಳಿಸಲ್ಪಟ್ಟವು. ಅದೇ ಪ್ರಕಾರ ಅಲ್ಲಿ ಹಿಂದೂಗಳ ಸಂಖ್ಯೆ ಕಡಿಮೆ. ಆದ್ದರಿಂದ ಕಮ್ಮಿ ಸಂಖ್ಯೆಯಲ್ಲಿ ಅವರು ಆಕ್ರಮಿಸಲ್ಪಟ್ಟರು. ಆದರೆ ಭಾರತದಲ್ಲಿ ಈ ಸಂಖ್ಯೆ ಬಹಳ ಹೆಚ್ಚಾಗಿತ್ತು. ಆದ್ದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಅಲ್ಲಿ ಇವೆಲ್ಲ ನಡೆದವು. ಆದರೆ ವಿಷಾದಕರವೇನೆಂದರೆ, ಪಾಕಿಸ್ತಾನದಲ್ಲಿ ಹಿಂದೂಗಳಿಗೆ ವಿರುದ್ಧವಾಗಿ ನಡೆದ ಭಯಾನಕವಾದ ದೌರ್ಜನ್ಯಗಳ ಕುರಿತು ತಮ್ಮ ಖೇದ ಮತ್ತು ಪ್ರತಿಭಟನೆ ಪ್ರಕಟಗೊಳಿಸುವ ಸನ್ಮನಸ್ಸು ಅಲ್ಲಿಯ ಪತ್ರಿಕೆಗಳಿಗೆ ಇಲ್ಲದೆ ಹೋಯಿತು. ಇದರ ವಿರುದ್ಧವಾಗಿ ಸ್ಪಷ್ಟರೀತಿಯಲ್ಲಿ ಖಂಡನೆ ಮತ್ತು ಪ್ರತಿಭಟನೆ ಸೂಚಿಸಲ್ಪಡಬೇಕಿತ್ತು. ನೀವು ಇದು ಮಾಡಿದ್ದು ಅತ್ಯಂತ ಅನ್ಯಾಯವೂ ಅನೀತಿಯೂ ಆಗಿಹೋಯಿತೆಂದೂ ಇಸ್ಲಾಮಿನ ಮಹತ್ವಕ್ಕೂ ಖುರ್‌ಆನಿನ ಮಹಾತ್ಮೆಗೂ ಕುಂದುಂಟುಮಾಡುವುದೆಂದೂ ಮುಹಮ್ಮದ್ ಪೈಗಂಬರ್ (ಸ)ರವರ ಪರಿಶುದ್ಧ ಮಾದರಿಗೆ ಅಪಕೀರ್ತಿ ತರುವುದೆಂದೂ ಅಲ್ಲಿಯ ಮುಸ್ಲಿಂ ಮುಖಂಡರು ಹೇಳಿಕೆಗಳನ್ನು ಹೊರಡಿಸಬೇಕಿತ್ತು. ಹಾಗೆ ಮಾಡಿದ್ದರೆ ಇಂದು ಜಗತ್ತಿನಲ್ಲಿ ಇಸ್ಲಾಮಿನ ಕುರಿತಿರುವ ಪ್ರತಿಕ್ರಿಯೆ ಬೇರೆ ವಿಧದಲ್ಲಾಗುತಿತ್ತು. ಇಸ್ಲಾಮಿನ ವಿರುದ್ಧ ಶಕ್ತಿಗಳ ನಿಲುವಿನಲ್ಲಿ ಒಂದು ಮಾರ್ಪಾಟು ಉಂಟಾಗುತ್ತಿತ್ತು. ಆದರೆ ಈಗ ಏನು ಸಂಭವಿಸಿತು? ನೀವು ಸತ್ಯವಂತರಾಗಿದ್ದು ಕೂಡ ಅಸತ್ಯವಂತರಂತೆ ತಮ್ಮಲ್ಲಿ ಒಂದು ಕಳಂಕವನ್ನು ಉಂಟು ಮಾಡಿದ್ದೀರಿ. ಇದರ ಪ್ರಧಾನ ಕಾರಣಕರ್ತರು ಮುಸ್ಲಿಮರ ಮುಖಂಡರುಗಳು. ಅವರಲ್ಲಿ ಜ್ಞಾನ ಮತ್ತು ಭಯಭಕ್ತಿಯ ಪ್ರಕಾಶ ನಂದಿ ಹೋಗಿದೆ. ತಮ್ಮ ಸಮುದಾಯದೊಡನೆ ಅವರು ವಿಶ್ವಾಸಘಾತಕ ಮಾಡುತ್ತಿದ್ದಾರೆ. ಅವರು ತಪ್ಪು ದಾರಿಯಲ್ಲಿ ಜನರನ್ನು ಕೊಂಡೊಯ್ಯುತ್ತಿದ್ದಾರೆ. ತತ್ಫಲವಾಗಿ, ಮುಸ್ಲಿಮರು ಹಲವಿಧ ದುಃಖಗಳಿಗೆ ಗುರಿಯಾಗುತ್ತಿದ್ದಾರೆ. ನೀವು ಅನ್ಯ ಮತಸ್ಥರ ಮಾರ್ಗವನ್ನು ಅನುಸರಿಸಿದುದರ ಫಲವಾಗಿ ಅಲ್ಲಾಹನಿಂದಿರುವ ಸಹಾಯಕ್ಕೆ ನೀವು ಅರ್ಹ ರಾಗುವುದಿಲ್ಲ. ನೀವು ಅನ್ಯರಂತೆ ಆಗಿಬಿಟ್ಟಾಗ ನಿಮಗೋಸ್ಕರ ಅದ್ಭುತ ಘಟನೆಗಳು ಸಂಭವಿಸುವಂತೆ ಮಾಡಲಿಕ್ಕೂ ಆಕಾಶದಿಂದ ಮುಅಜಿಝಾತ್‌ಗಳನ್ನು ಇಳಿಸಲಿಕ್ಕೂ

ಅಲ್ಲಾಹನಿಗೇನಾಗಿದೆ? ಅಲ್ಲಾಹನು ಎಷ್ಟು ಸ್ಪಷ್ಟವಾದ ರೀತಿಯಲ್ಲಿ ಹೇಳುತ್ತಾನೆಂದು ನೋಡಿರಿ:

"ತಮ್ಮಲ್ಲಿ ಸ್ವಯಂ ಒಂದು ಪರಿವರ್ತನೆಯನ್ನುಂಟು ಮಾಡದಿರುವ ವರೆಗೆ ಅಲ್ಲಾಹನು ಸಹ ಜನರಲ್ಲಿ ಒಂದು ಪರಿವರ್ತನೆಯನ್ನು ಮಾಡಲಾರ."

ಹಾಗೆ ದೇವಹಿತಾನುಸಾರ ತಮ್ಮಲ್ಲಿ ಒಂದು ಪರಿವರ್ತನೆ ಮಾಡಿದರೆ ಮಾತ್ರವೇ ಅಲ್ಲಾಹನು ಸಹ ತನ್ನ ಮಹತ್ತಾದ ಅದ್ಭುತಗಳನ್ನು ತೋರಿಸುವನು.

ದೇವಾನುಗ್ರಹಗಳಿಗೆ ಬೆಲೆಕೊಡುವವರು ಇರುವಷ್ಟರ ಕಾಲ ಅಲ್ಲಾಹನು ತನ್ನ ಅನುಗ್ರಹವನ್ನು ತೆಗೆದು ಬಿಡಲಾರ. ಆದರೆ ಜನರು ದೇವಾನುಗ್ರಹಗಳನ್ನು ಕಡೆಗಣಿಸಿ ತಪ್ಪಾದ ಮಾರ್ಗವನ್ನು ಕೈಗೊಳ್ಳುವುದಾದರೆ ಅಲ್ಲಾಹನ ಕರುಣೆ ಅವರಿಂದ ದೂರವಾಗಿ ಅವರೊಡನಿರುವ ಸಂಬಂಧ ವಿಚ್ಛೇದಿಸಲ್ಪಡುವುದು.

ಈ ದೈವಿಕ ಮುನ್ನೆಚ್ಚರಿಕೆಯನ್ನು ಪರಿಗಣಿಸಿ ಮುಸ್ಲಿಮರು ತಮಗೆ ಎದುರಾಗಿರುವ ದಯನೀಯ ಅವಸ್ಥೆಯ ಕುರಿತು ಪರ್ಯಾಲೋಚನೆ ಮಾಡಬೇಕಾಗಿದೆ. ಎಷ್ಟರವರೆಗೆ ನಿಜಾರ್ಥದಲ್ಲಿರುವ ಆರಾಧನೆಯನ್ನು ಮಾಡಿ ಪ್ರಾಮಾಣಿಕ ಹೃದಯದಿಂದ 'ಮುಖ್‌ಲಿಸೀನ ಲಹುದ್ದೀನ್' ಆಗಿ ಮಸೀದಿಗಳೊಂದಿಗೆ ಸಂಬಂಧವನ್ನು ಸ್ಥಾಪಿಸುವುದಿಲ್ಲವೋ ಅಷ್ಟರವರೆಗೆ ಅಲ್ಲಾಹನ ಸಹಾಯ ಪ್ರತ್ಯಕ್ಷಗೊಳ್ಳಲಾರದು. ನಿಮ್ಮಲ್ಲಿ ಇಂದು ಗೋಚರವಾಗುವ ಪ್ರತಿಕ್ರಿಯೆ ಕೇವಲ ರಾಜಕೀಯವೋ ಅಥವಾ ಧಾರ್ಮಿಕವೋ ಎಂಬ ವಿಚಾರದ ಬಗ್ಗೆ ಚಿಂತನೆ ಮಾಡಿ, ಪಾಕಿಸ್ಥಾನದಲ್ಲಿ ಅಹ್ಮದಿಯಾ ಜಮಾಅತಿಗೆ ಎದುರಿಸಬೇಕಾಗಿ ಬಂದ ಸ್ಥಿತಿಗತಿಗಳೊಡನೆ ನಾನು ತುಲನೆ ಮಾಡಿ ನೋಡಿದಾಗ, ನಿಮ್ಮ ಈ ಪ್ರತಿಕ್ರಿಯೆ ಧಾರ್ಮಿಕವಾದ ಅಭಿಮಾನವನ್ನು ಆಧರಿಸಿಕೊಂಡಿಲ್ಲ; ಬರೇ ನಾಮಮಾತ್ರವೆಂದು ಮನಗಾಣಲು ಸಾಧ್ಯವಾಗುತ್ತದೆ. ಮಸೀದಿಯೊಂದಿಗಿನ ನಿಮ್ಮ ಪ್ರೀತಿ ಪ್ರದರ್ಶನ ಬರೇ ರಾಜಕೀಯ ಪ್ರೇರಿತವೂ ಇತರ ಮತಸ್ಥರೊಡನಿರುವ ಶತ್ರುತಾ ಪ್ರಕಟನೆಯೂ ಆಗಿದೆಯೆಂಬುದು ಸ್ಪಷ್ಟ. ರಾಜಕೀಯ ಪ್ರತಿರೋಧಕ್ಕಾಗಿ ಇಸ್ಲಾಂ ಧರ್ಮದ ಮೊರೆಹೊಗುವುದು ಅವಶ್ಯವಿಲ್ಲ.

ಇಂದು ಗೋಚರವಾಗುವ ಪ್ರತಿಕ್ರಿಯೆಗಳು ನಿಮಗೆ ಮಸೀದಿಯ ಮೇಲಿರುವ ಪ್ರೀತಿಯ ಬಾಹ್ಯ ಪ್ರಕಟನೆಯಲ್ಲ. ಕಾರಣವೇನೆಂದರೆ, ಮುಸ್ಲಿಮರೆಂದು ತಮ್ಮ ಬಗ್ಗೆ ಹೇಳಿಕೊಳ್ಳುವವರು ಮುಸ್ಲಿಮರಲ್ಲಿ ಸೇರಿದ ಇತರ ಪಂಗಡಗಳ ಮಸೀದಿಗಳನ್ನು ಅಗ್ನಿಗಾಹುತಿ ಮಾಡಿ ಒಡೆದು ನಿರ್ನಾಮ ಮಾಡಲಿಲ್ಲವೇ? ಶಿಯಾಗಳ ಪವಿತ್ರ ಸ್ಥಳಗಳನ್ನು ನಾಶಪಡಿಸಲಿಲ್ಲವೇ? ಸುನ್ನಿಗಳ ಮಸೀದಿಗಳನ್ನು ಬೆಂಕಿಗಾಹುತಿ ಮಾಡಲಿಲ್ಲವೇ? ಪಾಕಿಸ್ಥಾನದಲ್ಲಿ ಲಾಹೋರ್, ಪೇಶಾವರ, ಕರಾಚಿ, ಸಿಂಧ್ ಮೊದಲಾದೆಡೆಗಳಲ್ಲಿ ಇಂತಹ ಘಟನೆಗಳು ಸಂಭವಿಸಿವೆ. ಇದು ಇಂದೋ ನಿನ್ನೆಯೋ ಮಾತ್ರ ನಡೆದ ಘಟನೆಗಳಲ್ಲ. ಒಂದು ಮುಸ್ಲಿಂ ಪಂಗಡ ಮತ್ತೊಂದು ಮುಸ್ಲಿಂ ಪಂಗಡಕ್ಕೆ ವಿರುದ್ಧವಾಗಿ ಯುದ್ಧ ಪತಾಕೆ ಎತ್ತಿಕೊಂಡು ಆ ಪಂಗಡ ನಿರ್ಮಿಸಿದ ಮಸೀದಿ 'ಮಸ್ಜಿದ್ ಳಿರಾರ್' ಆಗಿದೆ; ಏಕದೇವಾರಾಧನೆಗಾಗಿ ನಿರ್ಮಿತ ವಾದುದಲ್ಲ ಎಂದು ಹೇಳಿ ಅದನ್ನು ಒಡೆದು ಹಾಕಲು ಪಾಮರ ಮುಸ್ಲಿಮರನ್ನು ಪ್ರೇರೇಪಿಸಿತು. ನೀವು ಈ ಮಸೀದಿಗಳನ್ನು ಕೆಡವಿದರೆ ಅಲ್ಲಾಹನು ನಿಮ್ಮ ಮೇಲೆ ಸಂತುಷ್ಟನಾಗುವನೆಂದು ಮುಲ್ಲಾಗಳು ಪಾಮರ ಜನರಿಗೆ ಪ್ರಲೋಭನೆ ಕೊಟ್ಟು ಹಲವು ಮಸೀದಿಗಳು ನಿರ್ನಾಮವಾದ ಘಟನೆಗಳಿಂದ ಕೂಡಿದ ಚರಿತ್ರೆಗಳಿವೆ.

ಹಾಗೆ ಅಲ್ಲಾಹನ ಹೆಸರು ಹೇಳಿಕೊಂಡು ಅಲ್ಲಾಹನ ಭವನಗಳನ್ನು ಒಡೆದು ನಾಶಮಾಡುವ ಉಪದೇಶ ಸ್ವೀಕರಿಸಿ ಮುಸ್ಲಿಮರೇ ಮಸೀದಿಗಳನ್ನು ಧ್ವಂಸ ಮಾಡಿದ ಘಟನೆಗಳು ನಮ್ಮ ಮುಂದೆ ಇರುವಾಗ ಅನ್ಯರು ಅದೇ ರೀತಿ ಮಾಡುವಾಗ ಅವರನ್ನೇಕೆ ಅಕ್ರಮಿಗಳೆಂದೂ ಅನೀತಿ ಮತ್ತು ಅನ್ಯಾಯ ತೋರಿಸುವವರೆಂದೂ ಹೇಳಿಕೊಂಡು ಅವರನ್ನು ಆಕ್ರಮಿಸಲು ಹೋಗುವುದು?

ಅಹ್ಮದಿಯಾ ಜಮಾಅತಿನ ವರ್ತಮಾನ ಕಾಲದ ಚರಿತ್ರೆಗೆ ಸಂಬಂಧಿಸಿದ ಕೆಲವು ನಿಜಾಂಶಗಳನ್ನು ನಿಮ್ಮ ಮುಂದೆ ಇಡುತ್ತೇನೆ. ಆಗ ನಿಮಗೆ ತಿಳಿಯಬಹುದು – ಇಂದು ಪಾಕಿಸ್ತಾನದ ಉಲಮಾಗಳ ಹೃದಯಗಳಲ್ಲಿ

ಮಸೀದಿಗಳೊಡನೆ ಎಷ್ಟರಮಟ್ಟಿಗೆ ಪ್ರೀತಿ ಇದೆಯೆಂದು. ಮಸೀದಿಯೊಡನಿರುವ ಪ್ರೀತಿ ಅಲ್ಲಾಹನಿಗೋಸ್ಕರ ಮಾತ್ರ ಇರುವುದಾದರೆ ಆ ಪ್ರೀತಿ ಒಂದು ದಿಶೆಯಲ್ಲಿರಬೇಕು. ಆ ದಿಶೆ ಒಂದೇ ಖಿಬ್ಲವನ್ನು ಅಭಿಮುಖವಾಗಿರಿಸಬೇಕು. ಆ ದಿಶೆ ದೇವ ಸಾಮೀಪ್ಯವನ್ನು ಗಳಿಸಲಿಕ್ಕೂ ಅವನ ಅಧ್ಯಾಪನೆಗಳಲ್ಲಿ ಅಧಿಷ್ಠಿತವೂ ಆಗಿರಬೇಕು. ಆಗ ದೇವನೊಡನಿರುವ ಪ್ರೀತಿಯ ಹೆಸರಿನಲ್ಲಿ, ಪರಸ್ಪರ ಶತ್ರುತೆ ತೋರಿಸಿ ದೇವಭವನಗಳನ್ನು ನಾಶಪಡಿಸಲಿಕ್ಕೆ ಅವರಿಗೆ ಸಾಧ್ಯವಾಗದು. ಆ ದೇವಭವನ ಯಾವ ಪಂಗಡದ್ದೇ ಆದರೂ ಅದನ್ನು ನಾಶಪಡಿಸಲು ಅವರಿಗೆ ಸಾಧ್ಯವಾಗದು. ಕಾರಣವೇನೆಂದರೆ, ಆ ಮಸೀದಿ ಅಲ್ಲಾಹನ ಹೆಸರಿನಲ್ಲಿ ಸ್ಥಾಪಿಸಲ್ಪಟ್ಟಿದೆ. ಅಲ್ಲಾಹನೊಡನಿರುವ ಪ್ರೀತಿಯ ಹೆಸರಿನಲ್ಲಿ ಆ ಮಸೀದಿಯನ್ನು ಎಂದಿಗೂ ನಾಶಗೊಳಿಸಲು ಅವರು ಸಿದ್ಧರಾಗಲಿಕ್ಕಿಲ್ಲ. ಆದರೆ ನಾನು ಕೆಲವು ನಿಜಾಂಶಗಳೆಡೆಗೆ ಬೆಳಕು ಚೆಲ್ಲುತ್ತೇನೆ - ಆಕ್ಷೇಪವೆಂಬ ರೀತಿಯಲ್ಲಲ್ಲ. ನಿಮಗೆ ಮನಗಾಣಿಸಿಕೊಡಲಿಕ್ಕಾಗಿ ಮಾತ್ರ ಹೇಳುತ್ತೇನೆ. ನಿನ್ನೆಯ ತನಕ ನೀವು ಮಾಡಿದ ಕಠೋರ ಕೃತ್ಯಗಳಿಗೆ ಇಂದು ಅಲ್ಲಾಹನ ವಿಧಿ ಅದರ ಪ್ರತಿಚ್ಛಾಯೆಯನ್ನು ತೋರಿಸಿ ಕೊಟ್ಟಿದೆ. ನಿಮ್ಮ ಈ ಕೃತ್ಯವೇನೂ ಅಲ್ಲಾಹನಿಗೆ ಇಷ್ಟವಾಗಿರಲಿಲ್ಲ. ಅವನು ಅದಕ್ಕೆ ತನ್ನ ಶಿಕ್ಷೆ ನೀಡದೆ ಬಿಟ್ಟು ಬಿಡಲಾರ. ಆದ್ದರಿಂದ ನೀವು ಅಲ್ಲಾಹನಿಗೆ ಭಯಪಡಿರಿ. ಪಾಕಿಸ್ಥಾನದಲ್ಲಿ ಹತ್ತು ಅಹ್ಮದಿಯಾ ಮಸೀದಿಗಳನ್ನು ನೀವು ನೆಲಸಮ ಮಾಡಿದಿರಿ. ಕೆಲವು ಸ್ಥಳಗಳಲ್ಲಿ ಒಡೆದ ಮಸೀದಿಗಳ ಅವಶಿಷ್ಟಗಳನ್ನೇ ಜನರು ತೆಗೆದುಕೊಂಡು ಹೋದರು. ಮರ್ದಾನಿನ ಮಸೀದಿ ಒಡೆದದ್ದು ಒಂದು ಹಾಡುಹಗಲಿನಲ್ಲಾಗಿತ್ತು. ಗಟ್ಟಿ ಮುಟ್ಟಾದ ಕಾಂಕ್ರಿಟ್‌ನಿಂದ ನಿರ್ಮಿತವಾದ ಮಸೀದಿಯನ್ನು ಒಡೆದು ನೆಲಸಮ ಮಾಡಲು ತುಂಬಾ ಸಮಯ ತಗಲಿರ ಬೇಕಲ್ಲವೇ? ಆ ಮಸೀದಿ ಕೆಡವಿ ಅದರ ಇಟ್ಟಿಗೆಗಳನ್ನೂ ಕಲ್ಲುಗಳನ್ನೂ ಜನರು ತೆಗೆದುಕೊಂಡು ಹೋದರು. ಬಂಗ್ಲಾದೇಶದಲ್ಲಿ ರಾಜ್‌ಶಾಹಿಯಲ್ಲಿರುವ ಅಹ್ಮದಿಯಾ ಮಸೀದಿಯನ್ನೂ ಹೀಗೆಯೇ ಕೆಡವಿ ನಿರ್ನಾಮ ಮಾಡಿ ಅದರ ಕಲ್ಲುಗಳನ್ನೂ ಇಟ್ಟಿಗೆಗಳನ್ನೂ ಕೊಂಡೊಯ್ದು ತಮ್ಮ ಮನೆಗಳನ್ನು ಅಲಂಕರಿಸಿದರು.

ಇವೆಲ್ಲ ಸ್ವಲ್ಪವೇ ಸಮಯದಲ್ಲಿ ನಡೆಯುವ ಕೆಲಸವಲ್ಲ. ಆ ಸಂದರ್ಭದಲ್ಲಿ ಪಾಕಿಸ್ಥಾನದಲ್ಲಿ ಸರಕಾರವೆಂಬುದೊಂದು ಇರಲಿಲ್ಲವೇ? ಮಸೀದಿಗಳನ್ನು ಕೆಡವಲು ಜನಸಾಮಾನ್ಯರಿಗೆ ಪ್ರಲೋಭನೆ ನೀಡುತ್ತಿದ್ದ ಉಲಮಾಗಳಿಗೆ, ಇವೆಲ್ಲ ಅಲ್ಲಾಹನ ಮನೆಗಳೆಂದೂ ದೇವಾರಾಧನೆಗೆ ಮಾತ್ರವೇ ಜನರು ಇಲ್ಲಿಗೆ ಬರುತ್ತಾರೆಂದೂ ತಿಳಿದಿಲ್ಲವೇ? ಇವೆಲ್ಲ ಮಸೀದಿಗಳೆಂದು ಅವರಿಗೆ ಗೊತ್ತಿಲ್ಲವೇ? ಖಂಡಿತವಾಗಿಯೂ ಗೊತ್ತಿದೆ. ಅಹ್ಮದಿಯರಿಂದ ಬಲತ್ಕಾರವಾಗಿ ಕಸಿದುಕೊಂಡ ಮಸೀದಿಗಳಲ್ಲಿ ಈಗ ಅಹ್ಮದಿಯೇತರ ಪಂಡಿತರುಗಳು ನಮಾಝ್ ಮಾಡುವುದಿಲ್ಲವೇ? ಇತರ ಮುಸ್ಲಿಮರು ಸಹ ಅವುಗಳನ್ನು ಮಸೀದಿಗಳೆಂದು ತಿಳಿದುಕೊಂಡಲ್ಲವೇ ನಮಾಝ್ ಮಾಡುವುದು? ಅವು ಮಸೀದಿಗಳಲ್ಲ, ದೇವಾಲಯಗಳು ಆಗಿದ್ದರೆ ಅಲ್ಲಿ ಇವರು ನಮಾಝ್ ಮಾಡುತ್ತಿದ್ದರೇ? ಮುಂಚೆ ಇದ್ದ ಅದೇ ಖಿಬ್ಲ, ಅದೇ ಗುಮ್ಮಟವಲ್ಲವೇ ಈಗಲೂ ಆ ಮಸೀದಿಗಳಲ್ಲಿರುವುದು ? ಅಹ್ಮದಿಯರು ಅಧಾನ್ ಕರೆ ನೀಡುತ್ತಿದ್ದ ಅದೇ ಮಿನಾರದಿಂದಲ್ಲವೇ ಇವರು ಸಹ ಅಧಾನ್ ಕರೆ ನೀಡುವುದು? ಹಾಗೆ ಅಹ್ಮದಿಯಾ ಮಸೀದಿಗಳು ನಿಜವಾಗಿಯೂ ಮಸೀದಿಗಳೇ ಆಗಿವೆಯೆಂಬ ವಿಶ್ವಾಸ ವನ್ನಲ್ಲವೇ ಇವರ ವರ್ತನೆಗಳು ತೋರಿಸಿಕೊಡುವುದು? ಹೌದು, ಅಹ್ಮದಿಯರ ಮಸೀದಿಗಳು ಸಹ ಮಸೀದಿಗಳೇ ಆಗಿವೆ; ಅಲ್ಲಿ ನಿರ್ವಹಿಸಲ್ಪಡುವ ನಮಾಝ್‌ಗಳು ಸ್ವೀಕಾರಾರ್ಹವಾಗಿವೆ ಎಂಬ ವಿಶ್ವಾಸವನ್ನಲ್ಲವೇ ಇದು ಪ್ರಕಟಿಸುವುದು? ಆದರೆ ಕೊಳ್ಳೆಹೊಡೆಯಲಾದ, ಬಲಾತ್ಕಾರದಿಂದ ಸ್ವಾಧೀನಪಡಿಸಲಾದ ಮಸೀದಿಗಳಲ್ಲಿ ನಮಾಝ್ ಮಾಡುವುದು ಎಷ್ಟುಮಾತ್ರ ಸಮ್ಮತನೀಯವೂ ಸ್ವೀಕಾರಾರ್ಹವೂ ಆಗಿದೆ ಯೆಂದು ಇವರ ಪೈಕಿ ಯಾರೂ ಚಿಂತಿಸುವುದಿಲ್ಲ.

ಸಂಕ್ಷಿಪ್ತವಾಗಿ, ನಾನು ನಿಮಗೆ ಮನಗಾಣಿಸಿಕೊಡಲು ಬಯಸುವುದೇನೆಂದರೆ, ನನಗೆ ತಿಳಿದ ಮಟ್ಟಿಗೆ ನಮ್ಮ 10 ಮಸೀದಿಗಳನ್ನು ಇವರು ಕೆಡವಿ ನೆಲಸಮ ಮಾಡಿದ್ದು ಕ್ಷಣ ಮಾತ್ರದಲ್ಲಲ್ಲ. ಈ ನೀಚ ಕೃತ್ಯವನ್ನು ಮಾಡಿ ಮುಗಿಸಲು 24 ಗಂಟೆ ಅಥವಾ ಅದಕ್ಕಿಂತ ಹೆಚ್ಚು ಸಮಯ ತಗಲಿರಬೇಕು. ಅಲ್ಲಿ ಆಗ ಒಂದು ಸರಕಾರವನ್ನಾಗಲಿ ಕಾಣಲು ಸಾಧ್ಯವಾಗಲಿಲ್ಲ. ಅಷ್ಟೇ ಅಲ್ಲ, ಅಲ್ಲಿದ್ದ ಪೊಲೀಸ್ ಅಧಿಕಾರಿಗಳು ಕೊಳ್ಳೆ ಹೊಡೆಯುವವರಿಗೆ ನೆರವು ನೀಡುತ್ತಿರುವುದಾಗಿ ನಮಗೆ ಕಾಣಲು ಸಾಧ್ಯವಾಗಿದೆ.

ಮರ್ದಾನಿನಲ್ಲಿರುವ ಮಸೀದಿ ಧ್ವಂಸ ಮಾಡುತ್ತಿರುವ ಜನರು ಕೊಳ್ಳೆ ಹೊಡೆದ ಸಾಮಗ್ರಿಗಳನ್ನು ತೆಗೆದುಕೊಂಡು ಹೋಗಿದ್ದಾಗ ಅಲ್ಲಿದ್ದ ಪೊಲೀಸರು ಆ ಕೊಳ್ಳೆಗಾರರಿಗೆ, ಅವರನ್ನು ಯಾರೂ ಆಕ್ರಮಿಸದಿರಲಿಕ್ಕೋಸ್ಕರ ಪರಿಪೂರ್ಣ ಸಂರಕ್ಷಣೆ ನೀಡಿದ್ದರು. ಇನ್ನೊಂದು ಕಡೆಯಲ್ಲಿ, ಮಸೀದಿಯಲ್ಲಿ ನಮಾಝ್ ಮಾಡಲು ಬಂದಿದ್ದವರನ್ನು ಅವರು ಬಂಧಿಸಿ ಕೊಂಡುಹೋದರು. ಸಣ್ಣ ಮಕ್ಕಳನ್ನೂ ವೃದ್ಧರನ್ನೂ ಅವರು ಗುಂಪು ಗುಂಪಾಗಿ ಟ್ರಕ್ಕಿನಲ್ಲಿ ಹೇರಿ ಸೆರೆಮನೆಗೆ ಕೊಂಡೊಯ್ದರು. ಆ ಮಸೀದಿಯನ್ನು ಒಡೆದು ನೆಲಸಮ ಮಾಡಿ ಅದರಲ್ಲಿದ್ದ ಸಾಮಗ್ರಿಗಳನ್ನು ಕೊಳ್ಳೆ ಹೊಡೆದು ಕೊಂಡೊಯ್ಯುವ ವರೆಗೆ ಅವರನ್ನು ಸೆರೆಮನೆಯಲ್ಲೇ ಬಂಧಿಸಿಡಲಾಗಿತ್ತು.

ಈಗ ಅಯೋಧ್ಯಾ ಘಟನೆ ಸಂಭವಿಸಿದ ಬಳಿಕ ಪಾಕಿಸ್ತಾನದಲ್ಲಿರುವ ಪತ್ರಿಕೆಗಳು, "ಅಯೋಧ್ಯಾ ಮಸೀದಿ ಧ್ವಂಸಮಾಡಲ್ಪಟ್ಟದ್ದು ಒಂದೋ ಎರಡೋ ತಾಸುಗಳೊಳಗೆ ಅಲ್ಲ; ಒಂದು ದಿನವಿಡೀ ತಗಲಿರಬಹುದು. ಆಗ ಭಾರತ ಸರಕಾರ ಏನು ಮಾಡುತ್ತಿತ್ತು. ಅಲ್ಲಿ ಸರಕಾರವೆಂಬುದೊಂದು ಇರಲಿಲ್ಲವೇ?" ಎಂದು ಪ್ರಶ್ನಿಸುತ್ತದೆ. ಕೆಲವು ಪತ್ರಿಕೆಗಳು, ಸರಕಾರ ಇತ್ತು; ಆದರೆ ಸರಕಾರ, ಪೊಲೀಸ್ ಮತ್ತು ಸೈನ್ಯ ಕೊಳ್ಳೆಗಾರರಿಗೆ ನೆರವು ನೀಡುತ್ತಿತ್ತೆಂದೂ ಇದು ಆರಾಧನೆ ಮಾಡುವ ಪ್ರತಿಯೊಬ್ಬನಿಗೆ ಪಂಥಾಹ್ವಾನವಾಗಿದೆಯೆಂದೂ ಅಲ್ಲಾಹನ ಏಕತ್ವವನ್ನು ಇವರು ಕೊಳ್ಳೆ ಹೊಡೆದಿರುವರು; ಆದ್ದರಿಂದ ಮುಸ್ಲಿಮರೇ ನೀವು ಎಚ್ಚೆತ್ತು ಇದರ ಸೇಡು ತೀರಿಸಬೇಕೆಂದೂ ಆಕ್ರೋಶಿಸುತ್ತಿದ್ದವು.

ನನಗೆ ಅವರೊಡನೆ ಕೇಳಲಿಕ್ಕಿರುವುದೇನೆಂದರೆ, ಈ ದೇವಪ್ರೀತಿ ಮತ್ತು ದೇವೇಕತ್ವದೊಡನಿರುವ ಸಂಬಂಧ ನಿನ್ನೆ ಎಲ್ಲಿತ್ತು? ಆಗ ನಿಮ್ಮ ಭಾವನೆ, ವಿಚಾರಗಳು, ಮರಗಟ್ಟಿ ಹೋಗಿದ್ದವೇ? ನಿನ್ನೆ ಅಹ್ಮದಿಯಾ ಮಸೀದಿಗಳನ್ನು ನೀವು ಧ್ವಂಸ ಮಾಡುತ್ತಿದ್ದಾಗ ಅಥವಾ ಅಂತಹ ನೀಚಕೃತ್ಯಗಳನ್ನು ನೀವು ಬೆಂಬಲಿಸುತ್ತಿರುವಾಗ, ನಿಮಗೆ ಸಹ ಹೀಗೆ ಸಂಭವಿಸಲಿಕ್ಕಿದೆ ಎಂಬ ದೈವಿಕ ವಿಧಿಯನ್ನು ನೀವು ಅವಗಣಿಸಿದಿರಿ. ನೀವು ನಿನ್ನೆ ಮಾಡಿದ ನಿಕೃಷ್ಟ ಕೃತ್ಯದ ಪರಿಣಾಮವಾಗಿ ಅಹ್ಮದಿಯರು ನೋವು ಅನುಭವಿಸುತ್ತಿದ್ದಾಗ, ಅದರ ಪ್ರತಿಕಾರವಾಗಿ ನಿಮಗೆ ಈ ಅವಸ್ಥೆ ಒದಗಿಸುವುದರಿಂದ ಅಲ್ಲಾಹನ ವಿಧಿ ನಿಮ್ಮನ್ನು ಬೆಂಬಲಿಸುವುದೆಂದು ನೀವು ಭಾವಿಸುತ್ತೀರಾ ? ಇದು ಅಲ್ಲಾಹನ ಅವ್ಯಾಹತವಾದ ವಿಧಿಯಾಗಿದೆ. ನೀವು ಮಾಡುವ ಇಂತಹ ನೀಚಕೃತ್ಯಗಳ ಕಾರಣವಾಗಿ ದೈವಿಕ ವಿಧಿ ನಿಮ್ಮನ್ನು ಹಿಡಿಯುವುದೆಂದು ಹಝ್ರತ್ ಮಹ್‌ದಿ ಮಸೀಹ್ (ಅ) ಎಷ್ಟು ಸಲ ನಿಮಗೆ ಮುನ್ನೆಚ್ಚರಿಕೆಯಿತ್ತರು?

"ಖರಝ್ ಹೈ ವಾಪಸ್ ಮಿಲೇಗಾ ತುಮ್ಕೋ
ಯಹ್ ಸಾರಾ ಉಧಾರ್" -

"ಇದು ಒಂದು ಸಾಲವಾಗಿದೆ. ಎಲ್ಲ ಸಾಲಗಳೂ ನಿಮಗೆ ಮರಳಿ ಲಭಿಸುವುವು".

ನೀವು ನಿಮ್ಮ ಮುಂದಿನ ವಿಧಿಯನ್ನು ಹೆಣೆಯುತ್ತಿದ್ದೀರಿ. ಇಂದಿನ ವಿಶ್ವಾಸಘಾತಕರು ಈ ಉಲಮಾಗಳಾಗಿದ್ದಾರೆ. ಮುಸ್ಲಿಮರಿಗೆ ನಾಳೆ ಉಂಟಾಗುವ ನಾಶದ ಹೊಣೆಗಾರರೂ ಈ ಉಲಮಾಗಳೇ ಆಗಿದ್ದಾರೆ. ನಿನ್ನೆ ಪಂಡಿತರು ವಿಶ್ವಾಸಘಾತ ಮಾಡಿದುದರ ನಾಶ ಫಲವನ್ನು ಇಂದಿನ ಮುಸ್ಲಿಂ ಸಮುದಾಯ ಅನುಭವಿಸುತ್ತದೆ. ಆದ್ದರಿಂದ ಪ್ರಥಮವಾಗಿ ಈ ವಿಶ್ವಾಸಘಾತಕರನ್ನು ಹಿಡಿಯಿರಿ. ಅವರೊಡನೆ ಲೆಕ್ಕ ಕೇಳಿರಿ. ಈ ವಿಶ್ವಾಸಘಾತರೊಡನೆ ನೀವು ಲೆಕ್ಕ ತೀರಿಸಿದರೆ ಅಲ್ಲಾಹನ ವಿಧಿ ನಿಮ್ಮನ್ನು ಬೆಂಬಲಿಸುವುದು. ನಿಮ್ಮ ಶತ್ರುಗಳೊಡನೆ ಅವನು ಲೆಕ್ಕ ತೀರಿಸುವನು.

ಇದು ಒಂದೆರಡು ಸಲ ಘಟಿಸಿದ ಸಂಭವಗಳಲ್ಲ. ಪಾಕಿಸ್ತಾನದಲ್ಲಿ ಮಸೀದಿಗಳು ಪದೇ ಪದೇ ಅಪಮಾನಕ್ಕೀಡಾಗಿವೆ. ಅವು ಆಕ್ರಮಣಕ್ಕೆ ಗುರಿಯಾಗಿವೆ. ನಮಾಝ್ ಮಾಡುವವರನ್ನು ಹಿಡಿದು ಮಾರ್ಗದಲ್ಲಿ ಎಳೆದುಕೊಂಡೊಯ್ಯಲಾಯಿತು. ಅವರನ್ನು ಥಳಿಸ ಲಾಯಿತು; ಗುದ್ದಲಾಯಿತು; ಒದೆಯಲಾಯಿತು; ಈ ಶಿಕ್ಷೆಗಳನ್ನೆಲ್ಲ ಅವರು ಅನುಭವಿಸುತ್ತಿದ್ದುದು ತಮ್ಮ ಮಸೀದಿಗಳಲ್ಲಿ ಏಕನಾದ ಅಲ್ಲಾಹನಿಗೆ ನಮಾಝ್ ಮಾಡಿದುದಕ್ಕೆ ಮಾತ್ರವಾಗಿತ್ತು.

ಆದರೆ ಇದೇ ಕೃತ್ಯಗಳು ಈ ಕಡೆ ಪುನರಾವರ್ತಿಸಲ್ಪಡುವಾಗ ನಿಮ್ಮ ಧಾರ್ಮಿಕ ಶ್ರದ್ಧೆ ಜಾಗೃತಗೊಳ್ಳುತ್ತದೆ. ಲೋಕದಲ್ಲಿಡೀ ಕೋಲಾಹಲ ವೇಳುತ್ತದೆ. ನಮ್ಮ ಮಸೀದಿಗೆ ಉಂಟಾದ ಅಪಮಾನವನ್ನು ನಮಗೆಂದಿಗೂ ಸಹಿಸಲು ಸಾಧ್ಯವಿಲ್ಲವೆಂದು ಪ್ರಲಾಪಿಸುತ್ತಾರೆ. ಇವೆಲ್ಲ ನೀವೇ ನಿಮ್ಮ ಸ್ವಂತ ಕೈಗಳಿಂದ ಮಾಡಿದ್ದೇ ಅಲ್ಲವೇ? ಆಗ ಇದರ ಅರ್ಥವೇನೆಂದರೆ,

ಅಲ್ಲಾಹನ ಆರಾಧನಾಲಯಗಳನ್ನು ನಾಶಪಡಿಸಲಿಕ್ಕೂ ಅಪಮಾನಿಸಲಿಕ್ಕೂ ಹಕ್ಕು ಮುಸ್ಲಿಮರಿಗೆ ಮಾತ್ರವಿದೆ. ಅವರು, ಯಾವಾಗಬೇಕಾದರೂ ಎಲ್ಲಿ ಬೇಕಾದರೂ ಮಸೀದಿಗಳನ್ನು ಆಕ್ರಮಿಸಬಹುದು, ನಾಶಗೊಳಿಸಬಹುದು, ಪವಿತ್ರ ಖುರ್‌ಆನನ್ನು ಅಗ್ನಿಗಾಹುತಿ ಮಾಡಬಹುದು. ಅದನ್ನು ಹರಿದುಹಾಕಿ ಚರಂಡಿಗೆಸೆದು ಅಪಮಾನಿಸಬಹುದು. ಇದನ್ನು ತಡೆದು ನಿಲ್ಲಿಸಲು ಯಾವುದೇ ಇಸ್ಲಾಮಿಕ ರಾಷ್ಟ್ರಕ್ಕೂ ಹಕ್ಕಿಲ್ಲ. ಆದರೆ ಅನ್ಯಮತಸ್ಥರಿಗೆ ಇದಕ್ಕೇನೂ ಸ್ವಾತಂತ್ರ್ಯವಿಲ್ಲವೆಂದೋ ನೀವು ಹೇಳುವುದು? ಅಂದರೆ ಅಮುಸ್ಲಿಮರು ಮಸೀದಿ ಒಡೆದರೆ ಅದಕ್ಕೆ ವಿರುದ್ಧವಾಗಿ ಕೂಡಲೇ ಕ್ರಮ ಕೈಗೊಳ್ಳಬೇಕು. ಇದೇ ಕೃತ್ಯವನ್ನು ನೀವು ಮಾಡಿದರೆ ಸರಕಾರ ನಿಷ್ಕ್ರಿಯವಾಗಿ ನೋಡಿ ನಿಲ್ಲಬೇಕು. ಕಾರಣವೇನೆಂದರೆ, ಮಸೀದಿಗಳು ನಿಮ್ಮ ಸ್ವಂತದ್ದು. ನಿಮಗೆ ಇಷ್ಟ ಬಂದ ಹಾಗೆ ಮಾಡುವ ಹಕ್ಕು ನಿಮಗಿದೆ ಎಂದೋ ಇದರೆಲ್ಲ ಅರ್ಥ ?

ಅಂದರೆ, "ನನ್ನ ಪಾವಿತ್ರ್ಯವನ್ನು ನೀವು ನಾಶಪಡಿಸಿರಿ. ಈ ಮಸೀದಿ ನಿಮಗೆ ಮಾತ್ರವಿರುವುದಾಗಿದೆ. ನಿಮಗಿಷ್ಟ ಬಂದ ಹಾಗೆ ಮಾಡಬಹುದು. ಆದರೆ ಅನ್ಯಧರ್ಮೀಯರು ಏನಾದರೂ ಮಾಡಿದರೆ ತಕ್ಷಣ ನೀವು ಅಭಿಮಾನವನ್ನೂ ರೋಷವನ್ನೂ ತೋರಿಸಬೇಕು" ಎಂದು ಅಲ್ಲಾಹನು ಇವರೊಡನೆ ಹೇಳಿದ್ದಾನೆಂದು ಅರ್ಥವೇ? ಇವು ಇಸ್ಲಾಮಿಕ ಅಧ್ಯಾಪನಗಳೇ? ಇದು ದೇವಪ್ರೀತಿಯಲ್ಲಿ ಅಧಿಷ್ಠಿತವಾದ ತತ್ವವೇ? ಹಾಗೆ ಎಂದಿಗೂ ಆಗಲು ಸಾಧ್ಯವಿಲ್ಲ. ಇದು ಸಂಪೂರ್ಣ ಅಜ್ಞತೆಯಾಗಿದೆ; ತಿಳಿಗೇಡಿತನವಾಗಿದೆ.

ಬಂಗ್ಲಾದೇಶದಲ್ಲಿ ಅಹ್ಮದಿಯಾ ಮಸೀದಿ ಧ್ವಂಸಗೊಳಿಸಲ್ಪಟ್ಟಾಗ ಅದನ್ನು ತಡೆಯಲಿಕ್ಕೆ ಯಾರೂ ಮುಂದೆ ಬರಲಿಲ್ಲ. ಅಷ್ಟೇ ಅಲ್ಲ, ಅದಕ್ಕೆ ವಿರುದ್ಧವಾಗಿ ಯಾರೂ ಒಂದು ಕಿರುಬೆರಳನ್ನಾದರೂ ಎತ್ತಲಿಲ್ಲ. ಪಾಕಿಸ್ತಾನದಲ್ಲಿ ಇಷ್ಟೆಲ್ಲ ಅಹ್ಮದಿಯಾ ಮಸೀದಿಗಳನ್ನು ಒಡೆದು ನೆಲಸಮ ಮಾಡಲಿಲ್ಲವೇ? ಅದರ ವಿರುದ್ಧ ಒಂದು ಚಿಕ್ಕ ಸ್ವರವನ್ನಾದರೂ ಇವರು ಹೊರಡಿಸಿದರೇ? ಆದರೆ ಬಂಗ್ಲಾದೇಶದಲ್ಲಿರುವ ಪತ್ರಕರ್ತರೂ ಬುದ್ಧಿಜೀವಿಗಳೂ ರಾಜಕೀಯ ಧುರೀಣರೂ ಇದನ್ನು ಪ್ರತಿಭಟಿಸಿದರೂ ಮುಂದೆ ಬಂದು ಈ ಹೀನಕೃತ್ಯವನ್ನು ತಡೆದು ನಿಲ್ಲಿಸಲು ಯಾರಿಗೂ ಧೈರ್ಯವಿರಲಿಲ್ಲ. ಇದು ಸತ್ಯವಿಶ್ವಾಸದ ಅತ್ಯಂತ ಕೀಳ್ಮಟ್ಟದ ಒಂದು ಪ್ರಕಟನೆಯಾಗಿದೆ. ಸತ್ಯವಿಶ್ವಾಸದ ಅತ್ಯುನ್ನತ ಪ್ರಕಟನೆಯಾಗಿ ದುಷ್ಕೃತ್ಯ ಮಾಡುವವರನ್ನು ಕೈಯಿಂದ ತಡೆದು ನಿಲ್ಲಿಸಬೇಕೆಂದೂ ಅದಕ್ಕೆ ಶಕ್ತಿಯಿಲ್ಲದಿದ್ದರೆ ನಾಲಗೆ ಮೂಲಕ ತಡೆದು ನಿಲ್ಲಿಸಬೇಕೆಂದೂ ಅದಕ್ಕೆ ಶಕ್ತಿಯಿಲ್ಲದಿದ್ದರೆ ತಮ್ಮ ಅಸಂತೋಷವನ್ನಾದರೂ ತೋರ್ಪಡಿಸಬೇಕೆಂದೂ ಹಝ್ರತ್ ಮುಹಮ್ಮದ್ ಪೈಗಂಬರ್ (ಸ) ನುಡಿದಿದ್ದಾರೆ.

ಪಾಕಿಸ್ತಾನದಲ್ಲಿ ಎಷ್ಟು ಮಂದಿ ಅಲ್ಲಿ ನಡೆದ ಈ ನೀಚ ಕೃತ್ಯಗಳಿಗೆದುರಾಗಿ ಸ್ವರವೆತ್ತಿದ್ದಾರೆ? ಈಗ ಕೆಲವು ಕಡೆಗಳಿಂದ ಸ್ವರವೆದ್ದರೂ ಇದು ವರೆಗೆ ಅವರು ಪರಿಪೂರ್ಣವಾಗಿ ಮೌನಾವಲಂಬಿಗಳಾಗಿದ್ದರಲ್ಲವೇ? ಕಹಿಯಾದ ಕೆಲವು ನಿಜಾಂಶಗಳನ್ನು ನಾನು ನಿಮ್ಮ ಮುಂದಿಟ್ಟಿದ್ದೇನೆ. ವಾಸ್ತವದಲ್ಲಿ ಇಂದಿನ ಮುಸ್ಲಿಮರಿಗೆ ಎದುರಾಗಿರುವ ದೌರ್ಭಾಗ್ಯಕರವಾದ ಅವಸ್ಥೆಗಿರುವ ಪರಿಹಾರವೇನೆಂದರೆ, ಅವರು ತಮ್ಮ ಮುಖಂಡರ ತಪ್ಪನ್ನು ಸರಿಪಡಿಸಬೇಕಾಗಿದೆ. ನಿಮ್ಮಲ್ಲಿ ರೋಗಾಣುಗಳು ತುಂಬಿಕೊಂಡಿವೆ. ಅದನ್ನು ನಾಶಪಡಿಸಲು ಪ್ರಯತ್ನಿಸಿರಿ. ಅದರಲ್ಲಿ ನಿಮಗೆ ವಿಜಯ ಸಿಗುವುದಾದರೆ ದೇವಾನುಗ್ರಹ ಖಂಡಿತವಾಗಿಯೂ ನಿಮಗೆ ಬಂದೊದಗುವುದು.

ಭಾರತದಲ್ಲಿ ಮಸೀದಿಗಳು ಧ್ವಂಸಗೊಳಿಸಲ್ಪಟ್ಟ ಹೇತುವಾಗಿ ನಿಮ್ಮ ಹೃದಯಗಳಲ್ಲಿ ತಟ್ಟಿದ ಆಘಾತಕ್ಕಿಂತ ನಾವು ಅನುಭವಿಸುವ ನೋವು ಎಷ್ಟೋ ಹೆಚ್ಚು. ಕಾರಣವೇನೆಂದರೆ ನಮಗೆ ಏಕದೇವಾರಾಧನೆಯೊಡನಿರುವ ಪ್ರೀತಿ ಮತ್ತು ಆರಾಧನಾಲಯಗಳೊಡನಿರುವ ಸಂಬಂಧ ನಿಮಗಿಂತ ತುಂಬಾ ಅಧಿಕ. ಜಗತ್ತಿನಲ್ಲಿ ಎಲ್ಲಾದರೂ ಯಾವುದಾದರೂ ಆರಾಧನಾಲಯ ಒಡೆಯಲ್ಪಟ್ಟರೆ ಅದರಿಂದ ಬೀಳುವ ಪ್ರತಿಯೊಂದು ಇಟ್ಟಿಗೆ ಮತ್ತು ಕಲ್ಲು ಬಂದು ಬೀಳುವುದು ನಮ್ಮ ಹೃದಯದ ಮೇಲೆ. ಅವು ಹೃದಯವನ್ನು ಸೀಳುತ್ತವೆ. ಆದರೆ ಮಸೀದಿಗಳನ್ನು ಹೇಗೆ ಒಡೆಯಬೇಕೆಂಬ ಅನುಭವ ನಿಮಗಿದೆ. ಆ ಸ್ಥಿತಿಯಲ್ಲಿ ನಿಮಗೆ ಹೇಗೆ ನಮಗಿರುವ ನೋವುಂಟಾದೀತು? ಇಷ್ಟೆಲ್ಲ ಹೇಳಿದ್ದು ನೋವಿನ ಕಾಠಿಣ್ಯದಿಂದಾಗಿದೆ. ನಿಮ್ಮಲ್ಲಿ ಸಮೂಲವಾದೊಂದು ಪರಿವರ್ತನೆ ಮಾಡದಿದ್ದರೆ, ನಿಮ್ಮ ಭಾವನೆಗಳನ್ನೂ ಯೋಚನೆಗಳನ್ನೂ ಅಲ್ಲಾಹನಿಗೋಸ್ಕರ ಮಾತ್ರ ಮಾರ್ಪಡಿಸದಿದ್ದರೆ, ನಿಮ್ಮ ಖಿಬ್ಲವನ್ನು ನೀವು ಸರಿಪಡಿಸದಿದ್ದರೆ, ನೀವು ಹೀಗೆಯೇ ಇತರರ

ದೌರ್ಜನ್ಯಕ್ಕೊಳಗಾಗಿ ಅಲೆದು ತಿರುಗಾಡುವ ದೌರ್ಭಾಗ್ಯ ಬಂದೊದಗುವುದು. ಆದುದರಿಂದ ದೇವಭಕ್ತಿ-ತಖ್ವಾ-ಉಳ್ಳವರಾಗಿರಿ. ತಖ್ವಾದಲ್ಲಿ ಆಧಿಷ್ಟಿತವಾದ ಸರಕಾರವನ್ನು ಸ್ಥಾಪಿಸಿರಿ.

ಇಂದು ಪಾಕಿಸ್ಥಾನದಲ್ಲಿ ಎಲ್ಲ ಪತ್ರಿಕೆಗಳೂ ಭಾರತವನ್ನು ನೋಡಿ, ನಿಮ್ಮ ಸೆಕ್ಯುಲರ್ ಸರಕಾರವೂ ಸೆಕ್ಯುಲರ್ ತತ್ವಗಳೂ ಎಲ್ಲಿ ಹೋದವೆಂದೂ ಅಯೋಧ್ಯಾ ಮಸೀದಿಯ ಮಣ್ಣಿನ ರಾಶಿಯಡಿಯಲ್ಲಿ ನಿಮ್ಮ ಧರ್ಮನಿರಪೇಕ್ಷತೆ ಹುಗಿಯಲ್ಪಟ್ಟಿತ್ತಲ್ಲವೇ ಎಂದು ಆಕ್ಷೇಪಿಸುತ್ತವೆ. ಆದರೆ ನಿನ್ನೆ ಅಹ್ಮದಿಯಾ ಮಸೀದಿಗಳನ್ನು ಒಡೆದು ನೆಲಸಮ ಮಾಡಿದಾಗ ಅದರ ಮಣ್ಣಿನ ರಾಶಿಯಡಿಯಲ್ಲಿ ಏನನ್ನು ಹುಗಿಯಲಾಯಿತೆಂದು ಯಾವಾಗಲಾದರೂ ನೀವು ಚಿಂತಿಸಿದ್ದೀರಾ ? ನೀವು ಹೇಳುವ ಕಲ್ಪನೆಯ ಇಸ್ಲಾಂ ಆ ಮಣ್ಣಿನ ರಾಶಿಯಡಿಯಲ್ಲಿ ಹುಗಿಯಲ್ಪಟ್ಟಿದೆ. ನಿಮ್ಮ ಹಕ್ಕುವಾದಗಳು ಸಹ ಅಲ್ಲಿ ಹುಗಿಯಲ್ಪಟ್ಟಿವೆ. ಆದ್ದರಿಂದ ರೋಗ ಏನೆಂದು ಮೊದಲು ತಿಳಿದುಕೊಳ್ಳಿರಿ. ರೋಗವನ್ನು ಗುರುತಿಸದೆ ಇರುವ ತನಕ ಅದಕ್ಕೆ ಸರಿಯಾದ ಚಿಕಿತ್ಸೆ ಮಾಡಲು ಸಾಧ್ಯವಿಲ್ಲ. ಈಗ ಗೋಚರವಾಗುವ ರೋಗಕ್ಕಿರುವ ಚಿಕಿತ್ಸೆಯೇನೆಂದರೆ ನಿಜವಾದ ತಖ್ವಾ(ದೇವಭಕ್ತಿ) ಉಳ್ಳವರಾಗುವುದು ಮತ್ತು ದೇವ ಪ್ರೀತಿಯನ್ನು ಪ್ರಕಟಿಸುವುದು. ದೇವಾರಾಧನೆ ಮಾಡುವವರನ್ನು, ಅದು ಹೇಗೆ ಮಾಡುವವರಾದರೂ ಸರಿ, ಅವರ ದಾರಿಯಲ್ಲಿ ನೀವು ತಡೆಯೊಡ್ಡಬಾರದು. ಹಾಗೆ ನೀವು ತಡೆಯೊಡ್ಡಿದರೆ ಅಲ್ಲಾಹನ ವಿಧಿ ನಿಮ್ಮ ಪ್ರತಿಯೊಂದು ಮುನ್ನಡೆಯ ದಾರಿಯಲ್ಲೂ ತಡೆಯೊಡ್ಡುವುದು. ಯಾವ ರಂಗದಲ್ಲೂ ನಿಮಗೆ ಮುನ್ನೇರಲಿಕ್ಕೆ ಸಾಧ್ಯವಿಲ್ಲ. ಅಹ್ಮದಿಯಾ ಜಮಾಅತ್ ಎರಡು ವಿಧದ ದುಃಖಗಳನ್ನು ಅನುಭವಿಸುತ್ತಿದೆಯೆಂದು ನನಗೆ ಲೋಕದ ನಾನಾ ಭಾಗಗಳಿಂದ ಬರುತ್ತಿರುವ ಪತ್ರಗಳಿಂದ ಮನವರಿಕೆಯಾಗಿದೆ. ಒಂದು, ನಾವು ದೌರ್ಜನ್ಯಗಳಿಗೆ ಗುರಿಯಾಗುವಾಗ ಉಂಟಾಗುವ ದುಃಖ. ಮತ್ತೊಂದು, ನಮ್ಮನ್ನು ದೌರ್ಜನ್ಯಕ್ಕೊಳಪಡಿಸಿ ಕಷ್ಟಕ್ಕೆ ಗುರಿಪಡಿಸುವವರು ದೌರ್ಜನ್ಯಕ್ಕೆ ಗುರಿಯಾಗುವಾಗ ಉಂಟಾಗುವ ದುಃಖ. ಹಝ್ರತ್ ಮುಹಮ್ಮದ್ ಪೈಗಂಬರ್ (ಸ) "ರಹ್ಮತುಲ್ಲಿಲ್ ಆಲಮೀನ್" (ಲೋಕಕ್ಕೆ ಅನುಗ್ರಹ) ಆಗಿದ್ದಾರೆ. ಆ ಮಹಾಪುರುಷರ ನಿಜವಾದ ಸೇವಕರೇ ನಿಜವಾದ ಮುಸ್ಲಿಮರು. ಅವರು ಮುಸ್ಲಿಮರಿಗೆ ದುಃಖ ಉಂಟಾಗುವಾಗ ಮಾತ್ರ ದುಃಖಿಸುವವರಲ್ಲ. ಒಬ್ಬ ಯಹೂದಿಗೂ ಒಬ್ಬ ಕ್ರೈಸ್ತನಿಗೂ ಒಬ್ಬ ಬಹು ದೇವಾರಾಧಕನಿಗೂ ದುಃಖ ಉಂಟಾಗುವಾಗ ಸಹ ದುಃಖಿಸುವವರಾಗಿರುತ್ತಾರೆ. ಆ ರಹ್ಮತುಲ್ಲಿಲ್ ಆಲಮೀನರೊಂದಿಗೆ ಸಂಬಂಧವನ್ನು ಸ್ಥಾಪಿಸಿರಿ. ಅದರಲ್ಲೇ ನಿಮಗಿರುವ ಮೋಕ್ಷ ಅಡಕವಾಗಿದೆ. ★

(ಖುತ್ಬ ಜುಮುಅ : 11-12-1992)
ಭಾಷಾಂತರ: ಮುಹಮ್ಮದ್ ಯೂಸುಫ್


## ಓದಿರಿ —

| | ಬೆಲೆ |
|---|---|
| ★ ಅಹ್ಮದಿಯಾ ಜಮಾಅತ್ | ರೂ. 1 |
| ★ ಪವಿತ್ರ ಖುರ್ಆನಿನ ಪ್ರಕಾಶದಲ್ಲಿ ಹ| ಈಸಾನಬಿ(ಅ)ಯ ಜೀವಿತ ಮತ್ತು ಮರಣ | ರೂ. 1 |
| ★ ಖತಮುನ್ನುಬುವ್ವತ್ ಪೂರ್ವಿಕ ಮಹಾತ್ಮರುಗಳ ದೃಷ್ಟಿಯಲ್ಲಿ | ರೂ. 1 |

(ಅಂಚೆ ವೆಚ್ಚ ಪ್ರತ್ಯೇಕ)

ವ್ಯವಹರಿಸಿರಿ : ಜಮಾಅತ್ ಅಹ್ಮದಿಯಾ, 10-23-1008/1 ಅನ್ಸಾರಿ ರೋಡ್, ಮಂಗಳೂರು 575 001

# ಅಹ್ಮದಿಯಾ ಜಮಾಅತ್ ಮತ್ತು ಅದರ ವಿರೋಧಿಗಳು

— ಎಂ.ಪಿ. ಇಬ್ರಾಹಿಂ

وَلَقَدْ بَعَثْنَا فِي كُلِّ أُمَّةٍ رَّسُولًا أَنِ اعْبُدُوا
اللّٰهَ وَاجْتَنِبُوا الطَّاغُوتَ ۚ فَمِنْهُم مَّنْ هَدَى
اللّٰهُ وَمِنْهُم مَّنْ حَقَّتْ عَلَيْهِ الضَّلَالَةُ ۚ
فَسِيرُوا فِي الْأَرْضِ فَانظُرُوا كَيْفَ كَانَ
عَاقِبَةُ الْمُكَذِّبِينَ ○

"ಅಲ್ಲಾಹನನ್ನು ಮಾತ್ರ ಆರಾಧಿಸಿರಿ; ದೇವೇತರ ಶಕ್ತಿಗಳನ್ನು ಆರಾಧಿಸುವುದರಿಂದ ಸುರಕ್ಷಿತರಾಗಿರಿ ಎಂಬ ಸಂದೇಶದೊಂದಿಗೆ ಪ್ರತಿಯೊಂದು ಸಮುದಾಯದಲ್ಲೂ ಪ್ರವಾದಿಗಳು ಕಳುಹಿಸಲ್ಪಟ್ಟಿದ್ದಾರೆ. (ಪ್ರವಾದಿಗಳಿಂದ ಬೋಧಿಸಲ್ಪಟ್ಟ) ಸತ್ಯಮಾರ್ಗದರ್ಶನವನ್ನು ಸ್ವೀಕರಿಸಿದವರು ಕೆಲವರಾದರೆ, ದುರ್ಮಾರ್ಗದಲ್ಲೇ ಸ್ಥಿರಗೊಂಡು ಪ್ರವಾದಿಗಳನ್ನು ಧಿಕ್ಕರಿಸಿದವರು ಕೆಲವರು. ಆದ್ದರಿಂದ ನೀವು ಭೂಲೋಕದಲ್ಲಿ ಸಂಚರಿಸಿ (ಲೋಕ ಚರಿತ್ರೆಯನ್ನು ಅಧ್ಯಯನ ಮಾಡಿ) ಪ್ರವಾದಿಗಳನ್ನು ಸುಳ್ಳಾಗಿಸಿದವರ ಗತಿ ಏನಾಯಿತೆಂದು ನೋಡಿರಿ."

ಪವಿತ್ರ ಖುರ್‌ಆನಿನ 16ನೇ ಅಧ್ಯಾಯದ 37ನೇ ವಚನದಲ್ಲಿ ಅಲ್ಲಾಹು ಹೇಳುವ ಮಾತಿದು. ದೇವರ ಮಹಿಮೆಯನ್ನೂ ಮಹತ್ವವನ್ನೂ ಅರಿತು ಆ ಸತ್ಯದೇವನನ್ನು ಆರಾಧಿಸುವುದು ಹಾಗೂ ತನ್ನ ಸಹವಾಸಿಗಳಾದ ದೇವರ ಇತರ ಸೃಷ್ಟಿಗಳೊಡನೆ ಶಾಂತಿಯಿಂದಲೂ ಸಾಹೋದರ್ಯದಿಂದಲೂ ಸಹಬಾಳ್ವೆ ನಡೆಸುವುದು ಮಾನವನ ಜೀವಿತೋದ್ದೇಶವಾಗಿದೆ. ಮಾನವ ಕುಲವನ್ನು ಸದಾಚಾರ ಸಂಪನ್ನರನ್ನಾಗಿ ಮಾಡುವ ಈ ದಿವ್ಯ ಸಂದೇಶವನ್ನು ಬೋಧಿಸುತ್ತಾ ಪ್ರತಿಯೊಂದು ಸಮುದಾಯದವರೆಡೆಯಲ್ಲೂ ದೇವನು ತನ್ನ ಸಂದೇಶವಾಹಕರನ್ನು ಕಳುಹಿಸಿರುತ್ತಾನೆಂದು ಮೇಲಿನ ಖುರ್‌ಆನ್ ವಚನ ಸ್ಪಷ್ಟ ಪಡಿಸುತ್ತದೆ. ಎಲ್ಲ ಧರ್ಮಗಳೂ ಧರ್ಮಗ್ರಂಥಗಳೂ ಇದನ್ನೇ ಬೋಧಿಸುತ್ತವೆ. ಪ್ರವಾದಿಗಳು ಕಳುಹಿಸಲ್ಪಡದ ಒಂದೇ ಒಂದು ಸಮುದಾಯವಾಗಲಿ ಈ ಪ್ರಪಂಚದಲ್ಲಿಲ್ಲ ಎಂಬುದಾಗಿ ಪವಿತ್ರ ಖುರ್‌ಆನ್ ಇನ್ನೊಂದೆಡೆಯಲ್ಲಿ ಉಲ್ಲೇಖಿಸುತ್ತದೆ (35 : 25)

ಆದರೆ, ಮಾನವನ ಉದ್ಧಾರಕ್ಕಾಗಿ ಈ ರೀತಿಯ ಪ್ರವಾದಿಗಳು ಆಗತರಾದಾಗಲೆಲ್ಲ ತಮ್ಮದೇ ಆದ ಮೋಡಿಯಲ್ಲಿ ಬದುಕುತ್ತಿದ್ದ ಜನರು ಏನಾದರೊಂದು ಕಾರಣವನ್ನು ಮುಂದಿಡುತ್ತಾ ಆ ಸಂದೇಶವಾಹಕರನ್ನು ಸುಳ್ಳುಗಾರನೆಂದೂ ವಂಚಕನೆಂದೂ ಕಳ್ಳ ಪ್ರವಾದಿಯೆಂದೂ ಹೇಳಿ ತಿರಸ್ಕರಿಸಿ ಬಿಟ್ಟರು ಎಂಬುದು ಮಾನವ ಇತಿಹಾಸದ ದೌರ್ಭಾಗ್ಯಪೂರ್ಣವಾದೊಂದು ದುರಂತವಾದರೂ ಅದೊಂದು ಐತಿಹಾಸಿಕ ಸತ್ಯ. ಇದನ್ನು ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹು ಈ ರೀತಿ ಹೇಳುತ್ತಾನೆ:

يَا حَسْرَةً عَلَى الْعِبَادِ ۚ مَا يَأْتِيهِم مِّن رَّسُولٍ إِلَّا
كَانُوا بِهِ يَسْتَهْزِئُونَ ⑰

"ಮನುಷ್ಯರದು ಅದೆಂತಹ ದುಃಸ್ಥಿತಿ! ಅವರಿಂದ ನಿಂದಿಸಲ್ಪಟ್ಟು ಪರಿಹಾಸ್ಯಕ್ಕೆ ಗುರಿಯಾಗದೆ ಒಬ್ಬನೇ ಒಬ್ಬ ಪ್ರವಾದಿಯೂ ಅವರೆಡೆಗೆ ಬಂದಿಲ್ಲವಲ್ಲ!" (36 : 31)

ಹಝ್ರತ್ ಆದಂ (ಅ) ಮೊದಲ್ಗೊಂಡು ಪ್ರವಾದಿಗಳ ಸಾರ್ವಭೌಮರಾದ ಖಾತಮನ್ನಬಿಯ್ಯೀನ್ ಹಝ್ರತ್ ಮುಹಮ್ಮದ್ ಮುಸ್ತಫಾ (ಸಲ್ಲಲ್ಲಾಹು ಅಲೈಹಿ ವ ಸಲ್ಲಂ) ವರೆಗಿನ ಎಲ್ಲ ಪ್ರವಾದಿಗಳನ್ನೂ ಆಯಾ ಕಾಲದ ಬಹು ಸಂಖ್ಯಾತ ಜನರು ಸುಳ್ಳು ವಾದಿಯೆಂದು ಹೇಳಿ ತಿರಸ್ಕರಿಸಿದ್ದಾರೆ. ಪವಿತ್ರ ಖುರ್‌ಆನನ್ನು ಒಂದು ಸಲ ಅರ್ಥಸಹಿತ ಓದಿ ನೋಡಿದರೆ ಅಲ್ಲಾಹು ಪ್ರವಾದಿಗಳ ಚರಿತ್ರೆಯನ್ನು ಅದರಲ್ಲಿ ಅತಿ ಗಂಭೀರವಾಗಿ ವಿವರಿಸಿರುವುದನ್ನು ಕಾಣಬಹುದು. ಪೂರ್ವ ಪ್ರವಾದಿಗಳನ್ನು ಆಯಾ ಕಾಲದ ಬಹು ಸಂಖ್ಯಾತ ಜನರು ತಿರಸ್ಕರಿಸಿದುದು, ಪ್ರವಾದಿಗಳನ್ನು ಕಳ್ಳವಾದಿಗಳೆಂದು ಸಾರಲು ಅವರು ಮುಂದಿಟ್ಟ ನ್ಯಾಯವಾದಗಳು,

ಪ್ರವಾದಿಗಳೊಡನೆಯೂ ಅವರಲ್ಲಿ ನಂಬಿಕೆಯಿಟ್ಟ ಅಲ್ಪಸಂಖ್ಯಾತ ವಿಶ್ವಾಸಿಗಳೊಡನೆಯೂ ವಿರೋಧಿಗಳು ಅತಿಕಠಿಣವಾಗಿ ವರ್ತಿಸಿದುದು ಇವುಗಳನ್ನೆಲ್ಲ ಪವಿತ್ರ ಖುರ್‌ಆನ್ ಅತ್ಯಂತ ಹೃದಯಸ್ಪರ್ಶಿಯಾಗಿ, ಪುನರಾವರ್ತಿಸಿ ವಿವರಿಸಿದೆ. ಈ ಸಂಬಂಧ ವಿವರಿಸಲ್ಪಟ್ಟ ಖುರ್‌ಆನ್ ವಾಕ್ಯಗಳಲ್ಲಿ ಕೆಲವನ್ನು ನಾನಿಲ್ಲಿ ಉದ್ಧರಿಸುತ್ತೇನೆ:

فَإِنْ كَذَّبُوكَ فَقَدْ كُذِّبَ رُسُلٌ مِّنْ قَبْلِكَ جَآءُوْ بِالْبَيِّنٰتِ وَالزُّبُرِ وَالْكِتٰبِ الْمُنِيْرِ ۝

(ಪೈಗಂಬರರೇ) ನಿಮ್ಮನ್ನು ಅವರು ಕಳ್ಳ ಪ್ರವಾದಿ ಎಂದು ಹೇಳಿ ತಿರಸ್ಕರಿಸಿದ್ದರಲ್ಲಿ ನೀವು ವ್ಯಥೆ ಪಡದಿರಿ; ನಿಮಗೆ ಮೊದಲು ಸಹ ಸುವ್ಯಕ್ತವಾದ ದೃಷ್ಟಾಂತಗಳೊಂದಿಗೂ ದಿವ್ಯೋಪದೇಶಗಳೊಂದಿಗೂ ಪ್ರಕಾಶಪೂರ್ಣವಾದ ಗ್ರಂಥಗಳೊಂದಿಗೂ ಆಗತರಾದ ಪ್ರವಾದಿಗಳನ್ನು ಜನರು ಇದೇ ರೀತಿ ಕಳ್ಳವಾದಿಯೆಂದು ಹೇಳಿದ್ದಾರೆ. (3 : 185)

وَإِذَا قِيْلَ لَهُمْ اٰمِنُوْا بِمَآ اَنْزَلَ اللّٰهُ قَالُوْا نُؤْمِنُ بِمَآ اُنْزِلَ عَلَيْنَا وَيَكْفُرُوْنَ بِمَا وَرَآءَهٗ وَهُوَ الْحَقُّ مُصَدِّقًا لِّمَا مَعَهُمْ

ಅಲ್ಲಾಹನಿಂದ ಅವತೀರ್ಣವಾದುದರಲ್ಲಿ ನಂಬಿಕೆಯಿಡಿರಿ ಎಂದು ಅವರೊಡನೆ ಹೇಳಲ್ಪಡುವಾಗ, ನಮಗೆ ಅವತೀರ್ಣವಾದುದರಲ್ಲಿ ನಾವು ನಂಬಿಕೆಯಿಟ್ಟಿದ್ದೇವೆ ಎಂದು ಅವರು ಹೇಳುತ್ತಾರೆ; ಅದರ ನಂತರದ್ದನ್ನು ಅವರು ನಿರಾಕರಿಸುತ್ತಾರೆ. ಆದಾದರೆ, ಅವರ ಬಳಿಯಿರುವುದನ್ನು ಸತ್ಯಪಡಿಸುವಂತಹದ್ದೇ ಆಗಿರುತ್ತದೆ. (2 : 92)

كُلَّمَا جَآءَهُمْ رَسُوْلٌ بِمَا لَا تَهْوٰىٓ اَنْفُسُهُمْ فَرِيْقًا كَذَّبُوْا وَفَرِيْقًا يَّقْتُلُوْنَ ۝

ಅವರ ಬಳಿಗೆ ಪ್ರವಾದಿಗಳು ಬಂದಾಗಲೆಲ್ಲ ಅವರ ಮನಸ್ಸಿನಲ್ಲಿದ್ದ ಭಾವನೆಗಳಿಗೆ ಅದು ಸರಿಹೊಂದಲಿಲ್ಲವೆಂಬ ಕಾರಣದಿಂದ ಪ್ರವಾದಿಗಳಲ್ಲಿ ಕೆಲವರನ್ನು ಅವರು ಸುಳ್ಳುಗಾರರೆಂದು ಹೇಳಿ ತಿರಸ್ಕರಿಸಿದರು; ಇನ್ನು ಕೆಲವರನ್ನು ಕೊಲ್ಲಲು ಪ್ರಯತ್ನಿಸಿದರು. (5 : 71)

وَعَجِبُوْٓا اَنْ جَآءَهُمْ مُّنْذِرٌ مِّنْهُمْ وَقَالَ الْكٰفِرُوْنَ هٰذَا سٰحِرٌ كَذَّابٌ ۝

ಅವರ ಬಳಿಗೆ ಅವರಿಂದಲೇ ಆದ ಓರ್ವ ಪ್ರವಾದಿ ಬಂದದ್ದು (ಆಕಾಶದಿಂದಲೋ ಅಥವಾ ಇನ್ನೆಲ್ಲಿಂದಲಾದರೋ ಬರದೆ ಅವರೆಡೆಯಿಂದಲೇ ಓರ್ವ ಪ್ರವಾದಿ ನಿಯುಕ್ತನಾದುದು) ಅವರಿಗೆ ಆಶ್ಚರ್ಯವನ್ನುಂಟು ಮಾಡಿತು. ವಿಶ್ವಾಸ ತರದವರು ಹೇಳಿದರು ಈತ ಓರ್ವ ಮೋಡಿಗಾರನೂ ಸುಳ್ಳುವಾದಿಯೂ ಆಗಿದ್ದಾನೆ. (38 : 5)

هَلْ هٰذَآ اِلَّا بَشَرٌ مِّثْلُكُمْ اَفَتَأْتُوْنَ السِّحْرَ وَاَنْتُمْ تُبْصِرُوْنَ ۝

ಈತ ನಿಮ್ಮಂತೆಯೇ ಓರ್ವ ಮನುಷ್ಯನಾಗಿದ್ದಾನೆ; ತಿಳಿದೂ ತಿಳಿದೂ ನೀವು ಈ ವಂಚನೆಯಲ್ಲಿ ಒಳಪಡುವಿರೇನು? (21 : 4)

بَلْ قَالُوْٓا اَضْغَاثُ اَحْلَامٍ بَلِ افْتَرٰىهُ بَلْ هُوَ شَاعِرٌ فَلْيَأْتِنَا بِاٰيَةٍ كَمَآ اُرْسِلَ الْاَوَّلُوْنَ ۝

(ಪೈಗಂಬರರ ಎದುರಾಳಿಗಳು ಹೇಳಿದರು) ಅದು ಅವನ ನಿರರ್ಥಕ ಭಾವನೆಗಳು ಮಾತ್ರ. ಅವನು ಅದನ್ನು ಸ್ವತಃ ಹೇಳುತ್ತಿದ್ದಾನೆ. ಅವನೊಬ್ಬ ಕವಿಯಾಗಿದ್ದಾನೆ. ಈತ ಸತ್ಯವಾದಿಯಾಗಿದ್ದರೆ ಹಿಂದೆ ಪ್ರವಾದಿಗಳು ತಂದಿರುವಂತಹ ಅದ್ಭುತ ದೃಷ್ಟಾಂತಗಳನ್ನು ನಮಗೆ ತೋರಿಸಿ ಕೊಡಲಿ (ಮುಅಜಿಝಾತುಗಳನ್ನು ತೋರಿಸಲಿ!) (21 : 6)

وَقَالُوْا لَوْلَا نُزِّلَ عَلَيْهِ اٰيَةٌ مِّنْ رَّبِّهٖ

ಈತನಿಗೆ ತನ್ನ ದೇವರ ಬಳಿಯಿಂದ ಒಂದು ದೃಷ್ಟಾಂತವಾದರೂ ಯಾಕೆ ಸಿಗುವುದಿಲ್ಲ? (6 : 38)

وَإِذَا رَآكَ الَّذِينَ كَفَرُوا إِن يَتَّخِذُونَكَ إِلَّا هُزُوًا

وَلَقَدِ اسْتُهْزِئَ بِرُسُلٍ مِّن قَبْلِكَ فَحَاقَ بِالَّذِينَ
سَخِرُوا مِنْهُم مَّا كَانُوا بِهِ يَسْتَهْزِئُونَ ۝

ಅವಿಶ್ವಾಸಿಗಳು ನಿನ್ನನ್ನು ಕಂಡಾಗಲೆಲ್ಲಾ ನಿನ್ನನ್ನು ಪರಿಹಾಸ್ಯ ಮಾಡುತ್ತಾರೆ. ನಿಶ್ಚಯವಾಗಿಯೂ ನಿನಗೆ ಮೊದಲು ಸಹ ಸಂದೇಶವಾಹಕರು ನಿಂದನೆಗೆ ಗುರಿಯಾಗಿದ್ದಾರೆ. ಅವರು ಏನನ್ನು ಹೇಳಿ ಪ್ರವಾದಿಗಳನ್ನು ಪರಿಹಾಸ್ಯ ಮಾಡುತ್ತಿದ್ದರೋ ಅದೇ ವಿಧಿಯು ಅವರನ್ನು ಆವರಿಸಿ ಬಂಧಿಸಿತು. (21 : 37 ಮತ್ತು 42)

قَالَ رَبِّ إِنِّي دَعَوْتُ قَوْمِي لَيْلًا وَنَهَارًا ۝
فَلَمْ يَزِدْهُمْ دُعَائِي إِلَّا فِرَارًا ۝
وَإِنِّي كُلَّمَا دَعَوْتُهُمْ لِتَغْفِرَ لَهُمْ جَعَلُوا أَصَابِعَهُمْ
فِي آذَانِهِمْ وَاسْتَغْشَوْا ثِيَابَهُمْ وَأَصَرُّوا وَاسْتَكْبَرُوا
اسْتِكْبَارًا ۝
ثُمَّ إِنِّي دَعَوْتُهُمْ جِهَارًا ۝
ثُمَّ إِنِّي أَعْلَنتُ لَهُمْ وَأَسْرَرْتُ لَهُمْ إِسْرَارًا ۝

[ಹಝ್ರತ್ ನೂಹ್ (ಅ) ಹೇಳಿದರು] ನನ್ನ ದೇವಾ, ನಾನು ನನ್ನ ಜನರನ್ನು ರಾತ್ರಿ ಹಗಲು ನಿನ್ನ ಸಂದೇಶದೆಡೆಗೆ ಆಮಂತ್ರಿಸಿದೆ. ಆದರೆ ನನ್ನ ಕರೆ ಅವರಲ್ಲಿ ಅಗಲುವಿಕೆಯನ್ನಲ್ಲದೆ ಮತ್ತೇನನ್ನೂ ಉಂಟುಮಾಡಲಿಲ್ಲ. ನೀನು ಅವರಿಗೆ ಕ್ಷಮಾಪಣೆ ನೀಡಲಿಕ್ಕಾಗಿ ಅವರನ್ನು ನಾನು ನಿನ್ನೆಡೆಗೆ ಕರೆದಾಗಲೆಲ್ಲ ಅವರು ತಮ್ಮ ಕೈ ಬೆರಳುಗಳಿಂದ ಕಿವಿಗಳನ್ನು ಮುಚ್ಚಿಬಿಟ್ಟರು. ಅವರು ತಮ್ಮ ಹೊದಿಕೆಯಿಂದ ಹೊರಬರಲಿಲ್ಲ. ಅವರು ಅವಿಶ್ವಾಸದಲ್ಲಿಯೇ ಸ್ಥಿರವಾಗಿ ನಿಂತರು. ಅವರು ಬಹಳ ಅಹಂಭಾವಿಗಳೂ ಗರ್ವಿಷ್ಠರೂ ಆಗಿದ್ದಾರೆ. ನಾನು ಇನ್ನೂ ಅವರನ್ನು ಜೋರಾಗಿ ಕರೆದೆ. ಮತ್ತೂ ನಾನು ಬಹಿರಂಗವಾಗಿಯೂ ಗುಪ್ತವಾಗಿಯೂ ಅವರನ್ನು ಉಪದೇಶಿಸಿದೆ. (71 : 6 - 10)

قَالَ نُوحٌ رَّبِّ إِنَّهُمْ عَصَوْنِي وَاتَّبَعُوا مَن لَّمْ
يَزِدْهُ مَالُهُ وَوَلَدُهُ إِلَّا خَسَارًا ۝
وَمَكَرُوا مَكْرًا كُبَّارًا ۝

(ನೂಹ್ ಹೇಳಿದರು) ಆದರೆ ಓ ದೇವಾ, ನಿಶ್ಚಯವಾಗಿಯೂ ಅವರು ನನ್ನನ್ನು ಧಿಕ್ಕರಿಸಿಬಿಟ್ಟರು. ಯಾರ ಸಂಪತ್ತೂ ಸಂತತಿಗಳೂ ಅವರಿಗೆ ವಿಪತ್ತನ್ನು ಮಾತ್ರ ತರುತ್ತದೆಯೋ ಅಂತಹವರನ್ನೇ ಅವರು ಅನುಗಮಿಸಿದರು. ಅವರು (ನನಗೆದುರಾಗಿ) ಬಹುದೊಡ್ಡ ಕುತಂತ್ರವನ್ನು ರೂಪಿಸಿದ್ದಾರೆ. (71 : 22, 23)

وَقَالَ نُوحٌ رَّبِّ لَا تَذَرْ عَلَى الْأَرْضِ مِنَ الْكَافِرِينَ
دَيَّارًا ۝
إِنَّكَ إِن تَذَرْهُمْ يُضِلُّوا عِبَادَكَ وَلَا يَلِدُوا إِلَّا
فَاجِرًا كَفَّارًا ۝

(ನೂಹ್ ಪ್ರಾರ್ಥಿಸಿದರು) ನನ್ನ ದೇವಾ, ಈ ದೇಶದಲ್ಲಿ ಅವಿಶ್ವಾಸಿಗಳಾದ ಯಾರನ್ನೂ ನೀನು ವಾಸಿಸಲು ಬಿಡಬೇಡ. ನೀನವರನ್ನು ಬಿಟ್ಟು ಬಿಡುವುದಾದರೆ, ನಿನ್ನ ಸತ್ಯವಂತರಾದ ದಾಸರನ್ನು ಅವರು ಮಾರ್ಗಭ್ರಷ್ಟರನ್ನಾಗಿ ಮಾಡುವರು. ಕೃತಜ್ಞತೆಯಿಲ್ಲದ ಪಾಪಿಗಳನ್ನಲ್ಲದೆ ಅವರು ಹುಟ್ಟಿಸುವುದೂ ಇಲ್ಲ. (71 : 27, 28)

وَمَا تَأْتِيهِم مِّنْ آيَةٍ مِّنْ آيَاتِ رَبِّهِمْ إِلَّا كَانُوا عَنْهَا
مُعْرِضِينَ ۝
فَقَدْ كَذَّبُوا بِالْحَقِّ لَمَّا جَاءَهُمْ

ಅವರ ನಾಥನ ಕಡೆಯಿಂದ ಅವರ ಬಳಿಗೆ ದೃಷ್ಟಾಂತಗಳು ಬಂದಾಗಲೆಲ್ಲ ಅವರು ಅದರಿಂದ ಮುಖ ತಿರುಗಿಸಿಬಿಟ್ಟರು. ಅವರ ಬಳಿಗೆ ಬಂದ ಸತ್ಯ ಸಂದೇಶವನ್ನು ಅವರು ಸುಳ್ಳೆಂದು ಹೇಳಿದರು (6 : 5, 6)

وَمَنْ أَضَلُّ مِمَّنِ اتَّبَعَ هَوَاهُ بِغَيْرِ هُدًى مِّنَ اللَّهِ
إِنَّ اللَّهَ لَا يَهْدِي الْقَوْمَ الظَّالِمِينَ ۝
وَلَقَدْ وَصَّلْنَا لَهُمُ الْقَوْلَ لَعَلَّهُمْ يَتَذَكَّرُونَ ۝

ಅಲ್ಲಾಹನಿಂದ ಬರುವ ಮಾರ್ಗದರ್ಶನವನ್ನು ತಿರಸ್ಕರಿಸಿ ಸ್ವೇಚ್ಛೆಯನ್ನು ಅನುಗಮಿಸುವವರಿಗಿಂತಲೂ ದೊಡ್ಡ ದ್ರೋಹಿಗಳು ಯಾರಿದ್ದಾರೆ? ಅಕ್ರಮಿಗಳಿಗೆ ಅಲ್ಲಾಹು ಮಾರ್ಗದರ್ಶನ ನೀಡುವುದಿಲ್ಲ. ಅವರು ಸರಿದಾರಿಗೆ ಬರಲೆಂದು ನಾವು ಅವರಿಗೆ ಪದೇ ಪದೇ ನಮ್ಮ ವಚನಗಳನ್ನು ಅವತೀರ್ಣಗೊಳಿಸಿದ್ದೆವು. (28 : 51, 52)

وَمِنْهُم مَّن يَسْتَمِعُ إِلَيْكَ وَجَعَلْنَا عَلَىٰ قُلُوبِهِمْ
أَكِنَّةً أَن يَفْقَهُوهُ وَفِي آذَانِهِمْ وَقْرًا وَإِن يَرَوْا
كُلَّ آيَةٍ لَّا يُؤْمِنُوا بِهَا
وَهُمْ يَنْهَوْنَ عَنْهُ وَيَنْأَوْنَ عَنْهُ

ನಿನ್ನ ಮಾತುಗಳನ್ನು ಗಮನಿಸಿ ಕೇಳುವ ಕೆಲವರು ಸಹ ಅವರಲ್ಲಿದ್ದಾರೆ. ಆದರೆ, ಅದು ಅವರಿಗೆ ಮನವರಿಕೆಯಾಗದಂತೆ ಅವರ ಹೃದಯಗಳಲ್ಲಿ ನಾವು ಪರದೆಯನ್ನು ಹಾಕಿರುತ್ತೇವೆ. ಅವರ ಕಿವಿಗಳು ಮುಚ್ಚಲ್ಪಟ್ಟಿವೆ. ಎಲ್ಲಾ ದೃಷ್ಟಾಂತಗಳನ್ನು ಕಂಡರೂ ಅವರು ವಿಶ್ವಾಸ ಹೊಂದಲಾರರು.... ಅವರು ಸತ್ಯ ಮಾರ್ಗದಿಂದ ಇತರರನ್ನು ತಡೆಯುತ್ತಾರಲ್ಲದೆ ತಾವು ಸ್ವಯಂ ಅದರಿಂದ ದೂರ ಸರಿದವರೂ ಆಗಿದ್ದಾರೆ. (6 : 26, 27)

وَلَقَدْ جَاءَتْهُمْ رُسُلُهُم بِالْبَيِّنَاتِ فَمَا كَانُوا لِيُؤْمِنُوا بِمَا
كَذَّبُوا مِن قَبْلُ

ಸುವ್ಯಕ್ತವಾದ ದೃಷ್ಟಾಂತಗಳೊಂದಿಗೆ ಅವರ ಬಳಿಗೆ ಪ್ರವಾದಿಗಳು ಬಂದಾಗಲೆಲ್ಲ ಅವರನ್ನು ಕಳ್ಳವಾದಿಗಳೆಂದು ಮೊದಲೇ ಅವರು ತೀರ್ಮಾನಿಸಿದ್ದ ಕಾರಣ ಆ ಪ್ರವಾದಿಗಳಲ್ಲಿ ನಂಬಿಕೆಯಿಡಲು ಅವರಿಗೆ ಸಾಧ್ಯವಾಗಲಿಲ್ಲ. (7 : 102)

فَلَمَّا جَاءَتْهُمْ رُسُلُهُم بِالْبَيِّنَاتِ فَرِحُوا بِمَا عِندَهُم
مِّنَ الْعِلْمِ وَحَاقَ بِهِم مَّا كَانُوا بِهِ يَسْتَهْزِئُونَ ۝

ಸ್ಪಷ್ಟವಾದ ದೃಷ್ಟಾಂತಗಳೊಂದಿಗೆ ಪ್ರವಾದಿಗಳು ಅವರ ಬಳಿ ಬಂದಾಗ ಅವರು ತಮ್ಮ ತಿಳುವಳಿಕೆಯಲ್ಲೂ ಪಾಂಡಿತ್ಯದಲ್ಲೂ ಅಹಂಭಾವ ತೋರಿಸಿದರು. ಹಾಗೆ, ಅವರು ಏನನ್ನು ಹೇಳಿ ಪ್ರವಾದಿಗಳನ್ನು ಅಪಮಾನಿಸುತ್ತಿದ್ದರೋ ಅದರಿಂದಲೇ ಅವರು ಆವರಿಸಲ್ಪಟ್ಟರು. (40 : 84)

ಎಲ್ಲ ಪ್ರವಾದಿಗಳಿಗೂ ಶತ್ರುಗಳೂ ವಿರೋಧಿಗಳೂ ಇದ್ದರು. ಹಝ್ರತ್ ಆದಂ (ಅ) ಮೊದಲ್ಗೊಂಡು ಇದುವರೆಗಿನ ಪ್ರವಾದಿಗಳ ಚರಿತ್ರೆ ಇದಕ್ಕೆ ಸಾಕ್ಷಿಯಾಗಿದೆ. ಹಝ್ರತ್ ಈಸಾ ಮಸೀಹರ ಸಂಬೋಧಿತ ಸಮುದಾಯವಾದ ಯಹೂದ್ಯರು ಇಂದು ಸಹ ಆ ಪುಣ್ಯಾತ್ಮರ ಶತ್ರುಗಳಾಗಿಯೇ ಉಳಿದಿದ್ದಾರೆ. ಸಮಸ್ತ ಪ್ರಪಂಚಕ್ಕೂ ಪ್ರವಾದಿಯಾಗಿ ನಿಯೋಗಿಸಲ್ಪಟ್ಟ ಖಾತಮುಲ್ ಅಂಬಿಯಾ ಹಝ್ರತ್ ಮುಹಮ್ಮದ್ ಮುಸ್ತಫಾ (ಸ) ಅವತೀರ್ಣರಾಗಿ 1400 ವರ್ಷಗಳು ಕಳೆದರೂ ಲೋಕ ಜನಸಂಖ್ಯೆಯ ಬಹುಪಾಲು ಜನರು ಆ ಪುಣ್ಯಾತ್ಮರ ಎದುರಾಳಿಗಳಾಗಿದ್ದಾರೆ ಅಥವಾ ಅವರ ಸತ್ಯತೆಯನ್ನು ಸ್ವೀಕರಿಸದವರಾಗಿದ್ದಾರೆ. ಅವರಲ್ಲಿ ಹೆಚ್ಚಿನವರು ಆ ಮಹಾನ್ ಪ್ರವಾದಿಯ ಕುರಿತು ತಪ್ಪು ತಿಳುವಳಿಕೆ ಹೊಂದಿದವರಾಗಿದ್ದು ಅದನ್ನೇ ಅವರು ಪ್ರಚಾರ ಮಾಡುತ್ತಲೂ ಅವರನ್ನು ಆಕ್ಷೇಪಿಸುತ್ತಲೂ ಇದ್ದಾರೆ. ಕ್ರೈಸ್ತ ಮಿಶನರಿಗಳು ಇವರ ಮಂಚೂಣಿಯಲ್ಲಿರುವರು.

ಮನುಷ್ಯರು ದೇವರನ್ನು ಮರೆತು ಧಾರ್ಮಿಕ ಅಂಧಕಾರದಲ್ಲಿ ಮುಳುಗಿ, ಎಲ್ಲಾ ವಿಧ ಅನಾಚಾರಗಳಲ್ಲೂ ಅಂಧ ವಿಶ್ವಾಸಗಳಲ್ಲೂ ತೊಡಗುವಾಗ, ಸರ್ವತ್ರ ಅಧರ್ಮವೂ ಅನ್ಯಾಯವೂ ವ್ಯಾಪಿಸಿ ದೇವ ನಿಯಮಗಳನ್ನು ಉಲ್ಲಂಘಿಸಿ ನಡೆಯುವವರದೇ ಮೇಲುಗೈಯಾಗುವ ಅಂಧಕಾರಮಯ ಕಾಲಘಟ್ಟದಲ್ಲಿ ಮಾನವರ ಉದ್ಧಾರಕ್ಕಾಗಿ ಅಲ್ಲಾಹನು ಪ್ರವಾದಿಗಳನ್ನು ನಿಯೋಜಿಸುತ್ತಾನೆ.

وَلَقَدْ ضَلَّ قَبْلَهُمْ أَكْثَرُ الْأَوَّلِينَ ۝
وَلَقَدْ أَرْسَلْنَا فِيهِم مُّنذِرِينَ ۝

ನಿನಗೆ ಮೊದಲು ಬಹು ಸಂಖ್ಯೆಯಲ್ಲಿ ಜನರು ದುರ್ಮಾರ್ಗಿಗಳಾದಾಗ ಅವರೆಡೆಗೆ ನಾವು ಎಚ್ಚರಿಕೆ ನೀಡುವ ಪ್ರವಾದಿಗಳನ್ನು ಕಳುಹಿಸಿದೆವು. (37 : 72, 73) ಎಂದು ಅಲ್ಲಾಹು ಹೇಳುತ್ತಾನೆ. ಪೈಗಂಬರರು ನಿಯೋಜಿತರಾದ ಕಾಲದ ವರ್ಣನೆಯನ್ನು ಪವಿತ್ರ ಖುರ್‌ಆನ್ ಈ ರೀತಿ ಮಾಡಿದೆ:

ظَهَرَ الْفَسَادُ فِي الْبَرِّ وَالْبَحْرِ

ಭೂಮಿಯಲ್ಲೂ ಸಮುದ್ರದಲ್ಲೂ (ಅಂದರೆ ಸರ್ವತ್ರ) ಅಧರ್ಮ ವ್ಯಾಪಿಸಿದ ಕಾಲ (30 : 42)

## ವಾಗ್ದತ್ತ ಮಸೀಹರ ಆಗಮನ

ಹಝ್ರತ್ ಮುಹಮ್ಮದ್ (ಸ) ಅವರ ಕಾಲದ ನಂತರ 14ನೇ ಶತಮಾನದ ಸುಮಾರಿಗೆ ಇದೇ ರೀತಿಯ ಅಂಧಕಾರಮಯವಾದ ಒಂದು ಕಾಲ ಸನ್ನಿಹಿತವಾಗುವುದೆಂದು ಪವಿತ್ರ ಖುರ್‌ಆನಿನಿಂದಲೂ ಪ್ರವಾದಿ ವಚನಗಳಿಂದಲೂ ವೇದ್ಯವಾಗುತ್ತದೆ. ಆ ಕಾಲದಲ್ಲಿ ಎಲ್ಲ ಸಮುದಾಯದ ಜನರೂ ವಿಶಿಷ್ಟವಾಗಿ ಮುಸ್ಲಿಮರು ಧಾರ್ಮಿಕವಾಗಿ ಅಧಃಪತನ ಹೊಂದುವರೆಂಬುದಾಗಿ ಭವಿಷ್ಯವಾಣಿಗಳಲ್ಲಿ ವಿವರಿಸಲ್ಪಟ್ಟಿದೆ. ಇಂದು ನಾವು ಜೀವಿಸುತ್ತಿರುವ ಈ ಕಾಲದ ಕಡೆ ಒಮ್ಮೆ ಕಣ್ಣೋಡಿಸಿ ನೋಡುವುದಾದರೆ, ಪ್ರವಾದನಗಳಲ್ಲಿ ವಿವರಿಸಲ್ಪಟ್ಟ ಆ ಕಾಲಘಟ್ಟ ಇದೇ ಆಗಿದೆಯೆಂದು ಮನವರಿಕೆ ಮಾಡಿಕೊಳ್ಳಲು ಪ್ರಯಾಸವಿಲ್ಲ. ಎಲ್ಲ ಧರ್ಮೀಯರೂ ಈ ಸಂಗತಿಯನ್ನು ಬಹಿರಂಗವಾಗಿ ಒಪ್ಪುತ್ತಾರೆ. ಹಾಗೆ, ಅಂಧಕಾರಮಯವಾದ ಈ ಕಾಲಘಟ್ಟದಲ್ಲಿ ಮನುಷ್ಯ ರಾಶಿಗೆ ಮಾರ್ಗದರ್ಶನ ನೀಡಲು ಹಾಗೂ ಪ್ರವಾದಿ ಮುಹಮ್ಮದ್ (ಸ)ರವರ ದಿವ್ಯವಾದ ಸಂದೇಶದ ಮೂಲ ತತ್ವಗಳೆಡೆಗೆ ಜನರನ್ನು ಆಹ್ವಾನಿಸಲು ಅಲ್ಲಾಹು ತನ್ನ ವಾಗ್ದಾನ ಪ್ರಕಾರ ಈ ಕಾಲದಲ್ಲಿ ಓರ್ವ ಪ್ರವಾದಿಯನ್ನು ಕಳುಹಿಸಿರುತ್ತಾನೆ. ವಾಗ್ದತ್ತ ಮಸೀಹ್ ಮತ್ತು ಇಮಾಂ ಮಹ್‌ದಿ ಆಗಿ ಜನ್ಮ ತಾಳಿರುವ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ (ಅ) ಅವರೇ ಆ ಪುಣ್ಯ ಪುರುಷ. ಪ್ರವಾದಿ ಮುಹಮ್ಮದ್ (ಸ)ರ ಶ್ರೇಷ್ಠತೆಯನ್ನೂ ಇಸ್ಲಾಂ ಧರ್ಮದ ಮಹತ್ವವನ್ನೂ ಲೋಕಕ್ಕೆ ತಿಳಿಸಿಕೊಡಲು ಅವರು ಅವಿರತ ಪರಿಶ್ರಮಿಸಿದರು.

ಮುಹಮ್ಮದ್ ಪೈಗಂಬರ್(ಸ)ರವರ ಜೀವನಾದರ್ಶಗಳೂ ಅವರು ಬೋಧಿಸಿದ ದಿವ್ಯ ಸಂದೇಶವೂ ಯಾವ ರೀತಿಯಲ್ಲಿ ಮಾನವ ರಾಶಿಗೆ ಅನುಗ್ರಹೀತವಾಗಿತ್ತೆಂದು ಲೋಕಕ್ಕೆ ವಿವರಿಸಿಕೊಟ್ಟು, ಆ ಪುಣ್ಯ ಪ್ರವಾದಿಯವರ ಪ್ರಜ್ವಲಿಸುವ ಪ್ರಭಾವವನ್ನು ಲೋಕವು ಅಂಗೀಕರಿಸುವಂತಾಗಲು ಆ ಪ್ರಯತ್ನಕ್ಕಾಗಿ ತನ್ನ ಜೀವಿತವನ್ನೇ ಮುಡಿಪಾಗಿಟ್ಟ ಪೈಗಂಬರರ ಓರ್ವ ವಿನೀತ ಶಿಷ್ಯರಾಗಿದ್ದರು ಅವರು. ಈ ಕಾರ್ಯೋದ್ದೇಶಕ್ಕಾಗಿಯೇ "ಅಹ್ಮದಿಯಾ ಜಮಾಅತ್" ಎಂಬ ಒಂದು ಸಂಘಟನೆಯನ್ನು ಅವರು ಸ್ಥಾಪಿಸಿದರು. ಈ ಸಂಘಟನೆ ಮಾನವರಾಶಿಯ ಕಲ್ಯಾಣಕ್ಕಾಗಿ ಲೋಕದಲ್ಲಿಡೀ ಸುಸಂಘಟಿತವಾಗಿ ಅವಿರತ ಪರಿಶ್ರಮಿಸುತ್ತಿದೆ. ಇಸ್ಲಾಂ ಎಂಬ ಸತ್ಯಸೂರ್ಯ ಪಶ್ಚಿಮದ ಸಾಮ್ರಾಜ್ಯಗಳಲ್ಲಿ ಉದಯಿಸಿದ್ದು ಹಝ್ರತ್ ಅಹ್ಮದ್ (ಅ)ರ ಮೂಲಕವಾಗಿದೆ.

ಆದರೆ, ದೇವರ ಕಡೆಯಿಂದ ಆಗತರಾಗುವ ದಿವ್ಯ ಪ್ರವಾದಿಗಳನ್ನೂ ಅವರ ಅನುಯಾಯಿಗಳನ್ನೂ ಆಯಾ ಕಾಲದ ಸತ್ಯ ವಿರೋಧಿಗಳು ಅಪಹಾಸ್ಯ ಮಾಡಿದ್ದೂ ನಿಂದಿಸಿದ್ದೂ ಸುಳ್ಳುವಾದಿಗಳೆಂದು ಹೇಳಿ ತಿರಸ್ಕರಿಸಿದ್ದೂ ಒಂದು ಚಾರಿತ್ರಿಕ ಸತ್ಯ. ಅಂತೆಯೇ ಈ ಕಾಲದಲ್ಲಿ ಅವತೀರ್ಣರಾದ ಮಹ್‌ದೀ-ಮಸೀಹ್ ಹಝ್ರತ್ ಅಹ್ಮದ್ (ಅ)ರನ್ನು ಸಹ ಇಂದಿನ ಜನರು ವಿರೋಧಿಸುತ್ತಿರುವುದರಲ್ಲಿ ಆಶ್ಚರ್ಯವಿಲ್ಲ. ಬದಲಾಗಿ, ಓರ್ವ ಸತ್ಯಪ್ರವಾದಿಯನ್ನು ಆ ಕಾಲದ ಜನರು ಸುಳ್ಳುವಾದಿಯೆಂದು ಹೇಳಿ ಅಪಹಾಸ್ಯ ಮಾಡದಿದ್ದರೆ ಖಂಡಿತವಾಗಿಯೂ ಅದು ಆಶ್ಚರ್ಯಕ್ಕೆಡೆ ಮಾಡೀತು. ಇಸ್ಲಾಂ ಧರ್ಮದ ಪುನರುದ್ಧಾರಕ್ಕಾಗಿ ನಿಯೋಗಿತರಾದ, ಲೋಕದ ಜನರನ್ನು ಅಲ್ಲಾಹನ ಸತ್ಯ ಮಾರ್ಗದೆಡೆಗೆ ಆಮಂತ್ರಿಸಲು ದಿವ್ಯ ಪ್ರಕಾಶದೊಂದಿಗೆ ಆಗತರಾದ ಹಝ್ರತ್ ಅಹ್ಮದ್ (ಅ)ನ್ನು ಅಸಭ್ಯವಾದ ಮಾತುಗಳಿಂದ ನಿಂದಿಸಿ ಅಪಹಾಸ್ಯ ಮಾಡುವ ದೌರ್ಭಾಗ್ಯವು ಇತ್ತೀಚೆಗೆ ದಕ್ಷಿಣ ಕನ್ನಡ ಜಿಲ್ಲೆಯ ದೇರ್ಲಕಟ್ಟೆಯಿಂದ ಹೊರಡುತ್ತಿರುವ "ಅಲ್ ಅನ್ಸಾರ್" ಎಂಬ ವಾರ

ಪತ್ರಿಕೆಗೂ ಅದರ ಸಂಪಾದಕರಿಗೂ ಬಂದೊದಗಿದೆ ಎಂಬುದು ಅತೀವ ದುಃಖದ ಸಂಗತಿ. ಅಹ್ಮದಿಯಾ ಜಮಾಅತನ್ನೂ ಅದರ ಸ್ಥಾಪಕರನ್ನೂ ನಿಂದ್ಯವಾದ ಶೈಲಿಯಲ್ಲಿ ಆಕ್ಷೇಪಿಸುತ್ತಿರುವ ಆ ಪತ್ರಿಕೆಯ ಸಂಪಾದಕರಾದ ಸಾಲೆತ್ತೂರು ಅಬೂಬಕ್ಕರ್ ಫೈಝಿಯವರು, ಒಬ್ಬರಿಗೆ ಇಷ್ಟವಾಗದ ಹೆಸರಿನಿಂದ ಅವರನ್ನು ಕರೆಯಬಾರದೆಂಬ ಪವಿತ್ರ ಖುರ್‌ಆನಿನ ಪಾವನವಾದ ಉಪದೇಶವನ್ನು ರಾಜಾರೋಷದಿಂದ ಉಲ್ಲಂಘಿಸುತ್ತಾ ಅಹ್ಮದೀಯರನ್ನು "ಕಾದಿಯಾನಿಗಳು" ಎಂದು ಕರೆಯುತ್ತಿದ್ದಾರೆ. ಕಾದಿಯಾನ್ ಎಂಬುದು ಒಂದು ಊರಿನ ಹೆಸರೆಂಬ ಜ್ಞಾನ ಸಹ ಅವರಿಗಿಲ್ಲವೆಂದು ಭಾವಿಸಲು ಸಾಧ್ಯವಿಲ್ಲ. ಸಾಲೆತ್ತೂರು ಫೈಝಿಯವರು ತಮ್ಮ ಪತ್ರಿಕೆಯ ಕೆಲವು ಸಂಚಿಕೆಗಳಲ್ಲಿ ಅಹ್ಮದಿಯಾ ಜಮಾಅತನ್ನೂ ಅದರ ಸ್ಥಾಪಕರನ್ನೂ ಸಭ್ಯೇತರ ಭಾಷೆಯಲ್ಲಿ ನಿಂದಿಸಿ ಬರೆದಿದ್ದಾರೆ. ಆದರೆ, ಆಶ್ಚರ್ಯದ ಸಂಗತಿಯೆಂದರೆ, ಸದರಿಯವರಿಗೆ ನಾವು ಉತ್ತರ ನೀಡಬೇಕಾದ ರೀತಿಯಲ್ಲಿ ಅವರು ಏನನ್ನೂ ಬರೆದಿಲ್ಲವೆಂಬುದೇ. ಅತೀ ಕಳಪೆ ಮಟ್ಟದ ಶೈಲಿಯಲ್ಲಿಯೂ ಏಕವಚನ ಪ್ರಯೋಗದಿಂದಲೂ ಅವರು ಇಮಾಂ ಮಹ್‌ದಿಯವರನ್ನು ನಿಂದಿಸಿದ್ದಾರೆಯೇ ವಿನಾ ಧಾರ್ಮಿಕ ಮಂಡಲದಲ್ಲಿ ಅತ್ಯಂತ ಮಹತ್ವಪೂರ್ಣ ಕ್ರಾಂತಿಯನ್ನು ಸೃಷ್ಟಿಸಿದ, ಇಸ್ಲಾಂ ಧರ್ಮದ ಈ ಕಾಲದ ಅಧಿಕೃತ ವಕ್ತಾರ ತಾನೆಂದು ವಾದಿಸಿದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ (ಅ) ಅವರು ಲೋಕದ ಮುಂದೆ ಸಮರ್ಪಿಸಿರುವ ಯಥಾರ್ಥ ಇಸ್ಲಂ ಧರ್ಮ ತತ್ವಗಳಲ್ಲಿ ಯಾವುದನ್ನು ಸಹ ಫೈಝಿಯವರು ತಾತ್ವಿಕವಾಗಿ ವಿಮರ್ಶಿಸಲಿಲ್ಲ.

ಫೈಝಿಯವರಂತಹ ಮೌಲ್ವಿಗಳು ನೀರೆರೆದು ಪೋಷಿಸುತ್ತಿರುವ ಅಂಧವಿಶ್ವಾಸಗಳಿಗೂ ಅನಾಚಾರಗಳಿಗೂ ಯಥಾರ್ಥ ಇಸ್ಲಾಮಿನ ತತ್ವಾದರ್ಶಗಳೊಂದಿಗೆ ಯಾವ ಸಂಬಂಧವೂ ಇರುವುದಿಲ್ಲ. ಮುಸ್ಲಿಂ ಸಮುದಾಯದಲ್ಲಿ ಕಾಲಾಂತರದಲ್ಲಿ ಬಂದು ಸೇರಿದ ಈ ಅಧಾರ್ಮಿಕತೆಯನ್ನು ಬೇರು ಸಮೇತ ಕಿತ್ತೆಸೆದು ಸರ್ವಾಂಗ ಸುಂದರವಾದ ಯಥಾರ್ಥ ಇಸ್ಲಾಂ ಧರ್ಮ ತತ್ವಗಳನ್ನೂ ಹಝ್ರತ್ ಮುಹಮ್ಮದ್ ಮುಸ್ತಫಾ (ಸ)ರವರ ಪಾವನವಾದ ಜೀವನ ಚರ್ಯೆಗಳ ಮಹೋನ್ನತ ಆದರ್ಶಗಳನ್ನೂ ಲೋಕಕ್ಕೆ ತೋರಿಸಿಕೊಡಲು ತನ್ನನ್ನು ಅಲ್ಲಾಹನು ಆ ಮಹಾನುಭಾವರ ಶಿಷ್ಯ ಪ್ರವಾದಿಯಾಗಿ ನಿಯೋಜಿಸಿದ್ದಾನೆಂಬುದು ಹಝ್ರತ್ ಅಹ್ಮದ್ ಅಲೈಹಿಸ್ಸಲಾಮರ ವಾದವಾಗಿದೆ. ಮುಹಮ್ಮದ್ ಪೈಗಂಬರರ ನಂತರ ಇನ್ನು ಮುಂದೆ ಯಾವ ಕಾಲಕ್ಕೂ ಯಾರೂ ಪ್ರವಾದಿಯಾಗಿ ಬರಲಾರರೆಂದು ಬೋರಾಡುತ್ತಾ ಆ ರೀತಿ ಯಾರಾದರೂ ಪ್ರವಾದಿಯಾಗಿ ಬಂದಲ್ಲಿ ಅವರನ್ನು ಕಳ್ಳವಾದಿಗಳೆಂದು ಈಗಲೇ ತೀರ್ಮಾನಿಸಿಟ್ಟಿರುವ ಫೈಝಿಯವರೇ, 2000 ವರ್ಷಗಳ ಹಿಂದೆ ಬನೀ ಇಸ್ರಾಈಲ್ ಗೋತ್ರದವರಿಗೆ ಪ್ರವಾದಿಯಾಗಿ ನಿಯೋಜಿಸಲ್ಪಟ್ಟಿದ್ದ ಹಝ್ರತ್ ಈಸಾ ಅಲೈಹಿಸ್ಸಲಾಮರು ಈಗಲೂ ಆಕಾಶದಲ್ಲಿ ಜೀವಿಸುತ್ತಿರುವರೆಂದೂ ಅಂತ್ಯಕಾಲದಲ್ಲಿ (?) ಅವರು ಧರೆಗಿಳಿದು ಬರುವರೆಂದೂ ನೀವು ನಂಬುವುದಿಲ್ಲವೇ? ಹಾಗಾದರೆ ಪ್ರವಾದಿ ಈಸಾ ಅಲೈಹಿಸ್ಸಲಾಮರು ಮುಹಮ್ಮದ್ ಪೈಗಂಬರ್ (ಸ)ರವರ ನಂತರ ಬರಲಿರುವ ಕಾರಣದಿಂದ ಅವರ ಆಗಮನವಾದಾಗ ಅವರನ್ನೂ ನೀವು ಕಳ್ಳವಾದಿಯೆಂದು ಹೇಳಿ "ಫತ್ವಾ" ನೀಡುವಿರೇನು? ನಿಮ್ಮ ಈ ಪರಸ್ಪರ ವೈರುದ್ಧ್ಯವಿರುವ ವಿಶ್ವಾಸದ ವಿಚಾರಬದ್ಧತೆಯನ್ನು ಸ್ವಲ್ಪ ವಿವರಿಸುವಿರಾ?

ಒಬ್ಬ ಖಲೀಫರ ಕೈಕೆಳಗೆ ಸಂಘಟಿತರಾಗಿದ್ದುಕೊಂಡು, ಲೋಕದಲ್ಲಿಡೀ ಯಥಾರ್ಥ ಇಸ್ಲಾಂ ಧರ್ಮದ ಸುಂದರ ತತ್ವ ಬೋಧನೆಗಳನ್ನು ಪ್ರಚಾರ ಮಾಡುತ್ತಾ ಅಲ್ಲಾಹನ ಮಹಿಮೆಯನ್ನೂ ಪ್ರವಾದಿ ವರೇಣ್ಯರ ಶ್ರೇಷ್ಠತೆಯನ್ನೂ ಲೋಕದ ಜನರಿಗೆ ವಿವರಿಸಿಕೊಟ್ಟು ಅಲ್ಲಾಹನೆಡೆಗೆ ಮಾನವ ರಾಶಿಯನ್ನು ಆಮಂತ್ರಿಸುತ್ತಿರುವ ಭೂಗೋಳದ 132 ರಾಷ್ಟ್ರಗಳಲ್ಲಿ ತನ್ನ ಶಾಖೆಗಳನ್ನು ಹರಡಿಸಿಕೊಂಡು ಒಂದು ಕೋಟಿಗೂ ಹೆಚ್ಚು ಸದಸ್ಯರನ್ನು ಹೊಂದಿರುವ ಅಹ್ಮದಿಯಾ ಜಮಾಅತನ್ನು ದೇರ್ಲಕಟ್ಟೆಯ ಈ ಭಾಗ್ಯಹೀನ ಪತ್ರಿಕೆಯು ತನ್ನ ವಾಚಕರಿಗೆ ಪರಿಚಯಿಸಿಕೊಡುವ ಶೈಲಿ ನೋಡಿದರೆ ಆ ಪತ್ರಿಕೆ ಮತ್ತು ಅದರ ಸಂಪಾದಕರೊಡನೆ ಕನಿಕರ ತೋರುತ್ತದೆ. ಅವರು ಹಝ್ರತ್ ಅಹ್ಮದ್ (ಅ)ರ ವಾದಗಳನ್ನೂ ವಿಚಾರಗಳನ್ನೂ ಸಭ್ಯ ರೀತಿಯಲ್ಲಿ ವಿಮರ್ಶಿಸಿ, ಅಭಿಪ್ರಾಯ ವ್ಯತ್ಯಾಸಗಳಿರುವ ವಿಷಯಗಳಲ್ಲಿ

ತಮ್ಮ ನಿಲುವನ್ನು ಸಮಂಜಸವಾಗಿ ಸಮರ್ಥಿಸುವ ಲೇಖನಗಳನ್ನು ಆ ಪತ್ರಿಕೆಯಲ್ಲಿ ಪ್ರಕಟಿಸಬಹುದಾಗಿತ್ತು. ಆದರೆ, ಅವರು ಹಾಗೆ ಮಾಡದೆ, ಹಿಂದೆ ಪ್ರವಾದಿಗಳನ್ನು ಆಯಾ ಕಾಲದ ಎದುರಾಳಿಗಳು ಪರಿಹಾಸ್ಯ ಮಾಡಿ ನಿಂದಿಸಿ ಮಾತನಾಡಿದಂತೆ ಅಸಭ್ಯ ಶೈಲಿಯನ್ನು ಬಳಸಿಕೊಂಡು, ಕೆಲವೊಮ್ಮೆ ಪ್ರಶ್ನೋತ್ತರ ವಿಭಾಗದಲ್ಲಿ, ಮತ್ತೆ ಕೆಲವೊಮ್ಮೆ ಇತರರ ಬಗ್ಗೆ ಲೇಖನ ಬರೆಯುವಾಗ ಅನಗತ್ಯವಾಗಿ ಆದರೆಡೆಯಲ್ಲಿ ಸೇರಿಸಿಯೂ ಆಕ್ಷೇಪಿಸಿ ಬರೆದಿದ್ದಾರೆ. ಅಹ್ಮದಿಯಾ ಜಮಾಅತ್ ಹೊಂದಿರುವ ವಿಶ್ವಾಸಾ ದರ್ಶಗಳ ಕುರಿತು ಫೈಝಿಯವರು ಏನೊಂದು ಚರ್ಚೆಯನ್ನೂ ಮಂಡಿಸದೆ ಇರುವುದರಿಂದ ಆ ಬಗ್ಗೆ ನಾನು ಸಹ ಇಲ್ಲಿ ಏನನ್ನೂ ಹೇಳಬಯಸುವುದಿಲ್ಲ. ಆದರೆ, ಲೋಕದ ಸಮಸ್ತ ಮುಸ್ಲಿಂ ಪಂಡಿತರೂ ಒಮ್ಮತಾಭಿಪ್ರಾಯದಿಂದ ಹಝ್ರತ್ ಅಹ್ಮದ್‌ರನ್ನೂ ಅವರನ್ನು ಇಮಾಂ ಮಹ್‌ದಿಯಾಗಿ ಸ್ವೀಕರಿಸಿದ ಅಹ್ಮದೀಯರನ್ನೂ "ಕಾಫಿರ್" ಎಂದು ತೀರ್ಮಾನಿಸಿ ಫತ್ವಾ ಹೊರಡಿಸಿದ್ದಾರೆಂದು ಸಂಪಾದಕರು ಹೇಳಿದ ಕುರಿತು ಸ್ವಲ್ಪ ಇಲ್ಲಿ ವಿವರಿಸಬೇಕಾಗಿದೆ.

ಇಮಾಂ ಮಹ್‌ದಿಯವರ ಆಗಮನ ಕಾಲದಲ್ಲಿ ತನ್ನ ಸಮುದಾಯದವರಾದ ಮುಸಲ್ಮಾನರ ಅವನತಿ ಮತ್ತು ದುಃಸ್ಥಿತಿಯ ಕುರಿತು ಹಝ್ರತ್ ಪೈಗಂಬರ್(ಸ)ರವರು ಬಹಳವಾಗಿ ವಿವರಿಸಿ ಹೇಳಿರುವರು. ಆ ಸಂಬಂಧವಾಗಿ ಪೈಗಂಬರರು ನೀಡಿರುವ ಒಂದು ಪ್ರಸ್ತಾವನೆ ತಿರ್‌ಮದಿಯಲ್ಲಿ ಈ ರೀತಿ ಉಲ್ಲೇಖಿತವಾಗಿದೆ :

''ಇಸ್ರಾಈಲ್ ಸಂತತಿಗಳು 72 ಪಂಗಡಗಳಾಗಿ ವಿಭಜಿಸಲ್ಪಟ್ಟರು; ಆದರೆ ನನ್ನ ಅನುಯಾಯಿಗಳು 73 ಪಂಗಡಗಳಾಗಿ ಒಡೆದು ಹೋಗುವರು. ಅವರಲ್ಲಿ ಒಂದು ಪಂಗಡದ ಹೊರತು ಉಳಿದ ಪಂಗಡಗಳೆಲ್ಲ ನರಕಕ್ಕೆ ಹೋಗುವವು."

ಹಾಗೆ, ಇಮಾಂ ಮಹ್‌ದಿಯವರ ಆಗಮನ ಕಾಲದಲ್ಲಿ ಮುಸಲ್ಮಾನರೆಡೆಯಲ್ಲಿ ಅನೇಕಾನೇಕ ಪಂಗಡಗಳೂ ಪಕ್ಷದವರೂ ವಿಭಾಗಗಳೂ ಇದ್ದರೂ ಅವರೆಲ್ಲರೂ ಪರಸ್ಪರ ಭಿನ್ನಾಭಿಪ್ರಾಯ ಹೊಂದಿಕೊಂಡು ತಮ್ಮ ತಮ್ಮೊಳಗೆ ಕಚ್ಚಾಡಿ ಅನ್ಯೋನ್ಯ 'ಕಾಫಿರ್', 'ಕುಫ್ರ್' 'ಮುಶ್ರಿಕ್' ಎಂದು ಫತ್ವಾ ನೀಡುತ್ತಾ ಹೊಡೆದಾಡುವವರಾದರೂ ಅಲ್ಲಾಹನಿಂದ ಮಾರ್ಗದರ್ಶನ ಲಭಿಸಿದ ಏಕಮಾತ್ರ ಸಂಘಟನೆಯ ಹೊರತಾಗಿ ಉಳಿದ ಎಲ್ಲವೂ ಅದಕ್ಕೆ ಎದುರಾಗಿ ಒಂದಾಗುವವರೆಂದು ಮೇಲಿನ ಹದೀಸಿನಲ್ಲಿ ಸ್ಪಷ್ಟವಾಗಿ ವಿವರಿಸಿದೆ. ಹಝ್ರತ್ ಮುಹಮ್ಮದ್ ಪೈಗಂಬರ್ (ಸ)ರವರು 73 ಪಂಗಡಗಳ ಪೈಕಿ ಒಂದು ಪಂಗಡವನ್ನು ಮಾತ್ರ ಒಂದು ಕಡೆಯಲ್ಲೂ ಇತರ ಎಲ್ಲರನ್ನು ಮತ್ತೊಂದು ಕಡೆಯಲ್ಲೂ ನಿಲ್ಲಿಸಿದ್ದಾರೆ. ಈಗ ಫೈಝಿಯವರು ಕಷ್ಟಪಟ್ಟು ವಿವರಿಸುತ್ತಿರುವುದು ಈ ಹದೀಸಿನ ಸಾಕ್ಷಾತ್ಕಾರವನ್ನಲ್ಲದೆ ಮತ್ತೇನನ್ನೂ ಅಲ್ಲ. 'ನೂತನ ವಾದಿಗಳು' 'ನೂತನ ವಾದಿಗಳು' ಎಂದು ಎದೆಬಡಕೊಳ್ಳುವ ಇವರು - "ಮೌಲಿದ್, ಔಲಿಯಾಗಳ ತವಸ್ಸುಲ್, ಮಹಾತ್ಮರ ಖಬರ್ ಝಿಯಾರತ್ ಇವೆಲ್ಲ ಶಿರ್ಕ್ ಎಂದೂ ಅದು ಮಾಡುವ ಸುನ್ನಿಗಳೆಲ್ಲರೂ ಕಾಫಿರರೆಂದೂ ನೂತನವಾದಿಗಳು ವಾದಿಸುತ್ತಿದ್ದರೂ" ನೂತನ ವಾದಿಗಳನ್ನು ಕಾಫಿರ್ ಎಂದು ಸುನ್ನಿಗಳು ಹೇಳುತ್ತಿಲ್ಲ ಎಂದು ಬರೆಯುವಾಗ ಕಾದಿಯಾನಿಗಳನ್ನು ಮಾತ್ರ ಆದರಿಂದ ಹೊರತುಪಡಿಸಿದ್ದಾರೆ. (ಅಲ್-ಅನ್ಸಾರ್ ಸಂ - 2 ಸಂಚಿಕೆ 18). ಅಂದರೆ, ನೂತನವಾದಿಗಳು ಸುನ್ನಿಗಳನ್ನು ಕಾಫಿರ್ ಎಂದು ಹೇಳಿದರೂ ಸರಿ, ಕಾದಿಯಾನಿಗಳನ್ನು ಒಂಟಿಗೊಳಿಸುವ ಉದ್ದೇಶದಿಂದ ಆ ನೂತನವಾದಿಗಳ ಜತೆ ಸ್ನೇಹ ಬೆಳೆಸಿಕೊಳ್ಳಲು ಇವರು ತಯಾರಿದ್ದಾರೆ. ಕಾದಿಯಾನಿಗಳು ಮಾತ್ರ ಸಂಪೂರ್ಣ ಪ್ರತ್ಯೇಕಗೊಂಡ ಒಂಟಿಯಾದ ಒಂದು ಪಂಗಡ! ಹಝ್ರತ್ ಮುಹಮ್ಮದ್ ಪೈಗಂಬರ್ (ಸ)ರವರ ಭವಿಷ್ಯವಾಣಿ ಎಷ್ಟು ಆಶ್ಚರ್ಯಕರ ರೀತಿಯಲ್ಲಿ ಪೂರ್ತಿಯಾಗಿದೆ!

ಅಲ್-ಅನ್ಸಾರ್ ಪತ್ರಿಕೆಯ 'ಕೇಳಿ ನೋಡಿ' ವಿಭಾಗದಲ್ಲಿ ಪ್ರಕಟವಾದ ಕೆಲವು ಪ್ರಶ್ನೆಗಳಿಗೆ ಸಂಪಾದಕರು ನೀಡಿರುವ ಉತ್ತರಗಳನ್ನು ನೋಡುವಾಗ ಇವರಿಗೆ ಹಝ್ರತ್ ಅಹ್ಮದ್ (ಅ) ಅವರ ಬಗ್ಗೆಯಾಗಲೀ ಅಹ್ಮದಿಯಾ ಜಮಾಅತಿನ ಕುರಿತಾಗಲೀ ಏನೂ ಜ್ಞಾನವಿಲ್ಲವೆಂದು ವ್ಯಕ್ತವಾಗುತ್ತದೆ. ಹಝ್ರತ್ ಅಹ್ಮದ್ (ಅ) ಬರೆದಿರುವ ಗ್ರಂಥಗಳ ಹೊರ ಕವಚವನ್ನು ಕೂಡ ಇವರು ನೋಡಿರಲಾರರು. ಆ ಮಹಾತ್ಮರು ಬರೆದಿರುವ

ಕೃತಿಗಳನ್ನು ನಿಷ್ಪಕ್ಷವಾಗಿ ಇವರು ಅಧ್ಯಯನ ಮಾಡಿರುತ್ತಿದ್ದರೆ, ಇಸ್ಲಾಂ ಧರ್ಮದ ಕುಂದಿ ಹೋದ ಕಾಂತಿಯನ್ನು ಬೆಳಗಿಸಲಿಕ್ಕಾಗಿಯೂ ಹಝ್ರತ್ ಮುಹಮ್ಮದ್ ಪೈಗಂಬರ್ (ಸ)ರವರ ದಿವ್ಯ ಪ್ರಭೆಯನ್ನೂ ಆಧ್ಯಾತ್ಮಿಕ ಸಜೀವತ್ವವನ್ನೂ ಸಾಬೀತು ಪಡಿಸಲಿಕ್ಕಾಗಿಯೂ ತದ್ವಾರಾ ಲೋಕದ ಜನರನ್ನು ಯಥಾರ್ಥ ಇಸ್ಲಾಂ ಧರ್ಮದ ಪತಾಕೆಯ ಕೆಳಗೆ ಒಂದುಗೂಡಿಸಲು ಅಲ್ಲಾಹನಿಂದ ನಿಯೋಜಿತರಾದ ಆ ಮಹಾತ್ಮರ ಬಗ್ಗೆ ಅವರು ಅಸಭ್ಯ ರೀತಿಯಲ್ಲಿ ಬರೆಯುತ್ತಿರಲಿಲ್ಲ. ತಾನೋರ್ವ ಇಸ್ಲಾಂ ಧರ್ಮ ಪಂಡಿತನೆಂದು ಫೈಝಿಯವರು ಹೇಳಿಕೊಳ್ಳುತ್ತಿದ್ದಾರೆ. ಅವರು ಒಂದು ವಾರಪತ್ರಿಕೆಯ ಸಂಪಾದಕರೂ ಆಗಿದ್ದಾರೆ. ಹಾಗಿದ್ದೂ ಅವರು ಇಸ್ಲಾಂ ಧರ್ಮದ ಪಾವನವಾದ ತತ್ವಗಳನ್ನು ಕಡೆಗಾಲಿನಿಂದ ತುಳಿದುಕೊಂಡು ಹಾಗೂ ಪತ್ರಿಕಾ ಧರ್ಮವನ್ನು ಸಹ ಕಳಂಕಗೊಳಿಸಿ, ಇಂದು ಪ್ರಪಂಚದಲ್ಲಿ ಒಂದು ಕೋಟಿಗಿಂತಲೂ ಹೆಚ್ಚು ಜನರು ಆದರಿಸುತ್ತಿರುವ ಓರ್ವ ಮಹಾತ್ಮರನ್ನು ಪದೇ ಪದೇ ಏಕ ವಚನದಿಂದ ಬರೆದಿರುತ್ತಾರೆ. ಆ ಪತ್ರಿಕೆಯ ಉದ್ಧರಣೆಗಳನ್ನು ನಾನಿಲ್ಲಿ ಉಲ್ಲೇಖಿಸ ಬಯಸುವುದಿಲ್ಲವಾದರೂ ಅವರ ಸಂಸ್ಕೃತಿಯು ಯಾವ ಮಟ್ಟದ್ದೆಂದು ಓದುಗರು ತಿಳಿಯಬಯಸು ವರಾದರೆ, ಒಂದು ಪ್ರಶ್ನೆಗೆ ಅವರು ನೀಡಿದ ಉತ್ತರಲ್ಲಿ ಒಂದು ವಾಕ್ಯ ಈ ರೀತಿಯಿತ್ತು : "ಮಿರ್ಝಾ ಗುಲಾಮನು ಇತ್ತೀಚೆಗೆ ಅಂದರೆ 1835ರಲ್ಲಿ ಪಂಜಾಬಿನಲ್ಲಿ ಹುಟ್ಟಿ 1980ರಲ್ಲಿ ಸತ್ತು ಹೋದವನು" (ಅಲ್ ಅನ್ಸಾರ್ ಡಿ. 10-16, 1992). ವಾಗ್ದತ್ತ ಮಸೀಹರ ಕುರಿತು ವಾಚಕರ ಮನಸ್ಸಿನಲ್ಲಿ ಜಿಗುಪ್ಸೆಯನ್ನೂ ಕೀಳು ಭಾವನೆಯನ್ನೂ ಮೂಡಿಸಲು ತನ್ನ ಲೇಖನಿಯನ್ನು ಬಳಸಿದ ಸಾಲೆತ್ತೂರು ಅಬೂಬಕ್ಕರ್ ಫೈಝಿಯವರಿಗೆ ಕನಿಷ್ಠ ಹಝ್ರತ್ ಇಮಾಂ ಮಹ್‌ದಿಯವರ ಪೂರ್ಣ ನಾಮವನ್ನಾದರೂ ಬರೆಯುವ ಭಾಗ್ಯವನ್ನು ಅಲ್ಲಾಹನು ಕರುಣಿಸದೆ ಹೋದದ್ದು ದೌರ್ಭಾಗ್ಯವೇ ಸರಿ. ಅಲ್ಲಾಹನು ಅವರಿಗೆ ಸದ್ಬುದ್ಧಿ ನೀಡಲಿ ಎಂದು ನಾವು ಪ್ರಾರ್ಥಿಸುತ್ತೇವೆ.

ಫೈಝಿಯವರೇ, ನಿಶ್ಚಯವಾಗಿಯೂ ಅಹ್ಮದಿಯಾ ಸಂಘಟನೆ ಒಂದು ದೈವಿಕ ಜಮಾಅತ್ ಆಗಿದೆ. ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ (ಅ) ಅಲ್ಲಾಹನಿಂದ ನಿಯೋಜಿತರಾದ ಇಮಾಂ ಮಹ್‌ದಿಯೂ ಮುಸ್ಲಿಂ ಸಮುದಾಯಕ್ಕೆ ವಾಗ್ದಾನ ಮಾಡಲ್ಪಟ್ಟ ಮಸೀಹರೂ ಆಗಿದ್ದಾರೆ. ಆದುದರಿಂದ ಆ ಮಹಾತ್ಮರನ್ನು ನಿಂದಿಸಲಿಕ್ಕೂ ಅಪಮಾನಿಸಲಿಕ್ಕೂ ನೀವು ಮುಂದಾಗಬೇಡಿರಿ. ಅವರನ್ನು ಓರ್ವ ಕಳ್ಳ ಪ್ರವಾದಿಯೆಂದು ಪ್ರಚಾರ ಮಾಡುತ್ತಾ ಅಲ್ಲಾಹನ ಶಾಪಕ್ಕೆ ಗುರಿಯಾಗದಿರಿ. ಅಲ್ಲಾಹನಿಗೆ ಭಯಪಡಿರಿ. ಅಲ್ಲಾಹನನ್ನು ನೆನಸಿ, ಪವಿತ್ರ ಖುರ್‌ಆನ್ ಹಾಗೂ ಹಿಂದೆ ಆಗಿಹೋಗಿರುವ ಸತ್ಯಾತ್ಮರಾದ ಪ್ರವಾದಿಗಳ ಚರಿತ್ರೆಯ ಆಧಾರದಲ್ಲಿ ಇಮಾಂ ಮಹ್‌ದಿಯವರ ಸತ್ಯತೆಯನ್ನು ಪೂರ್ವಾಗ್ರಹ ಮುಕ್ತರಾಗಿ ಸಮಾಧಾನದಿಂದ ಅವಲೋಕಿಸಿ ನೋಡಿರಿ – ಅಲ್ಲಾಹನು ನಿಮಗೆ ಸತ್ಯಪಥ ತೋರಿಸಿ ಕೊಡಲಿ - ಆಮೀನ್.

ಕೊನೆಯದಾಗಿ ಒಂದು ಮಾತು. ಯಾರು ತಮ್ಮ ಮೊಂಡುತನದಲ್ಲೇ ಅಂಟಿನಿಂತು ಅಲ್ಲಾಹನು ಕಳುಹಿಸಿದ ದಿವ್ಯ ದೂತರನ್ನು ಸುಳ್ಳಾಗಿಸುವರೋ; ನಿಂದಿಸುವ ಮತ್ತು ವಿರೋಧಿಸುವ ದುಷ್ಟ ಕೃತ್ಯಗಳನ್ನು ಯಾರು ನಿಲ್ಲಿಸುವುದಿಲ್ಲವೋ ಅಂಥವರಿಗೆ ಪರಾಜಯವು ಕಟ್ಟಿಟ್ಟ ಬುತ್ತಿಯಾಗಿದೆ ಎಂಬುದನ್ನು ಅವರು ತಿಳಿದಿರಲಿ. ಯಾಕೆಂದರೆ, ಅಲ್ಲಾಹನ ಪ್ರವಾದಿಗಳನ್ನು ವಿರೋಧಿಸಿ ಯಾರು ಸಹ ವಿಜಯಗಳಿಸಿದ ಉದಾಹರಣೆಯಿಲ್ಲ. ಅಹ್ಮದಿಯಾ ಜಮಾಅತಿನ 100 ವರ್ಷಗಳ ಚರಿತ್ರೆ ಕೂಡ ಇದಕ್ಕೆ ಸಾಕ್ಷಿಯಾಗಿದೆ. ವಿರೋಧಿಗಳು ಏನನ್ನು ಹೇಳಿ ನಿಂದಿಸುವರೋ ಅದನ್ನೇ ಅಲ್ಲಾಹನು ಅವರ ಕೊರಳಿಗೆ ಉರುಳಾಗಿ ಮಾಡುತ್ತಾನೆ. ಅಹ್ಮದಿಯ್ಯತನ್ನು ನಿರ್ಮೂಲನ ಗೊಳಿಸಲು ಎದ್ದುನಿಂತ ಅತಿರಥ ಮಹಾರಥರೆಲ್ಲ ವಿಳಾಸವಿಲ್ಲದಂತೆ ನಾಶಹೊಂದಿರುವುದನ್ನು ನಾವು ಕಂಡಿದ್ದೇವೆ. ಹಝ್ರತ್ ಅಹ್ಮದ್ (ಅ)ರನ್ನು ಅಪಮಾನಿಸಲು ಹೊರಟವರು ಸ್ವಯಂ ನಿಂದ್ಯರೂ ನಿಕೃಷ್ಟರೂ ಆಗಿ ನಾಶ ಹೊಂದಿದ್ದಾರೆ. ಅಹ್ಮದಿಯಾ ಜಮಾಅತಿನ ಸ್ಥಾಪಕರು ಹೇಳುತ್ತಾರೆ:-

"ಎಲೈ ಜನರೇ, ಇದು ಅಲ್ಲಾಹನಿಂದ ಸ್ಥಾಪಿಸಲ್ಪಟ್ಟಿರುವ ಒಂದು ಜಮಾಅತ್ ಆಗಿದೆ.

ಆದುದರಿಂದ ನೀವು ಅಲ್ಲಾಹನೊಡನೆ ಹೋರಾಡಲು ಮುಂದಾಗಬೇಡಿರಿ. ಅವನನ್ನು ಹಾನಿಗೊಳಿಸಲು ನಿಮ್ಮಿಂದ ಎಂದಿಗೂ ಸಾಧ್ಯವಿಲ್ಲ. ಅವನ ವಚನವೇ ಯಾವತ್ತೂ ಎಲ್ಲಕ್ಕಿಂತಲೂ ಮಹತ್ತರವಾಗಿರುವುದು......... ನಿಮಗೆ ನೀವೇ ಹಾನಿಯನ್ನುಂಟುಮಾಡದಿರಿ. ನಿಮ್ಮ ಒಳಿತಿಗಾಗಿಯೇ ಅಲ್ಲಾಹನು ಕರುಣೆಯಿಂದ ನೀಡಿರುವ ಈ ಜಮಾಅತನ್ನು ನೀವು ತಾತ್ಸಾರ ಭಾವನೆಯಿಂದ ನೋಡಬೇಡಿರಿ. ನಿಶ್ಚಯವಾಗಿಯೂ ತಿಳಿದುಕೊಳ್ಳಿರಿ; ಇದೊಂದು ಮನುಷ್ಯ ನಿರ್ಮಿತ ಯೋಜನೆಯಾಗಿರುತ್ತಿದ್ದು, ಅದೃಶ್ಯವಾದ ಅಲ್ಲಾಹನ ಕೈಗಳು ಇದಕ್ಕೆ ಸಹಾಯ ನೀಡುತ್ತಿಲ್ಲವಾಗಿದ್ದರೆ, ಇದು ಎಂದೋ ನಾಶವಾಗಿ ಹೋಗುತ್ತಿತ್ತು. ಕಳ್ಳವಾದಿಯ ಕಥೆಯೂ ಅಷ್ಟೇ. ಈಗ ಅವನ ಅಸ್ಥಿ ಕೂಡ ಬಾಕಿ ಉಳಿಯದ ರೀತಿಯಲ್ಲಿ ಅಲ್ಲಾಹನು ಅವನನ್ನು ಶೀಘ್ರನಾಶಕ್ಕೆ ಗುರಿ ಮಾಡುತ್ತಿದ್ದನು. ಆದುದರಿಂದ ನೀವು ನಿಮ್ಮ ವಿರೋಧದ ವರ್ತನೆಗಳನ್ನೆಲ್ಲಾ ಒಮ್ಮೆ ಪುನಃ ಪರಿಶೀಲಿಸಿ ನೋಡಿರಿ. ಕಡಿಮೆ ಪಕ್ಷ ನಿಮಗೆ ತಪ್ಪು ಸಂಭವಿಸಿದೆಯೇ ಎಂದೂ ನಿಮ್ಮ ಈ ಯುದ್ಧವು ಅಲ್ಲಾಹನೊಡನೆ ಆಗಿ ಹೋಯಿತೇ ಎಂದೂ ನಿಮ್ಮ ಈ ಯುದ್ಧವು ಅಲ್ಲಾಹನೊಡನೆ ಆಗಿ ಹೋಯಿತೇ ಎಂದೂ ನೀವೊಮ್ಮೆ ಸಮಾಧಾನದಿಂದ ಆಲೋಚಿಸಿ ನೋಡಿರಿ!" (ಅರ್‌ಬಈನ್ - ರೂಹಾನಿ ಖಝಾಇನ್ ಸಂ - 17 ಪುಟ - 456)


## ಬೇಗನೆ ಪ್ರಕಾಶಗೊಳ್ಳಲಿದೆ -

# ಇಸ್ಲಾಂ ಧರ್ಮ ತತ್ವಜ್ಞಾನ

- ☐ ಮಾನವನ ಶಾರೀರಿಕ, ನೈತಿಕ ಮತ್ತು ಆಧ್ಯಾತ್ಮಿಕ ಸ್ಥಿತಿಗಳು
- ☐ ಮಾನವನ ಮರಣಾನಂತರ ಸ್ಥಿತಿ
- ☐ ಮಾನವನ ಐಹಿಕ ಜೀವಿತೋದ್ದೇಶ ಮತ್ತು ಅದನ್ನು ಗಳಿಸುವ ಮಾರ್ಗಗಳು
- ☐ ಧರ್ಮನಿಯಮಾನುಸರಣೆ ಇಹ ಪರ ಜೀವಿತದಲ್ಲಿ ಉಂಟು ಮಾಡುವ ಫಲಗಳು
- ☐ ದೈವಿಕ ಜ್ಞಾನ ಸಿದ್ಧಿಯ ಮಾರ್ಗಗಳು

ಈ ವಿಷಯಗಳನ್ನು ಪ್ರತಿಪಾದಿಸುವ ಒಂದು ಉತ್ಕೃಷ್ಟ ಕೃತಿ.

*ಗ್ರಂಥಕರ್ತ* : ಹಝ್ರತ್ ಮಿರ್ಝಾ ಗುಲಾಂ ಅಹ್ಮದ್

**ಬೆಲೆ** : ರೂ. 25 **ಅಂಚೆವೆಚ್ಚ**: ರೂ. 1.50

*ವ್ಯವಹರಿಸಿರಿ* : ಜಮಾಅತ್ ಅಹ್ಮದಿಯಾ,
10-23-1008/1, ಅನ್ಸಾರಿ ರೋಡ್, ಮಂಗಳೂರು - 575 001.

# ಮಸೀದಿ ಒಡೆಯುವ ಮುಸಲ್ಮಾನರು !

* ಐ. ಅಬ್ದುಲ್ಲಾ

ಮುಸಲ್ಮಾನರು ಮಸೀದಿಗಳನ್ನು ಒಡೆಯುತ್ತಾರೆಯೇ? ಅದೂ ಅವುಗಳನ್ನು ಅಪವಿತ್ರಗೊಳಿಸಿ ಭಗ್ನಗೊಳಿಸುವ ಉದ್ದೇಶದಿಂದ? ಏನಿದು ವೈಪರೀತ್ಯ ಎಂದು ಹುಬ್ಬೇರಿಸಬೇಡಿ. ಪಾಕಿಸ್ಥಾನವೆಂಬ ಮುಸ್ಲಿಂ ರಾಷ್ಟ್ರದಲ್ಲಿ ಆ ರೀತಿ ನಡೆಯುತ್ತಿದೆ. ಇದೀಗ ಈ ದೌರ್ಭಾಗ್ಯದ ಹಾದಿಯಲ್ಲಿ ಬಾಂಗ್ಲಾ ದೇಶವೂ ಹೆಜ್ಜೆಯಿಡುತ್ತಿದೆ!

ಆರಾಧನಾಲಯಗಳು ಯಾವ ಧರ್ಮೀಯರ ದ್ವಾರೂ ಅವುಗಳನ್ನು ಗೌರವಿಸಬೇಕಾದುದು ಹಾಗೂ ಅವುಗಳನ್ನು ಸಂರಕ್ಷಿಸಬೇಕಾದುದು ಧರ್ಮಾನುಯಾಯಿಗಳ ಕರ್ತವ್ಯ. ಆರಾಧನಾಲಯಗಳ ಪವಿತ್ರತೆಯನ್ನು ಕಾಪಾಡುವಂತೆಯೂ ಅವುಗಳನ್ನು ದುಷ್ಕರ್ಮಿಗಳ ಆಕ್ರಮಣದಿಂದ ರಕ್ಷಿಸುವಂತೆಯೂ ಇಸ್ಲಾಂ ಧರ್ಮವು ಅದರ ಅನುಯಾಯಿಗಳಿಗೆ ಬೋಧಿಸಿದೆ. ಸರ್ವಾಂಗೀಕೃತವಾದ ಈ ತತ್ವದ ಆಧಾರದಲ್ಲಿ, ಅಯೋಧ್ಯೆಯ ಬಾಬರಿ ಮಸೀದಿಯು ಕೆಡವಲ್ಪಟ್ಟಿರುವುದನ್ನು ನಾವು ಬಲವಾಗಿ ಖಂಡಿಸುತ್ತೇವೆ. ಕಳೆದ ಡಿಸೆಂಬರ್ 6ರಂದು ಅಯೋಧ್ಯೆಯಲ್ಲಿ ನಡೆದುದು ಅತ್ಯಂತ ಘೋರ ಅಪರಾಧವೂ ಧರ್ಮ ಬಾಹಿರ ಕೃತ್ಯವೂ ಅತಿ ನೀಚವಾದ ಕೆಲಸವೂ ಆಗಿತ್ತೆಂದು ಹೇಳುವ ಸಮಸ್ತ ಶಾಂತಿಪ್ರಿಯ ಸಹೃದಯಿಗಳ ಧ್ವನಿಯೊಂದಿಗೆ ನಾವು ಸಹ ಧ್ವನಿಗೂಡಿಸುತ್ತೇವೆ. ಖಂಡಿತವಾಗಿಯೂ ನಮ್ಮ ಈ ಭಾರತದ ಮಣ್ಣಿನಲ್ಲಿ ಆ ರೀತಿ ಸಂಭವಿಸಬಾರದಾಗಿತ್ತು.

ಆದರೆ, ಅದಕ್ಕಿಂತಲೂ ಹೇಯವಾದ ಕೆಲಸವನ್ನು ಮುಸಲ್ಮಾನರು ಮಾಡಲು ಮುಂದಾದುದು ಅತ್ಯಂತ ದೌರ್ಭಾಗ್ಯವೇ ಸರಿ. ಮಸೀದಿಯನ್ನು ಒಡೆದುದಕ್ಕೆ ಪ್ರತೀಕಾರವಾಗಿ ದೇವಾಲಯ, ಗುರುದ್ವಾರ ಮೊದಲಾದ ಇತರರ ಆರಾಧನಾಲಯಗಳನ್ನು ಭಗ್ನಗೊಳಿಸುವ ಕೃತ್ಯವನ್ನು ಯಾವ ಕಾರಣದಿಂದಲೂ ನ್ಯಾಯವೆಂದು ಸಮರ್ಥಿಸಲು ಸಾಧ್ಯವಿಲ್ಲ. ಅದು ಇಸ್ಲಾಂ ಧರ್ಮೋಪದೇಶಗಳಿಗೆ ತೀರಾ ವಿರುದ್ಧವಾದ ಕೃತ್ಯವಾಗಿದೆ. ಭಾರತದ ಒಳಗೂ ಹೊರಗೂ ಮುಸಲ್ಮಾನರಿಂದ ಈ ರೀತಿಯ ಪ್ರತಿಕ್ರಿಯೆ ಗೋಚರವಾದುದು ಅತ್ಯಂತ ದೌರ್ಭಾಗ್ಯಪೂರ್ಣ ಸಂಗತಿಯಾಗಿದೆ.

ಇದಕ್ಕಿಂತಲೂ ಆಶ್ಚರ್ಯಕರ ಸಂಗತಿಯೆಂದರೆ ಮುಸಲ್ಮಾನರೇ ಮಸೀದಿಗಳನ್ನು ಭಗ್ನಗೊಳಿಸುತ್ತಿರುವುದು. ಪಾಕಿಸ್ಥಾನದಲ್ಲಿ ಭುಟ್ಟೋ ಆಡಳಿತವಿದ್ದಾಗ 1974ರಲ್ಲಿ ಅಹ್ಮದಿಯಾ ಪಂಗಡದ ಮುಸ್ಲಿಮರನ್ನು 'ಮುಸ್ಲಿಮರಲ್ಲ' ಎಂದು ಸಂವಿಧಾನ ತಿದ್ದುಪಡಿ ಮೂಲಕ ಘೋಷಿಸಿದ ನಂತರ ಈ ವರೆಗೆ ಅಲ್ಲಿ ಅಹ್ಮದಿಯಾ ಮುಸ್ಲಿಮರಿಗೆ ಸೇರಿದ ಅನೇಕ ಮಸೀದಿಗಳನ್ನು ಪೂರ್ಣವಾಗಿಯೂ ಆಂಶಿಕವಾಗಿಯೂ ನಾಶಗೊಳಿಸಲಾಗಿದೆ. ಭುಟ್ಟೋ ಪತನದ ಬಳಿಕ ಅಧಿಕಾರ ನಡೆಸಿದ ಜಿಯಾವುಲ್ ಹಕ್‌ರ ಕಾಲದಲ್ಲಿ ಅಹ್ಮದೀಯರನ್ನು ಮತ್ತೂ ಹೆಚ್ಚಿನ ಹಿಂಸೆಗೆ ಗುರಿಪಡಿಸಲಾಗಿತ್ತು. ಈಗ ಜಿಯಾ ಧ್ವಂಸಗೊಂಡ ನಂತರ ಸಹ ಪಾಕಿಸ್ತಾನದಲ್ಲಿ ಅದೇ ಸ್ಥಿತಿ ಮುಂದುವರಿಯುತ್ತಿದೆ. ಅಲ್ಲಿ ಮೂಲಭೂತವಾಗಿ ಮುಲ್ಲಾಗಳ ದುರ್ಬೋಧನೆಗೆ ಬಲಿ ಬಿದ್ದು ಮತಾಂಧ ಮುಸ್ಲಿಂ ಬಹುಸಂಖ್ಯಾತರು ಸರಕಾರದ ಪೂರ್ಣ ಬೆಂಬಲದೊಂದಿಗೆ ಅಹ್ಮದೀಯರೊಡನೆ ಅತಿ ಕಠಿಣವಾಗಿ ವರ್ತಿಸುತ್ತಿದ್ದಾರೆ. ಅಹ್ಮದಿಯಾ ಮುಸ್ಲಿಂ ಪಂಗಡದವರ ಪ್ರಾಣಕ್ಕೂ ಸ್ವತ್ತಿಗೂ ಅವರ ಮಸೀದಿಗಳಿಗೂ ಹಾನಿ ತರುವ ಕೃತ್ಯದಲ್ಲಿ ಅಲ್ಲಿನ ಜಮಾತೆ ಇಸ್ಲಾಮಿ ಸಂಘದವರು ಮುಂಚೂಣಿಯಲ್ಲಿದ್ದಾರೆ. ಭಾರತದಲ್ಲಿ ಬಾಬರಿ ಮಸೀದಿ ಕೆಡವಲ್ಪಟ್ಟಿರುವುದನ್ನು ಪ್ರತಿಭಟಿಸುತ್ತಿರುವ ಈ ಜಮಾತೆ ಇಸ್ಲಾಮಿ, ಎಸ್.ಐ.ಓ. ಸಂಘಟನೆ ಮತ್ತು ಇತರ ಮುಸ್ಲಿಂ ಉಲಮಾಗಳೂ ನೇತಾರರೂ ತಮ್ಮ ಸ್ವಂತ ಕೃತ್ಯಗಳೆಡೆಗೆ ಒಮ್ಮೆ ತಿರುಗಿ ನೋಡದೆ ಇರುವುದು ಆಶ್ಚರ್ಯವೇ ಸರಿ. ಲೋಕದೆಲ್ಲೆಡೆ ಇರುವ ಮುಸ್ಲಿಂ ನೇತಾರರೂ ಉಲಮಾಗಳೂ ಬಾಬರಿ ಮಸೀದಿಯ ಕುರಿತು ಪ್ರಲಾಪಿಸುತ್ತಿರುವರಾದರೂ ಅವರ ಸಮುದಾಯದವರು ಮಾಡುತ್ತಿರುವ ದುಷ್ಕೃತ್ಯಗಳ ಕುರಿತು ಅದರಲ್ಲೂ ವಿಶೇಷವಾಗಿ ಪಾಕಿಸ್ಥಾನ ಮತ್ತು ಬಾಂಗ್ಲಾದೇಶದ ಸ್ಥಿತಿಗತಿಗಳ ಕುರಿತು ಅವರು ಆಲೋಚಿಸುವುದೇ ಇಲ್ಲ. ಅಲ್ಲಿ ಅನ್ಯರ

ಆರಾಧನಾಲಯಗಳೊಡನೆ ಯಾವ ರೀತಿ ವರ್ತಿಸಲ್ಪಡುತ್ತಿದೆಯೆಂದು ಅವರು ನೋಡುವುದಿಲ್ಲ.

ಭಾರತ ಸರಕಾರವು ಇತರ ದೇಶಗಳ ಸರಕಾರಗಳಿಗಿಂತ ಹೆಚ್ಚು ನ್ಯಾಯನಿಷ್ಠೆ ಮತ್ತು ಕರ್ತವ್ಯ ಪ್ರಜ್ಞೆಯಿಂದ ವರ್ತಿಸುತ್ತಿದೆ ಎಂಬುದರಲ್ಲಿ ಸಂಶವಿಲ್ಲ. ಕಾರಣಾಂತರದಿಂದ ಸಂಭವಿಸಿಹೋದ ಅನಾಹುತದಲ್ಲಿ ಭಾರತ ಸರಕಾರಕ್ಕೆ ಕನಿಷ್ಠಪಕ್ಷ ಪಶ್ಚಾತ್ತಾಪ ಪ್ರಜ್ಞೆಯಾದರೂ ಇದೆ. ಆಗಿ ಹೋದ ತಪ್ಪನ್ನು ಸರಿಪಡಿಸಿ ನೊಂದವರಿಗೆ ನ್ಯಾಯ ದೊರಕಿಸಿಕೊಡುವ ನಿಟ್ಟಿನಲ್ಲಿ ಭಾರತ ಸರಕಾರ ಪ್ರಯತ್ನಿಸುತ್ತಲೂ ಇದೆ. ಭಾರತದಲ್ಲಿ ಬಹುಸಂಖ್ಯಾತರು ಹಿಂದೂ ಧರ್ಮೀಯರಾದರೂ ಅಲ್ಪಸಂಖ್ಯಾತ ಮುಸ್ಲಿಂ ಸಮುದಾಯಕ್ಕೆ ಸಂಭವಿಸಿದ ನೋವಿನಲ್ಲಿ ಕೋಟ್ಯಾಂತರ ಭಾರತೀಯ ಹೃದಯಗಳು ಸಹಾನುಭೂತಿ ತೋರಿಸುತ್ತಿವೆ. ಕೆಲವು ಹಿಂದೂ ತೀವ್ರವಾದಿ ಸಂಘಟನೆಗಳು ತೋಳ್ಬಲ ಪ್ರದರ್ಶನಕ್ಕೆ ಮುಂದಾಗಿರುವುದರಿಂದ ಭಾರತ ಸರಕಾರವೂ ಇಲ್ಲಿನ ಸೌಮ್ಯವಾದಿ ಶಾಂತಿ ಪ್ರಿಯ ನಾಗರಿಕರೂ ಅತ್ಯಂತ ಕ್ಲಿಷ್ಟ ಸನ್ನಿವೇಶವನ್ನು ಎದುರಿಸುತ್ತಿದ್ದಾರೆಂಬುದಂತೂ ನಿಜವೆ. ಆದರೂ, ಒಟ್ಟಾರೆ ನೋಡುವುದಾದರೆ, ಭಾರತದ ಸರಕಾರ ಮಾತ್ರವಲ್ಲ ಇಲ್ಲಿನ ಪ್ರಜೆಗಳು ಸಹ ಇತರ ಸರಕಾರಗಳಿಗಿಂತಲೂ ಜನರಿಗಿಂತಲೂ ಹೆಚ್ಚು ನ್ಯಾಯನಿಷ್ಠೆ ತೋರಿಸುತ್ತಾರೆ ಎಂಬುದನ್ನು ಮರೆಮಾಚಲು ಸಾಧ್ಯವಿಲ್ಲ.

ಬಾಬರಿ ಮಸೀದಿ ವಿಷಯದಲ್ಲಿ ಭಾರತ ಸರಕಾರದೊಡನೆ ವಿವಾದ ಮಾಡುತ್ತಿರುವ ಭಾರತೀಯ ಮುಸ್ಲಿಂ ನೇತಾರರೊಡನೆ ಹಾಗೂ ಭಾರತ ಸರಕಾರವನ್ನು ಈ ವಿಷಯದಲ್ಲಿ ಹೀಗ್ನೆಸುತ್ತಿರುವ ವಿದೇಶಿ ಮುಸ್ಲಿಂ ಧುರೀಣರೊಡನೆ, ಅವರೊಮ್ಮೆ ತಮ್ಮ ಸ್ವಂತ ಕೃತ್ಯಗಳೆಡೆಗೆ ಕಣ್ಣೋಡಿಸಲಿ ಎಂದು ನಾವು ಅಪೇಕ್ಷಿಸುತ್ತೇವೆ. ಪ್ರಪಂಚದಲ್ಲಿಡೀ ಮುಸ್ಲಿಂ ಸಮುದಾಯದ ಮೇಲೆ ಅಲ್ಲಾಹನ ಕ್ರೋಧಾಗ್ನಿಯು ವರ್ಷಿಸುತ್ತಿರುವುದರ ಕಾರಣವೇನೆಂದೂ ತಾವು ಮಾಡುತ್ತಿರುವ ಯಾವ ತಪ್ಪಿಗಾಗಿ ಸಮಸ್ತ ಸಮುದಾಯವು ಈ ರೀತಿಯಾಗಿ ಶಿಕ್ಷಿಸಲ್ಪಡುತ್ತಿದೆ ಎಂದೂ ಮುಸಲ್ಮಾನರು ಚಿಂತಿಸಬೇಕಾಗಿದೆ. 13 ಶತಮಾನಗಳಿಂದ ಮುಸ್ಲಿಮರ ಸ್ವಾಧೀನದಲ್ಲಿದ್ದ ಬೈತುಲ್ ಮುಖದ್ದಿಸ್ (ಅಲ್ ಅಖ್ಸಾ ಮಸ್ಜಿದ್) ಈಗ ಶಾಪಗ್ರಸ್ತ ಯೆದೂದ್ಯರ ಕೈವಶಕ್ಕೆ ಹೋಗಲು ಕಾರಣವೇನು? ಖಂಡಿತವಾಗಿಯೂ ಇದಕ್ಕೆಲ್ಲಾ ದಿವ್ಯವಾದ ಕಾರಣಗಳು ಇರಲೇ ಬೇಕು. ಹೌದು, ಇಸ್ಲಾಂ ಧರ್ಮದ ಪುನರುತ್ಥಾನಕ್ಕಾಗಿ ಅಲ್ಲಾಹನಿಂದ ನಿಯೋಜಿತರಾದ ವಾಗ್ದತ್ತ ಮಸೀಹ್ ಇಮಾಂ ಮಹ್‌ದಿ (ಅ)ರವರನ್ನು 'ಕಳ್ಳ ಪ್ರವಾದಿ' ಎಂದು ಸಾರಿ, ಅವರಿಂದ ಸ್ಥಾಪಿಸಲ್ಪಟ್ಟ ಅಹ್ಮದಿಯಾ ಸಂಘಟನೆಯ ಸದಸ್ಯರನ್ನು 'ಮುಸ್ಲಿಮರಲ್ಲ' ಎಂದು ಫತ್ವಾ ಹೊರಡಿಸಿ, ತಮ್ಮ ಶಕ್ತಿ ಸಾಮರ್ಥ್ಯವನ್ನೂ ಜನ ಬಲವನ್ನೂ ಭುಜ ಬಲವನ್ನೂ ಅಹ್ಮದಿಯಾ ಸಂಘಟನೆಯ ನಿರ್ಮೂಲನಕ್ಕಾಗಿ ವಿನಿಯೋಗಿಸಲು ಮುಂದಾದುವೇ ಮುಸ್ಲಿಂ ಸಮುದಾಯದ ಇಂದಿನ ಈ ದುರ್ಗತಿಗೆ ಕಾರಣ ಎಂಬುದನ್ನು ಮುಸ್ಲಿಮರು ಅರಿಯಬೇಕಾಗಿದೆ.

ಇಮಾಂ ಮಹ್‌ದಿ ಹಝ್ರತ್ ಅಹ್ಮದ್ (ಅ)ರನ್ನು ಕಳ್ಳವಾದಿ ಎಂದು ನಿರೂಪಿಸಿ ಅಹ್ಮದೀಯರನ್ನು ಅಮುಸ್ಲಿಮರು ಎಂದು ಸಾಬೀತುಪಡಿಸಲು ಹಾಗೂ ಅಹ್ಮದಿಯಾ ಸಂಘಟನೆಯನ್ನು ನಿರ್ಮೂಲ ನಾಶಗೊಳಿಸಲು ಮುಸ್ಲಿಂ ಉಲಮಾಗಳು [ಈ ಕಾಲದ ಉಲಮಾಗಳ ಕುರಿತು, ಅವರು ಸೃಷ್ಟಿ ಜಾಲದಲ್ಲೇ ಅತ್ಯಂತ ನಿಕೃಷ್ಟರು ಎಂದು ಮುಹಮ್ಮದ್ ಪೈಗಂಬರ್ (ಸ)ರವರು ಹೇಳಿದ್ದಾರೆ] ಮುಸ್ಲಿಂ ಆಡಳಿತಾಧಿಕಾರಿಗಳು ಹಾಗೂ ಅವರನ್ನು ಬೆಂಬಲಿಸಿಕೊಂಡು ಮುಸ್ಲಿಂ ಸಮುದಾಯವು ಏನೇನು ದುಷ್ಕೃತ್ಯಗಳನ್ನು ಮಾಡುತ್ತಾರೆಂಬುದು ಇಂದು ಲೋಕದ ಮುಂದೆ ಒಂದು ತೆರೆದ ಪುಸ್ತಕದಂತೆ ಇದೆ. ಇತರರು ತಮ್ಮ ಮೇಲೆ ಮಾಡಬಾರದೆಂದು ಇವರು ಬಯಸುವ ಅದೇ ದಬ್ಬಾಳಿಕೆಯನ್ನು ಅದಕ್ಕಿಂತಲೂ ರಾಕ್ಷಸೀಯ ರೀತಿಯಲ್ಲಿ ಇವರು ಅಹ್ಮದೀಯರ ಮೇಲೆ ಪ್ರಯೋಗಿಸುತ್ತಾರೆ. ಪಾಕಿಸ್ಥಾನದಲ್ಲಿ ಇವರು ಮಾಡುತ್ತಿರುವುದಾದರೂ ಏನು? ಅಲ್ಲಿ ಅಹ್ಮದೀಯರಿಗೆ ಸೇರಿದ 10 ಮಸೀದಿಗಳನ್ನು ಸಂಪೂರ್ಣ ಧ್ವಂಸ ಗೊಳಿಸಲಾಗಿದೆ. ಮುಸ್ಲಿಂ ಆಡಳಿತವೆಂದು ಹೇಳಿಕೊಳ್ಳುತ್ತಿರುವ ಪಾಕ್ ಸರಕಾರವು 19 ಮಸೀದಿಗಳಿಗೆ ಬೀಗ ಜಡಿದು ಮುದ್ರೆ ಹಾಕಿದೆ. 24 ಮಸೀದಿಗಳನ್ನು ಅಗ್ನಿಗಾಹುತಿ ಮಾಡಿ ಭಾಗಶಃ ನಾಶಪಡಿಸಲಾಗಿದೆ. ಮಸೀದಿಗಳಲ್ಲಿದ್ದ ಪವಿತ್ರ ಖುರ್‌ಆನ್ ಪ್ರತಿಗಳನ್ನೂ ಇತರ ಬೆಲೆ ಬಾಳುವ ಗ್ರಂಥಗಳನ್ನೂ ಅಪವಿತ್ರಗೊಳಿಸಿ ನಾಶಪಡಿಸಲಾಗಿದೆ. 133 ಮಸೀದಿಗಳಿಂದ ಪವಿತ್ರ

'ಕಲಿಮ'ದ ಲಿಖಿತವನ್ನು ಅಳಿಸಿ ಬಿಡಲಾಗಿದೆ. ಆದರೆ, ಇದು ವರೆಗೂ ಪಾಕಿಸ್ಥಾನದ ಇಸ್ಲಾಮಿಕ್ ಸರಕಾರಕ್ಕೆ ಈ ಮಸೀದಿಗಳಲ್ಲಿ ಒಂದನ್ನಾದರೂ ಅದರ ಪೂರ್ವಸ್ಥಿತಿಗೆ ತರಲು ಸಾಧ್ಯವಾಗಲಿಲ್ಲ. ಅಥವಾ ಅದರ ಹಕ್ಕುದಾರರಾದ ಅಹ್ಮದಿಯಾ ಜಮಾಅತಿಗೆ ಅವುಗಳನ್ನು ಮರಳಿಸಿಕೊಡುವ ಸಹೃದಯತೆಯಾದರೂ ಉಂಟಾಗಲಿಲ್ಲ. ಆ ಮಸೀದಿಗಳಿಂದ ಕೊಳ್ಳೆ ಹೊಡೆಯಲಾದ ಸಾಧನ ಸಾಮಗ್ರಿಗಳನ್ನು ಸಹ ಮರಳಿಸಲಿಲ್ಲ. ಅಷ್ಟಕ್ಕೇ ಮುಗಿಯಲಿಲ್ಲ. ಈ ದುಷ್ಟ ಪಾಕಿಸ್ಥಾನಿ ಮುಲ್ಲಾಗಳ ಪ್ರಚೋದನಾತ್ಮಕ ದುರ್ಬೋಧನೆಗಳ ಕಾರಣದಿಂದ ಇದೀಗ ಬಾಂಗ್ಲಾ ದೇಶದಲ್ಲೂ ಇದೇ ಸ್ಥಿತಿ ತಲೆಯೆತ್ತಿದೆ. ಅಲ್ಲಿ ಸಹ ಅಹ್ಮದೀಯರಿಗೆ ಸೇರಿದ ಎರಡು ಮಸೀದಿಗಳನ್ನು (ಢಾಕಾ ಮತ್ತು ರಾಜಶಾಹಿಯಲ್ಲಿ) ಸಂಪೂರ್ಣ ನಾಶಪಡಿಸಲಾಗಿದೆ. ಇಂಥವರಿಗೆ ಬಾಬರಿ ಮಸೀದಿಯ ಒಡೆತನದ ಬಗ್ಗೆ ಚಕಾರವೆತ್ತುವ ನೈತಿಕ ಹಕ್ಕಾದರೂ ಏನಿದೆ? ಬಾಬರಿ ಮಸೀದಿ ಸಮಸ್ಯೆಯನ್ನು ಮುಂದಿಟ್ಟಾದರೂ ಮುಸ್ಲಿಂ ಸಮುದಾಯ ಕಣ್ಣು ತೆರೆಯುವಂತಾಗುವುದೇ?

ಭಾರತದಲ್ಲಿ ಒಂದು ಬಾಬರಿ ಮಸೀದಿ ಕೆಡವಲ್ಪಟ್ಟಾಗ ಮುಸ್ಲಿಮರು, ಇಷ್ಟೆಲ್ಲ ಕೋಲಾಹಲವೆಬ್ಬಿಸುತ್ತಿರುವುದನ್ನೂ ಪಾಕಿಸ್ಥಾನ ಮತ್ತು ಬಾಂಗ್ಲಾಗಳಲ್ಲಿ ಅವರೇ ಅನೇಕ ಮಸೀದಿಗಳನ್ನು ಹಾನಿಗೊಳಿಸಿರುವುದನ್ನೂ ನೋಡುವಾಗ, ಮುಸ್ಲಿಮರಿಗೆ ಮಾತ್ರ ಮಸೀದಿಗಳನ್ನು ಭಗ್ನಗೊಳಿಸುವ ಅನುಮತಿ ನೀಡಲಾಗಿದೆಯೇ ಎಂದು ಸಂಶಯವಾಗುತ್ತದೆ. ಮುಸ್ಲಿಮರಿಗೆ ಇಸ್ಲಾಂ ಧರ್ಮವು ಮಸೀದಿಗಳನ್ನು ಕೆಡವಲು ಮತ್ತು ಪವಿತ್ರ ಖುರ್‌ಆನನ್ನು ಅಪವಿತ್ರಗೊ..ಸಲು ಅನುಮತಿ ನೀಡಿದೆಯೇ? ಇವರು ಪುರಸ್ಕರಿಸುವುದು ಯಾವ ಇಸ್ಲಾಮನ್ನು? ಅಕಟಾ, ಇವರು ಇಸ್ಲಾಂ ಧರ್ಮವನ್ನು ಎಷ್ಟೊಂದು ಅಧೋಗತಿಗೆ ಇಳಿಸಿ ಬಿಟ್ಟಿದ್ದಾರೆ!

ಮುಸ್ಲಿಂ ಸಮುದಾಯದವರು ಎಷ್ಟು ಬೇಗ ಎಚ್ಚರಗೊಂಡು ತಮ್ಮ ತಪ್ಪನ್ನು ತಿದ್ದಿ ಅಲ್ಲಾಹನು ತೋರಿಸಿಕೊಟ್ಟ ಸರಿ ದಾರಿಯಲ್ಲಿ ನಡೆಯಲು ಪ್ರಯತ್ನಿಸುವರೋ ಅಷ್ಟೂ ಅವರಿಗೆ ಒಳಿತು. ಇಲ್ಲವಾದರೆ, ಭವಿಷ್ಯವಾಣಿಗಳಲ್ಲಿ ಸೂಚಿಸಲ್ಪಟ್ಟ ಪ್ರಕಾರ ಇವರು ಸಹ ಶಾಪಗ್ರಸ್ತ ಯೆಹೂದ್ಯರ ಹೆಜ್ಜೆ ಗುರುತುಗಳಲ್ಲೇ ಮುಂದುವರಿದರೆ ದೇವ ಶಾಪಕ್ಕೆ ಗುರಿಯಾಗಿ ನಾಶಹೊಂದುವುದು ಖಂಡಿತ. ಅಲ್ಲಾಹನು ಈ ಸಮುದಾಯವನ್ನು ಸರಿ ದಾರಿಯಲ್ಲಿ ನಡೆಯಿಸಲಿ – ಆಮೀನ್.

ಬಂಗ್ಲಾದೇಶದಲ್ಲಿ ಇತ್ತೀಚೆಗೆ ನಡೆದ ಪೈಶಾಚಿಕ ಆಕ್ರಮಣದ ಕುರಿತು ಅಹ್ಮದಿಯಾ ಜಮಾಅತಿನ ಖಲೀಫರವರ ಖುತ್ಬ ಪ್ರವಚನಗಳಿಂದ ಕೆಲವು ಆಯ್ದ ಭಾಗಗಳನ್ನು ಇಲ್ಲಿ ಉಲ್ಲೇಖಿಸುವುದು ಸಂದರ್ಭೋಚಿತ ವಾಗಬಹುದೆಂದು ಭಾವಿಸುತ್ತೇನೆ.

## ಖುತ್ಬ ಜುಮುಅ ದಿನಾಂಕ 6-11-92

"ಕೆಲವೇ ದಿನಗಳ ಹಿಂದೆ ಢಾಕ್ಕಾದ ಬಕ್ಷಿಬಜಾರ್‌ನಲ್ಲಿರುವ ಅಹ್ಮದಿಯಾ ಜಮಾಅತಿನ ಕೇಂದ್ರಸ್ಥಾನದ ಮೇಲೆ ಉಲಮಾಗಳ ಒಂದು ಗುಂಪು ತಮ್ಮ ಚೇಲಾಗಳೊಂದಿಗೆ ಬಂದು ಆಕ್ರಮಣ ಮಾಡಿದರು. ಅಲ್ಲಿ ಆಗ ಇದ್ದ ಅಹ್ಮದಿಯರನ್ನು ಅವರು ಚೆನ್ನಾಗಿ ಥಳಿಸಿದರು. ಕೆಲವರ ಸ್ಥಿತಿಯಂತೂ ಗಂಭೀರವಾಯಿತು. ಆದರೆ, ಅಲ್ಲಾಹನ ಅನುಗ್ರಹದಿಂದ ಜೀವಹಾನಿ ಉಂಟಾಗಲಿಲ್ಲ. ಪೈಶಾಚಿಕವಾದ ಈ ಆಕ್ರಮಣದಿಂದ ಕಟ್ಟಡ ಸಂಕೀರ್ಣವು ಸಂಪೂರ್ಣ ನಾಶವಾಯಿತು. ಉಪಕರಣಗಳನ್ನೂ ಇತರ ಸಾಧನ ಸಾಮಗ್ರಿಗಳನ್ನೂ ಅವರು ರಾಶಿಹಾಕಿ ಬೆಂಕಿಕೊಟ್ಟರು. ಪವಿತ್ರ ಖುರ್‌ಆನ್ ಬಹಳಷ್ಟು ಅಪಮಾನಿಸಲ್ಪಟ್ಟಿತು. ವಾರ್ತಾ ಪತ್ರಿಕೆಗಳಲ್ಲಿ ಪ್ರಕಟವಾದ ಫೋಟೋಗಳನ್ನು ನೋಡಿದರೆ, ಪೂರ್ಣ ಸುಟ್ಟು ಬೂದಿಯಾದ ಹಾಗೂ ಅರ್ಧಸುಟ್ಟ ಗ್ರಂಥಗಳನ್ನು ಕಾಣಬಹುದು. ಓದಲು ಸಾಧ್ಯವಾಗುವ ಅಕ್ಷರಗಳಿಂದ ಅವು ಪವಿತ್ರ ಖುರ್‌ಆನಿನ ಪ್ರತಿಗಳೆಂದು ತಿಳಿದು ಬರುತ್ತದೆ. ಶಿಥಿಲಗೊಂಡ ಹಾಳೆಗಳು ಮಣ್ಣಿನಲ್ಲಿ ಬೆರೆತು ಹೋಗಿರುವುದನ್ನೂ ಫೋಟೋಗಳು ತೋರಿಸುತ್ತವೆ. ಪಾಕಿಸ್ಥಾನದಲ್ಲಿ ನಡೆಯುತ್ತಿರುವ ರೀತಿಯಲ್ಲೇ ಬಾಂಗ್ಲಾದಲ್ಲೂ ಈ ಮೃಗೀಯ ಕೃತ್ಯ ನಡೆದಿದೆ....

"ಇವತ್ತು ಲಭಿಸಿದ ವಾರ್ತೆಯಂತೆ, ಬಾಂಗ್ಲಾ ದೇಶದ ಅಹ್ಮದಿಯಾ ಕೇಂದ್ರಸ್ಥಾನವಿರುವ 4 ಬಕ್ಷಿ ಬಜಾರ್ ಪ್ರದೇಶಕ್ಕೆ ಮತ್ತೆ ಉಲಮಾಗಳು ತಮ್ಮ ಚೇಲಾ ಸಿಬ್ಬಂದಿಗಳೊಂದಿಗೆ ಮೆರವಣಿಗೆಯಲ್ಲಿ ಬಂದರು. ಮತ್ತೂ ಬೆಂಕಿಗಾಹುತಿ ಮಾಡಲು ಕಟ್ಟಡದ ಅವಶೇಷಗಳೇನೂ ಅಲ್ಲಿ

ಉಳಿದಿರಲಿಲ್ಲ. ಅಸಭ್ಯವಾದ ಘೋಷಣೆಗಳನ್ನು ಕೂಗುತ್ತಾ ಅವರು ಅಲ್ಲಿಂದ ಮರಳಿದರು....."

"ನಾನು ಬಾಂಗ್ಲಾ ದೇಶದ ಜನರನ್ನು ಉಪದೇಶಿಸುತ್ತೇನೆ ; ಮತ ಚರಿತ್ರೆಯನ್ನು ಆಳವಾಗಿ ಅಧ್ಯಯನ ಮಾಡುವ ಸಾಮರ್ಥ್ಯವೂ ಶಕ್ತಿಯೂ ಅವರಿಗೆ ಇಲ್ಲವಾದರೆ, ಆಧುನಿಕ ಮತ ಚರಿತ್ರೆಯ ಕಡೆಗಾದರೂ ಅವರೊಮ್ಮೆ ಕಣ್ಣೋಡಿಸಿ ನೋಡಲಿ. ಅಹ್ಮದಿಯಾ ಜಮಾಅತಿನ ಕಳೆದ100 ವರ್ಷಗಳ ಜೀವಂತ ಚರಿತ್ರೆ ಅವರ ಕಣ್ಣೆದುರಿನಲ್ಲೇ ಇದೆಯಲ್ಲವೇ. ಬಾಂಗ್ಲಾ ದೇಶದ ಈಗಿನ ಪ್ರಧಾನ ಮಂತ್ರಿಯವರು ಈ ಗೂಢಾಲೋಚನೆಯಲ್ಲಿ ಭಾಗಿಯಾಗಿದ್ದರೆ, ಈ ಹಿಂದೆ ಅಹ್ಮದಿಯಾ ಜಮಾಅತಿನೊಡನೆ ಈ ರೀತಿ ವರ್ತಿಸಿದ ಆಡಳಿತಾಧಿಕಾರಿಗಳ ಮೇಲೆ ಅಲ್ಲಾಹನ ವಿಧಿ ಯಾವ ರೀತಿ ಉಂಟಾಗಿದೆ ಎಂಬುದನ್ನು ಅವರು ಯೋಚಿಸಬೇಕಾಗಿದೆ.....

"ಆದುದರಿಂದ ಕಣ್ಣುಗಳನ್ನು ತೆರೆಯಿರಿ. ಜಾಗರೂಕರಾಗಿರಿ! ಏನಾದರೂ ತಪ್ಪು ಆಗಿ ಹೋಗಿದ್ದಲ್ಲಿ ಪಶ್ಚಾತ್ತಾಪಪಟ್ಟು ತಪ್ಪನ್ನು ಸರಿಪಡಿಸಿಕೊಳ್ಳಲು ಈಗ ಕಾಲಾವಕಾಶವಿದೆ. ಆದುದರಿಂದ ಕ್ಷಮಾಯಾಚನೆ ಮಾಡಿರಿ. ಅಲ್ಲದೆ, ವೃಥಾ ದೌರ್ಜನ್ಯದ ಹಾದಿ ಹಿಡಿದು ಅಕ್ರಮಿಗಳಿಗಾಗಿ ಅಲ್ಲಾಹನು ನಿರ್ಣಯಿಸಿಟ್ಟಿರುವ ಅಂತ್ಯವನ್ನು ಸ್ವಾಯತ್ತ ಮಾಡಿಕೊಳ್ಳಬೇಡಿರಿ."

## ಖುತ್ಬ ಜುಮುಅ ದಿನಾಂಕ 4-12-92

"ಇದೀಗ ಬಾಂಗ್ಲಾ ದೇಶದಿಂದ ಲಭಿಸಿದ ವಾರ್ತೆಯಂತೆ ಅಲ್ಲಿ ರಾಜಶಾಹಿ ಎಂಬಲ್ಲಿ ನಿರ್ಮಾಣದ ಕೊನೆ ಹಂತಕ್ಕೆ ತಲಪಿದ್ದ ಅಹ್ಮದಿಯಾ ಮಸೀದಿಯನ್ನು ಮುಲ್ಲಾಗಳು ಮತ್ತು ಅವರ ಸಿಬಂದಿಗಳನ್ನೊಳಗೊಂಡ 1500 ಜನರ ಗುಂಪೊಂದು ಆಕ್ರಮಣ ಮಾಡಿ ಮಸೀದಿಯನ್ನು ಒಡೆದು ಕೆಡವಿದರು. ಅಷ್ಟೇ ಅಲ್ಲ, ಅದರ ತಳಪಾಯವನ್ನು ಸಹ ಅಗೆದು ಕಲ್ಲುಗಳನ್ನು ತೆಗೆದುಕೊಂಡು ಹೋದರು. ಹಝ್ರತ್ ಮುಹಮ್ಮದ್ ಪೈಗಂಬರ್ (ಸ)ರವರ ಅಮಾನತ್ತು ಸಂರಕ್ಷಣೆಯ ಹೊಣೆ ಹೊತ್ತವರು ಈ ಭಾಗ್ಯಹೀನ ಮಂದಿ! ಅಲ್ಲಾಹನ ಗೃಹವನ್ನು ಕೊಳ್ಳೆ ಹೊಡೆದು, ಅದನ್ನು ಕೆಡವಿ ಧ್ವಂಸ ಮಾಡಿ, ಅದರ ಪ್ರತಿಯೊಂದು ಇಟ್ಟಿಗೆಯನ್ನೂ ಕಲ್ಲನ್ನೂ ಕದ್ದು ಕೊಂಡೊಯ್ದ ಇವರೂ ಅಮಾನತ್ತು ಸಂರಕ್ಷಕರೇ? ಇವರನ್ನು ಅಲ್ಲಾಹನೇ ನೋಡಿಕೊಳ್ಳುವನು!"

"ಅಕ್ರಮಿಗಳೂ ದ್ರೋಹಿಗಳೂ ಆದ ಈ ಜನರ ಕುರಿತು ಕೋಪದಿಂದ ಕಠೋರ ಪದಗಳನ್ನು ಉಪಯೋಗಿಸಲು ಮನಸ್ಸಾಗುತ್ತದೆ. ಆದರೆ, ಸಹನೆಯಿಂದಲೂ ತಾಳ್ಮೆಯಿಂದಲೂ ಇರಲು ನಮಗೆ ಉಪದೇಶ ನೀಡಲ್ಪಟ್ಟಿರುತ್ತದೆ. ಹಝ್ರತ್ ಮುಹಮ್ಮದ್ ಪೈಗಂಬರ್(ಸ)ರವರು ಈ ಕಾಲದ ಉಲಮಾಗಳನ್ನು ನಮಗೆ ಪರಿಚಯಿಸಿಕೊಟ್ಟಿರುತ್ತಾರೆ - "ಶರ್ರುಮನ್ ತಹತ ಅದೀಮಿಸ್ಸಮಾಇ"ಎಂದು. ಅಂದರೆ, ಇದರ ಅರ್ಥ ಅವರು ಮನುಷ್ಯರಲ್ಲಿ ನಿಕೃಷ್ಟರಾಗಿರುವರು ಎಂದಲ್ಲ; ಬದಲಾಗಿ, ಆ ಕಾಲದಲ್ಲಿ ಆಕಾಶದ ಕೆಳಗೆ ಇರುವ ಸಮಸ್ತ ಜೀವಿಗಳಲ್ಲೂ ಅತ್ಯಂತ ಅಧಮರು ಎಂದು. ಆದುದರಿಂದ ಇವರನ್ನು ನಾವು ಬೈಯ್ಯಬೇಕಾದ ಅಗತ್ಯವಿಲ್ಲ. ಇವರು ಎಂಥವರೆಂಬ ಬಗ್ಗೆ ಉಮ್ಮತ್ತಿನ ನಾಯಕರೂ ಯಜಮಾನರೂ ಆದ ನಬಿವರ್ಯರೇ ವಿವರಿಸಿರುತ್ತಾರೆ. ಆದುದರಿಂದ ಅವರ ದುಷ್ಟ ಹಿಡಿತದಲ್ಲಿ ಒಳಪಟ್ಟು ದುಷ್ಟ ಕೃತ್ಯಗಳಲ್ಲಿ ಅವರೊಡನೆ ಭಾಗಿಗಳಾಗುವ ಜನಸಾಮಾನ್ಯರು ಯೋಚಿಸಬೇಕಾಗಿದೆ; ಏನು, ಈ ನಿಕೃಷ್ಟ ಜಂತುಗಳ ನೇತೃತ್ವದಲ್ಲಿ ನಾವು ಅನ್ಯಾಯ, ಅಕ್ರಮಗಳನ್ನೂ ಅನಾಗರಿಕ ಕಿರಾತ ಕೃತ್ಯಗಳನ್ನೂ ಮಾಡುತ್ತಿರುವುದು ಸರಿಯೇ? ಎಂದು.

"ಶರ್ರುಮನ್ ತಹತ ಅದೀಮಿ ಸ್ಸಮಾಇ" ಎಂಬುದರ ಇನ್ನೊಂದು ಅರ್ಥ - ಈ ನಿಕೃಷ್ಟರು ಜನರನ್ನು ಕೆಡುಕಿನತ್ತ ಆಮಂತ್ರಿಸುವಾಗ ಜನರು ಇವರ ಹಿಂದೆ ಸಾಗುತ್ತಾರೆ. ಆದರೆ, ಜನರಲ್ಲಿ ಒಳಿತನ್ನುಂಟು ಮಾಡಲು ಹಾಗೂ ಅವರಿಂದ ಒಳಿತನ್ನು ಮಾಡಿಸಲು ಇವರಿಗೆ ಯಾವ ಶಕ್ತಿಯೂ ಇರುವುದಿಲ್ಲ. ಮತ್ತೆ ಬೇರೆ ಯಾರಾದರೂ ಇವರನ್ನು ಒಳಿತಿನ ಕಡೆಗೆ ಕರೆಯುವರಾದರೆ, ಇವರು ತಮ್ಮ ಮನೆಗಳಲ್ಲಿ ಕುಳಿತು ಬಾಗಿಲುಗಳನ್ನು ಮುಚ್ಚಿ ಬಿಡುತ್ತಾರೆ!...

"ಪಾಕಿಸ್ತಾನದ ಮತ್ತು ಬಾಂಗ್ಲಾ ದೇಶದ ಆಲಿಮ್‌ಗಳು ನಮ್ಮ ಮುಂದೆ ನಗ್ನರಾಗಿ ಪ್ರದರ್ಶಿಸಲ್ಪಟ್ಟಿರುವರು. ಪೈಗಂಬರರು(ಸ) ನೀಡಿರುವ ಈ ವಿವರಣೆಯ ವೃತ್ತದಿಂದ ಹೊರಬರಲು ಅವರಿಗೆ ಸಾಧ್ಯವಿಲ್ಲ. ಜನರನ್ನು ಅವರು ಒಳಿತಿನತ್ತ ಕರೆದರೆ ಯಾರೂ ಅವರನ್ನು ಅನುಸರಿಸುವುದಿಲ್ಲ. ಯಾಕೆಂದರೆ ಅವರು

ಅದಕ್ಕಾಗಿ ನಿಯೋಜಿಸಲ್ಪಟ್ಟವರಲ್ಲ. ಮೇಲಿನ ಪ್ರವಾದಿ ವಚನವನ್ನು ಸುಳ್ಳಾಗಿಸಲು ಯಾರಿಂದಲೂ ಸಾಧ್ಯವಿಲ್ಲ. ಕೆಡುಕು ಅವರಲ್ಲಿ ಲೀನವಾಗಿ ಹೋಗಿದೆ. ಅವರಿಂದ ಕೆಡುಕು ಮಾತ್ರವೇ ನಿರ್ಗಮಿಸುತ್ತದೆ. ಅವರಿಂದ ಒಳಿತನ್ನು ನಿರೀಕ್ಷಿಸುವುದೇ ಮೂರ್ಖತನವಾದೀತು. ಅವರು ಪ್ರಾಣ ಬಿಡುವುದು ಸಹ ಇದೇ ಕೆಡುಕಿನಲ್ಲೇ."

## ಖುತ್ಬ ಜುಮುಅ ದಿನಾಂಕ 18-12-92
## ಬಾಂಗ್ಲಾ ಸರಕಾರಕ್ಕೆ ಎಚ್ಚರಿಕೆ

"ಬಾಂಗ್ಲಾ ದೇಶದ ಈಗಿನ ಸ್ಥಿತಿಗತಿ ನಿಮ್ಮ ಮುಂದೆ ಇದೆ. ಅಲ್ಲಿಯ ಅಸಂಗತವೂ ಅನಿಸ್ಲಾಮಿಕವೂ ಆದ ನಡವಳಿಕೆಗಳಲ್ಲಿ ಸರಕಾರ ಕೂಡ ಸಹಭಾಗಿಯಾಗಿದೆ ಯೆಂದೂ ಆ ಕೃತ್ಯಗಳೆಲ್ಲ ಒಂದು ಗೂಢಾಲೋಚನೆಯ ಫಲವೆಂದೂ ನಾನು ಮೊದಲೊಂದು ಖುತ್ಬದಲ್ಲಿ ವಿವರಿಸಿದ್ದೆ. ಈಗ ಈ ದುಷ್ಕೃತ್ಯಗಳ ಹಿಂದೆ ಬಾಂಗ್ಲಾ ಸರಕಾರದ ಕೈವಾಡವಿದೆಯೆಂಬುದನ್ನು ದೃಢಪಡಿಸುವ ಸ್ಪಷ್ಟವಾದ ಸಾಕ್ಷ್ಯಾಧಾರಗಳು ನಮಗೆ ಲಭ್ಯ ವಾಗಿರುತ್ತವೆ......... ನಾನು ಇವರಿಗೆ ಉಪದೇಶ ರೂಪದಲ್ಲಿ ಒಂದು ವಿಷಯವನ್ನು ತಿಳಿಯಲಿಚ್ಛಿಸುತ್ತೇನೆ. ನಾನೊಬ್ಬ ಬಲಹೀನ ಮನುಷ್ಯ ಮಾತ್ರ! ನಾನು ಒಂದು ಜಮಾಅತಿನ ನೇತೃತ್ವ ಸ್ಥಾನದಲ್ಲಿದ್ದೇನೆ; ಅದಕ್ಕಿಂತಲೂ ಮಿಗಿಲಾಗಿ, ನಾನು ಆ ಜಮಾಅತಿನ ಓರ್ವ ವಿನೀತ ಸೇವಕನಾಗಿದ್ದೇನೆಂಬುದರಲ್ಲೇ ನನ್ನ ಸ್ಥಾನ ನೆಲೆಗೊಂಡಿರು ವುದು. ನನ್ನ ಮಾತುಗಳು ಅವರಲ್ಲಿ ಯಾವ ರೀತಿ ಪ್ರಭಾವ ಬೀರುವುದೆಂದು ನನಗೆ ತಿಳಿಯದು. ಆದರೆ ಉಪದೇಶಗಳನ್ನು ತಾಳ್ಮೆಯಿಂದ ತಲೆಬಾಗಿ ಕೇಳುವವರಾರೋ ಅವರಿಗೆಯೇ ಉಪದೇಶಗಳಿಂದ ಪ್ರಯೋಜನ ಲಭ್ಯ. ಬಾಂಗ್ಲಾ ದೇಶದ ಈಗಿನ ಆಡಳಿತಾಧಿಕಾರಿಯೊಡನೆ ನಾನು ಒಂದು ಮಾತು ಹೇಳ ಬಯಸುತ್ತೇನೆ. ನೀವು ಪುರಾತನ ಕಾಲದ ಮತ ಚರಿತ್ರೆಯನ್ನು ಅರಸಿ ಹೋಗುವ ಅಗತ್ಯವಿಲ್ಲ. ಈಗ ಅತೀ ನಿಕಟ ಪೂರ್ವದಲ್ಲಿ ಸಂಭವಿಸಿದ ಘಟನೆಗಳ ಕಡೆಗೆ ನೀವೊಮ್ಮೆ ದೃಷ್ಟಿ ಹಾಯಿಸಿದರೆ ಸಾಕು. ಅಂದರೆ, ಅಹ್ಮದಿಯಾ ಜಮಾಅತಿನೊಡನೆ ನೀವು ಈಗ ವರ್ತಿಸುತ್ತಿರುವ ರೀತಿಯಲ್ಲಿ ಯಾರೆಲ್ಲ ಈ ಹಿಂದೆ ವರ್ತಿಸಿದ್ದರೋ ಅವರ ಗತಿ ಏನಾಯಿತೆಂದು ನೀವೊಮ್ಮೆ ಕಣ್ಣು ತೆರೆದು ನೋಡಿರಿ. ಅಲ್ಲಾಹನು ಅವರನ್ನು ಅತಿ ಕಠಿಣವಾದ ಶಿಕ್ಷೆಗೆ ಗುರಿಪಡಿಸಿದನು. ಹಾಗೆ, ಅನಂತರ ಬರುವವರಿಗೆ ಅವರ ಮುಖಾಂತರ ಒಂದು ಪಾಠ ನೀಡಲಾಗಿದೆ. ನೀವೇನಾದರೂ ಅವರಂತೆ ವರ್ತಿಸಿದರೆ ನಿಮ್ಮ ಗತಿಯೂ ಹಾಗೆಯೇ ಆಗುವುದೆಂಬುದೇ ಆ ಪಾಠ.

"ಒಂದನೆಯದು ಫೈಝಲ್ ರಾಜನಿಗೆ ಬಂದೊದಗಿದ ದುರಂತ. ಲಾಹೋರಿನಲ್ಲಿ ಮುಸ್ಲಿಂ ರಾಷ್ಟ್ರಗಳ ಶೃಂಗ ಸಭೆ ಸೇರಿದಾಗ, ಅಹ್ಮದಿಯಾ ಜಮಾಅತನ್ನು 'ಅಮುಸ್ಲಿಂ ಅಲ್ಪಸಂಖ್ಯಾತರು' ಎಂದು ಘೋಷಿಸಲು ನಡೆಸಿದ ಗೂಢಾಲೋಚನೆಗೆ ಅವರು ಮುಂದಾಳುತ್ವ ವಹಿಸಿ ಅಂದಿನ ಪಾಕ್ ಪ್ರಧಾನಿ ಭುಟ್ಟೋಗೆ ಆ ವಿಷಯದಲ್ಲಿ ಸಂಪೂರ್ಣ ಸಹಕಾರ ನೀಡಿದ್ದರು. ಅದರ ಫಲವಾಗಿ ಅವರ ಅಂತ್ಯ ಹೇಗುಂಟಾಯಿತು? ಆ ರೀತಿಯ ಒಂದು ದುರಂತ ಆ ಮೊದಲು ಯಾರಾದರೂ ಸೌದಿ ರಾಜರಿಗೆ ಉಂಟಾಗಿತ್ತೇ? ಅದು ಒಂದು ಅಸಾಮಾನ್ಯ ದೃಷ್ಟಾಂತವಾಗಿತ್ತು. ಅದರ ನಂತರ ಭುಟ್ಟೋರ ಸರದಿ ಬಂತು. ಅವರಿಗೆ ನಾನು ಖಾಸಗಿಯಾಗಿಯೇ ಬಹಳಷ್ಟು ಉಪದೇಶ ಮಾಡಿದೆ. ಆದರೆ, ಅನೇಕ ವ್ಯೂಹಗಳಲ್ಲಿ ಒಳಪಟ್ಟು ಬಹಳಷ್ಟು ಒತ್ತಡದಲ್ಲಿದ್ದ ಆ ಮನುಷ್ಯ ನಾನು ಹೇಳಿದ ಮಾತುಗಳೊಂದನ್ನೂ ಕಿವಿಗೆ ಹಾಕಿಕೊಳ್ಳಲಿಲ್ಲ. ಅವರಿಗೆ ಬಂದೊದಗಿದ ದುರಂತವೂ ನಿಮ್ಮ ಮುಂದೆ ಉಂಟು. ಅದಕ್ಕೆ ಮೊದಲು ಪಾಕಿಸ್ಥಾನದ ಯಾರಾದರೂ ಆಡಳಿತಾಧಿಕಾರಿಗೆ ಆ ರೀತಿಯ ಶಿಕ್ಷೆ ಲಭಿಸಿದ್ದುಂಟೇ? ಅದರ ನಂತರ ಝಿಯಾವುಲ್ ಹಕ್‌ರ ಸರದಿ ಬಂತು. ಅವರಿಗಾದರೆ ನಾನು ಭುಟ್ಟೋಗೆ ನೀಡಿದ ರೀತಿಯಲ್ಲಿ ವೈಯಕ್ತಿಕವಾಗಿ ಮುಖತಃ ಉಪದೇಶ ನೀಡಲಿಲ್ಲ. ಬದಲಾಗಿ, ಸಮಸ್ತ ಲೋಕಕ್ಕೆ ತಿಳಿಯುವ ರೀತಿಯಲ್ಲಿ ಖುತ್ಬಗಳ ಮೂಲಕ ಬಹಿರಂಗವಾಗಿ ಎಚ್ಚರಿಕೆ ನೀಡಿದೆ. ನಾನವರಿಗೆ ಹೇಳಿದೆ - 'ಚರಿತ್ರೆ ಪುನರಾವರ್ತಿಸುತ್ತಿದೆ. ತನ್ನ ಇಷ್ಟ ದಾಸರ ವಿರುದ್ಧ ಅನ್ಯಾಯದಿಂದ ವರ್ತಿಸುವವರನ್ನು ಅಲ್ಲಾಹನ ವಿಧಿ ಸುಮ್ಮನೆ ಬಿಡಲಿಲ್ಲ ಎಂದು ಚರಿತ್ರೆ ತಿಳಿಸಿಕೊಡುತ್ತದೆ. ಆದುದರಿಂದ ನಿಮ್ಮ ಮೇಲೂ ಅದೇ ವಿಧಿ ಜಾರಿಯಾಗುವುದು'. ಈ ರೀತಿ ನಾನವರನ್ನು ಎಚ್ಚರಿಸಿದೆ. ಹಿಂದಿನ ರಾತ್ರಿ ಅಲ್ಲಾಹು ನನಗೆ ತಿಳಿಸಿಕೊಟ್ಟಿರುವು

ದಾಗಿಯೂ ನಾನವರೊಡನೆ ಹೇಳಿದೆ. ಅದೇ ರೀತಿಯಲ್ಲೇ ಮುಂದಿನ ಶುಕ್ರವಾರ ಬರುವುದರ ಮೊದಲಾಗಿ ಆಕಾಶದಲ್ಲಿ ಅವರ ವಿಮಾನ ಸ್ಫೋಟಗೊಂಡು ನುಚ್ಚು ನೂರಾಯಿತು. ಅದರೊಂದಿಗೆ ಅವರ ಎಲ್ಲ ಅಹಂಭಾವವೂ ಅಹಂಕಾರವೂ ಅಡಗಿ ಹೋಯಿತು. ಆ ಮನುಷ್ಯ ಚಿಂದಿ ಚಿಂದಿಯಾಗಿ ಧೂಳೀಕರಿಸಲ್ಪಟ್ಟರು.

"ಹೀಗೆ, ಹತ್ತಿರದ ಕಾಲದಲ್ಲೇ ಈ ಮೂರು ಸಂಭವಗಳು ನಡೆದಿವೆ. ಅವರಾರಿಗೂ ಅಲ್ಲಾಹನ ಹಿಡಿತದಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಅಹ್ಮದಿಯಾ ವಿರುದ್ಧ ಆಂದೋಲನಗಳಿಗೆ ಕರೆಕೊಟ್ಟವರೂ ಅಹ್ಮದೀಯರನ್ನು ಮುಸ್ಲಿಮೇತರ ಅಲ್ಪಸಂಖ್ಯಾತರೆಂದು ಸಾರುವುದರಲ್ಲಿ ಮುಂಚೂಣಿಯಲ್ಲಿ ನಿಂತವರೂ ಈ ಮೂರು ಗಣ್ಯ ವ್ಯಕ್ತಿಗಳಾಗಿದ್ದರು. ವಾಸ್ತವದಲ್ಲಿ ಇವರು "ಮುಜಾಹಿದೆ ಮಿಲ್ಲತ್" (ಸಮುದಾಯಕ್ಕಾಗಿ ಸಮರ ಹೂಡಿದವರು) ಆಗಿದ್ದಲ್ಲಿ, ಅಲ್ಲಾಹನ ತೃಪ್ತಿಗಾಗಿಯೂ ಅಲ್ಲಾಹನ ದೀನಿಗಾಗಿಯೂ ಪ್ರವಾದಿ ಸಲ್ಲಲ್ಲಾಹು ಅಲೈಹಿವ ಸಲ್ಲಮರ ಮೇಲಿನ ಪ್ರೀತಿ ಆದರಗಳ ಕಾರಣದಿಂದಾಗಿಯೂ ಅವರು ಹೀಗೆಲ್ಲ ಮಾಡಿದ್ದಲ್ಲಿ, ಅವರನ್ನು ಈ ರೀತಿ ಅಲ್ಲಾಹನು ಕಠೋರ ಶಿಕ್ಷೆಗೆ ಗುರಿಪಡಿಸುತ್ತಿದ್ದನೇ? ನಿಶ್ಚಯವಾಗಿಯೂ ಅವರೆಲ್ಲ ಅಲ್ಲಾಹನ ಅಸಾಮಾನ್ಯ ವಿಧಿಲೀಲೆಯ ಜ್ವಲಂತ ಉದಾಹರಣೆಗಳಾಗಿ ಮಾರ್ಪಟ್ಟರು. ಯಾವನೇ ಪಾಕಿಸ್ಥಾನ್ ಆಡಳಿತಾಧಿಕಾರಿಯೂ ಅದುವರೆಗೆ ನೇಣುಗಂಬಕ್ಕೇರಿದ ಉದಾಹರಣೆಯಿಲ್ಲ. ಇದುವರೆಗೂ ಯಾವ ಪಾಕ್ ಆಡಳಿತಾಧಿಕಾರಿಯೂ ಈ ರೀತಿ ವಿಮಾನ ಸ್ಫೋಟಗೊಂಡು ಚಿಂದಿ ಚಿಂದಿಯಾಗಿ ಬೆಂದು ಹೋದುದಿಲ್ಲ. ಸೌದಿ ಅರೇಬಿಯಾದ ಯಾವ ರಾಜನೂ ಈ ರೀತಿ ಬಂಧುಗಳ ಕೈಯಿಂದಲೇ ಅಪಮಾನಿತನಾಗಿ ವಧಿಸಲ್ಪಟ್ಟದ್ದಿಲ್ಲ. ಬಾಂಗ್ಲಾದೇಶದ ಈಗಿನ ಪ್ರಧಾನಮಂತ್ರಿ ಈ ಮೂರನ್ನು ನಾಲ್ಕು ಮಾಡಲು ಬಯಸುವರಾದರೆ ಅದು ಅವರ ಇಚ್ಛೆ! ಅವರನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ. ಆದರೆ, ಅವರು ಚೆನ್ನಾಗಿ ನೆನಪಿಟ್ಟುಕೊಳ್ಳಲಿ, ಅಲ್ಲಾಹನ ವಿಧಿಯನ್ನು (ತಖ್‌ದೀರ್) ಬದಲಾಯಿಸ ಬಲ್ಲವರು ಯಾರೂ ಇಲ್ಲ. ನೀವು ಏನನ್ನು ಬೇಕಾದರೂ ಮಾಡಿಕೊಳ್ಳಿರಿ. ಅಲ್ಲಾಹನ ತಖ್‌ದೀರ್ ನಿಶ್ಚಯವಾಗಿಯೂ ನಿಮ್ಮನ್ನು ಆವರಿಸುವುದು. ನಿಮ್ಮನ್ನು ಅವನು ಬಿಟ್ಟು ಬಿಡುವನೆಂದು ನೀವು ಭಾವಿಸುವುದು ಬೇಡ.

"ಇದು ನನ್ನ ವಿನಮ್ರ ಉಪದೇಶ ಮಾತ್ರ. ಅಲ್ಲಾಹನು ನನಗೆ ನಿಮ್ಮ ಕುರಿತು ತಿಳಿಸಿಕೊಟ್ಟಿರುವ ಮೇರೆಗೆ ನಾನು ನಿಮಗೆ ನೀಡಿದ ಎಚ್ಚರಿಕೆಯಲ್ಲ ಇದು. ಮೇಲೆ ವಿವರಿಸಿದ ಮೂರು ಸಂಭವಗಳ ಬೆಳಕಿನಲ್ಲಿ ಸುವ್ಯಕ್ತವಾದ ದೇವವಿಧಿಯ ಕುರಿತು ನಿಮ್ಮನ್ನು ನಾನು ಜಾಗೃತಗೊಳಿಸಿದ್ದೇನೆ. ಆದುದರಿಂದ ನೀವು ಅಲ್ಲಾಹನಿಗೆ ಭಯಪಟ್ಟು ಅತಿಹೆಚ್ಚು ಇಸ್ತಿಗ್‌ಫಾರ್ ಮತ್ತು ತೌಬ(ಪಾಪ ವಿಮುಕ್ತಿಗಾಗಿ ಪ್ರಾರ್ಥನೆ ಮತ್ತು ಪಶ್ಚಾತ್ತಾಪ) ಮಾಡಿರಿ. ನೀವು ನಿಮ್ಮ ದೇಶವನ್ನು, ಬರಲಿರುವ ಮಹಾ ವಿಪತ್ತಿನಿಂದ ಸಂರಕ್ಷಿಸಿರಿ. ಅಲ್ಲಾಹನು ನಿಮಗೆ ಆ ಸೌಭಾಗ್ಯ ನೀಡಲಿ — ಆಮೀನ್." ★

**"ಇನ್ಸಾನಿಯತ್ ಝಿಂದಾಬಾದ್"**

**ಮಾನವೀಯತೆ ಚಿರಕಾಲ ಬಾಳಲಿ.**

## Statement about Ownership and other particulars about the Newspaper YUGARASHMI Quarterly

**[FORM IV See Rule 8]**

| | | |
|---|---|---|
| 1. Place of publication | ... | Mangalore |
| 2. Period of its publication | ... | Quarterly |
| 3. Printer's name | ... | Muhammed Yusuf |
| Whether citizen of India ? | ... | Yes |
| Address | ... | Jubilee Printing Press<br>10-23-1008/1 Ansari Road, Bunder,<br>Mangalore-575 001 |
| 4. Publisher's name | ... | Muhammad Yusuf |
| Whether citizen of India ? | ... | Yes |
| Address | ... | 10-23-1008/1 Ansari Road, Bunder,<br>Mangalore-575 001 |
| 5. Editor's name | ... | Muhammad Yusuf |
| Whether citizen of India? | ... | Yes |
| Address | ... | 10-23-1008, Ansari Road, Bunder,<br>Mangalore-575 001 |
| 6 Name and addresses of individuals who own the newspaper and partners or shareholders holding more than one percent of the capital | | Jamath Ahmadiyya,<br>10-23,1008/1 Ansari Road, Bunder,<br>Mangalore-575 001. |

I, Muhammad Yusuf hereby declare that the particulars given above are true to the best of my knowledge and belief.

*Sd/*

Date : 1-12-1992

**Muhammad Yusuf**

ದೇವಾಸ್ತಿತ್ವವನ್ನು ರುಜುಗೊಳಿಸುವ, ಮತಗಳ ಆವಶ್ಯಕತೆಯನ್ನು ಸಾರುವ, ಆಧ್ಯಾತ್ಮಿಕ ಜ್ಞಾನವನ್ನು ಜನರ ಹೃದಯಗಳಲ್ಲಿ ಮೂಡಿಸುವ ಒಂದು ಉತ್ಕೃಷ್ಟ ತ್ರೈಮಾಸ ಪತ್ರಿಕೆ–

# ಯುಗರಶ್ಮಿ

ಯಥಾರ್ಥ ಇಸ್ಲಾಂ ಮತ್ತು ಅಹ್ಮದಿಯಾ ಸಂಘಟನೆಯ ಸೇವೆಗಾಗಿ ಮೀಸಲಾಗಿರಿಸಿದ "ಯುಗರಶ್ಮಿ" ತ್ರೈಮಾಸಿಕವು ವಿವಿಧ ಮತಗಳ ತುಲನಾತ್ಮಕ ಪಠನಾಸಕ್ತರಿಗೆ ಒಂದು ಉತ್ತಮ ಪತ್ರಿಕೆಯಾಗಿದೆ.

ದೇವಾಸ್ತಿತ್ವ, ಇತರ ಮತ ಮತ್ತು ಮತಾಚಾರ್ಯರ ಕುರಿತು ಇಸ್ಲಾಮಿನ ವೀಕ್ಷಣೆ, ಕೋಮು ಸೌಹಾರ್ದದ ಮಾರ್ಗಗಳು, ಇಸ್ಲಾಮಿನ ತತ್ವೋಪದೇಶಗಳು, ಮಾನವ ಕುಲದ ಏಳಿಗೆಗೆ ಇಸ್ಲಾಮಿನ ಕೊಡುಗೆ, ಇಂದಿನ ಆಧ್ಯಾತ್ಮಿಕ ಅಧಃಪತನ ಮತ್ತು ಪುನರುಜ್ಜೀವನ ಮಾರ್ಗಗಳು ಮೊದಲಾದ ವಿಷಯಗಳ ಕುರಿತು ಲೇಖನ ಪರಾಮರ್ಶೆಗಳನ್ನು ಈ ಪತ್ರಿಕೆಯ ಪ್ರತಿ ಸಂಚಿಕೆಯಲ್ಲೂ ಕಾಣಬಹುದು.

ಬಿಡಿ ಪ್ರತಿ : ರೂ. 3-00

ವಾರ್ಷಿಕ ಚಂದಾ : ರೂ. 12-00

ಅಂಚೆ ಮೂಲಕ : ರೂ. 14-00

ವ್ಯವಹರಿಸಿರಿ :

The Editor
**YUGARASHMI** Kannada Quarterly
10-23-1008/1, Ansari Road
Bunder, Mangalore-575 001

### ಯುಗರಶ್ಮಿಯ ಪೋಷಕರಾಗಿ ದೇಣಿಗೆ ನೀಡಿದ ಮಹನೀಯರು

| | ರೂ. |
|---|---|
| ಜನಾಬ್ ನಾಸಿರ್ ಅಹ್ಮದ್ ಸಾಹೇಬ್, ಮೊಗ್ರಾಲ್ | 1,200 |
| ,, ಕೆ. ಕೆ. ಬದ್ರುದ್ದೀನ್ ಸಾಹೇಬ್, ಬಜ್ಪೆ | 1,000 |
| ,, ಕೆ. ಎಂ. ಆಲಿ ಸಾಹೇಬ್, ಹಳೆಯಂಗಡಿ | 500 |
| ,, ಮಸ್‌ಊದ್ ಅಹ್ಮದ್ ಸಾಹೇಬ್, ಪಯಂಗಾಡಿ | 300 |
| ,, ಯು. ಎಸ್. ಮಾಹಿನ್ ಕುಞ್ಞಿ ಸಾಹೇಬ್, ಪುತ್ತೂರು | 100 |

Regd. with the Registrar of Newspapers for India Regd. No. R N. 27354/75
YUGARASHMI Kannada Quarterly, December 1992/Fatah 1371


# ಸ್ಟಾಂಡರ್ಡ್ ಟೈಲರಿ

ಕಡೂರು, ಚಿಕ್ಕಮಗಳೂರು ಜಿಲ್ಲೆ

## ರಾಜಾ ಮಾರ್ಕಿನ ಹಂಚುಗಳು

ಚಾವಣಿ ಹಂಚು, ಮೂಲೆ ಹಂಚು, ಗೋಡೆ ಹಂಚು, ಹಾಸು ಹಂಚು, ಮೆತ್ತಡ ಹಂಚು, ಆಲಂಕಾರಿಕ ಹಂಚು, ಮೊದಲಾದ ಎಲ್ಲ ತರದ ಆವೆಮಣ್ಣಿನ ಉತ್ಪನ್ನಗಳು ದೊರೆಯುತ್ತವೆ.

# STANDARD TILERY

**KADUR**

**CHICKMAGALUR DISTRICT**

# RAJA MARK

Roofing Tiles, Ridges, Wall Tiles, Span Tiles
Floorings, Decorative Tiles, Ceilings, Etc., Etc.

## ALL CLAY PRODUCTS AVAILABLE


Edited and Published by Muhammad Yusuf on behalf of Jamath Ahmadiyya at 10-23-1008/1 Ansari Road, Bunder, Mangalore-575001. Phone: 32039, Printed at Jubilee Printing Press, Ansari Road, Bunder, Mangalore-575 001.